UNIVERSAL
LIBRARY
OU_198705
UNIVERSAL
LIBRARY

OSMANIA UNIVERSITY LIBRARY

Call No. K925 S41R Accession No. K169

Author [illegible]

Title [illegible]

This book should be returned on or before the dat last marked below.

ಕುಸುಮಾಂಜಲಿ ಗ್ರಂಥಮಾಲಾ

ಕುಸುಮ ೧೯

# ಜಾರ್ಜ್ ಸ್ಟೆಫೆನ್ಸನ್

ಯಂ. ರಾಮರಾವ್

ಸುಬೋಧ ಪ್ರಕಟನಾಲಯ
ಬೆಂಗಳೂರು ನಗರ.

॥ ಶ್ರೀರಾಮ ಸಹಾಯಂ ॥

# ಸುಬೋಧ ಕುಸುಮಾಂಜಲಿ ಗ್ರಂಥಮಾಲಾ

## (ಸಚಿತ್ರ ಮಾಸಪುಸ್ತಕಾವಳಿ)

**ಮುನ್ನುಡಿ:—**

ಈಗಿನ ಕಾಲದಲ್ಲಿ ಹೊಗೇಗಾಡಿಯನ್ನೂ, ಹೊಗೇಯಂತ್ರಗಳನ್ನೂ ತಿಳಿಯುದವರಾರು? ನಾವು ಸಾಮಾನ್ಯವಾಗಿ ಹೊಗೇಗಾಡಿಯೆಂದು ಯಾವ ಯಂತ್ರ ವಿಶೇಷವನ್ನು ಕುರಿತು ಹೇಳುತ್ತೇವೋ, ಅದನ್ನು ಹಾಗೆ ಕರೆಯುವುದು ತಪ್ಪು - ಅದನ್ನು ನ್ಯಾಯವಾಗಿ ಹಬೆಯಗಾಡಿ, ಹಬೆಯಯಂತ್ರ ಎಂಬ ಹೆಸರಿನಿಂದ ಕರೆಯಬೇಕು. ಏಕೆಂದರೆ ಅದು ಹಬೆಯ ಬಲದಿಂದಲೇ ಓಡುತ್ತಿದೆ. ಹಬೆಯ ಶಕ್ತಿಯು ಎಷ್ಟೆಂಬುದನ್ನು ಅರಿಯದಿದ್ದ ಕಾಲದಲ್ಲಿ, ಮನುಷ್ಯನು ಪ್ರತಿಯೊಂದು ಕೆಲಸವನ್ನೂ ತಾನೇ ಸ್ವತಃ ಕೈಮುಟ್ಟಿ ಮಾಡಬೇಕಾಗಿದ್ದಿತು. ಇದರಿಂದ ಯಾವುದೊಂದು ಕೆಲಸವೂ ಬಹು ನಿದಾನವಾಗಿ ನಡೆಯುತ್ತಿದ್ದಿತು ; ಮಾತ್ರವಲ್ಲ - ಯಾವ ಕಾರ್ಯವನ್ನೂ ಈಗಿನಂತೆ ಅಗಾಧ ಪ್ರಮಾಣದಿಂದ ಮಾಡಲಾಗುತ್ತಿರಲಿಲ್ಲ. ಹಬೆಯ ಶಕ್ತಿಯನ್ನೂ, ಅದನ್ನು ವ್ಯಾಪಾರ ಮತ್ತು ಕೈಗಾರಿಕೆಗಳ ಅಭಿವೃದ್ಧಿಗೆಂದು ಉಪಯೋಗಿಸುವ ಮರ್ಮವನ್ನೂ ಕಂಡುಹಿಡಿದುದರಿಂದಲೇ ಲೋಕವು ಈಗಿರುವ ಸ್ಥಿತಿಯಲ್ಲಿ ಇಂದು ಇರಲು ಸಾಧ್ಯವಾಗಿದೆಯೆಂದರೆ ಆದರಲ್ಲಿ ಅತ್ಯುಕ್ತಿಯಿಲ್ಲ. ಹಬೆಯಿಂದ ಲೋಕಕ್ಕಾದ ಅತ್ಯಗಾಧ ಪ್ರಯೋಜನವೆಂದರೆ ಪ್ರಯಾಣ ಸೌಕರ್ಯವನ್ನು ಹೆಚ್ಚಿಸಿದುದು. ಹಬೆಯಗಾಡಿಯು ರಚನೆಯಾಗಿ - ಮೊದಲನೆಯ ಬಾರಿ ಪ್ರಯಾಣಕ್ಕಾಗಿ ಉಪಯೋಗಿಸಲ್ಪಟ್ಟು ಇನ್ನೂ ಕೇವಲ ಒಂದೇ ಒಂದು ಶತಮಾನವಾಯಿತು. ೧೮೩೦ನೆಯ ಇಸವಿಯಲ್ಲೇ ಪ್ರಾರಂಭಕ್ಕೆ ಇಂಗ್ಲೆಂಡಿನಲ್ಲಿ ಮ್ಯಾಂಚೆಸ್ಟರ್ ಮತ್ತು ಲಿವರ್ಪೂಲ್ ಎಂಬ ಪಟ್ಟಣಗಳ ಮಧ್ಯೆ ಈ ಗಾಡಿಯನ್ನು ನಡೆಯಿಸಿದರು. ಈ

ಒಂದು ನೂರು ಸಂವತ್ಸರ ಕಾಲದಲ್ಲಿ. ಕೇವಲ ಪ್ರಯಾಣ ಸೌಕರ್ಯವನ್ನು ಹೆಚ್ಚಿಸುವುದೆಂಬ ಈ ಒಂದು ವಿಚಾರದಲ್ಲಿ ನಡೆದಿರುವ ಅಭಿವೃದ್ಧಿಯನ್ನು ಗಮನಿಸಿದರೇ, ಅದ್ಭುತವೆನ್ನಿಸುವಂತಿದೆ! ಈ ಒಂದು ಶತಮಾನಕಾಲದೊಳಗಾಗಿಯೇ ಬೈಸಿಕಲ್, ಮೋಟಾರ್‌ಗಾಡಿ, ಹಬೆಯುಜಹಜು, ಆಕಾಶ ವಿಮಾನ ಮುಂತಾದುವು ಉತ್ಪನ್ನವಾದುದು! ಈಚೆಗೆ ವಿದ್ಯುಚ್ಛಕ್ತಿಯ ಉಪಯೋಗವನ್ನು ಅರಿತ ತರುವಾಯ, ಪ್ರಯಾಣಕ್ಕೂ ಯಂತ್ರರಚನಾ ಸಾಮಗ್ರಿಗಳ ಅಭಿವೃದ್ಧಿಗೂ ಆಗಿರುವ ಸಹಾಯವನ್ನು ವರ್ಣಿಸುವುದಂತೂ ಅಸಾಧ್ಯವೆನ್ನಿಸುವಂತಿದೆ. ಗಂಟೆಗೆ, ಆಗ ಪ್ರಾರಂಭದಲ್ಲಿ ಕೇವಲ ೨೫-೨೭ ಮೈಲುಗಳಂತೆ ಓಡುವಿಕೆಯನ್ನೇ ಪರಮಾಶ್ಚರ್ಯವನ್ನಾಗಿ ಕಾಣುತ್ತಿದ್ದ ಲೋಕವು, ಈ ಒಂದೇ ಒಂದು ಶತಮಾನದಲ್ಲಿ ಗಂಟೆಗೆ ೩೫೦ ಮೈಲುಗಳಂತೆ ಪ್ರಯಾಣಮಾಡುವ ಸೌಕರ್ಯವೊದಗುವುದೆಂದು ಕನಸಿನಲ್ಲೂ ಕಂಡಿರಲಿಲ್ಲ. ಈ ಅಗಾಧ ಕಾರ್ಯವು, ಪಾಶ್ಚಾತ್ಯರ ದೃಢಪ್ರಯತ್ನ ಶೀಲತೆ, ಕಷ್ಟನಷ್ಟಗಳಿಗಂಜದೆ ಕೈಕೊಂಡ ಕಾರ್ಯದ ಸಾಧನೆಯಲ್ಲೇ ಮುಂದರಿವ ಅವರ ದುರ್ದಮನೀಯ ದೀಕ್ಷೆ, ಧೈರ್ಯಸಾಹಸಗಳು ಮುಂತಾದುವುಗಳನ್ನು ಸಹಸ್ರ ಮುಖಗಳಿಂದ ಹೊಗಳುವಂತಿದೆ.

ಇದಂತಿರಲಿ, ಹಬೆಯುಯಂತ್ರ ರಚನೆಮಾಡಿ, ಅವನ್ನು ಪ್ರಾರಂಭಕ್ಕೆ ಉಪಯೋಗಿಸುವ ಸ್ಥಿತಿಯವರೆಗೆ ಸಂಪೂರ್ಣಗೊಳಿಸಿ ನಡೆಯಿಸಿದ ಕೀರ್ತಿಯು ನಮ್ಮ ಕಥಾನಾಯಕನಿಗೆ ಸೇರಿದುದು. ಪ್ರಾರಂಭದಲ್ಲಿ ಆತನಿಗೆ ಒದಗಿದ ಕಷ್ಟಗಳೂ, ನಷ್ಟಗಳೂ, ಅಪೂರದರ್ಶಿಗಳಾದ ಸಹವಾಸಿಗಳು ಮೇಲೆ ಮೇಲೆ ಆ ಕಾರ್ಯಾಭಿವೃದ್ಧಿ ಮಾರ್ಗದಲ್ಲಿ ತಂದೊಡ್ಡುತ್ತಿದ್ದ ವಿಘ್ನಗಳೂ ಅಸಹನೀಯವಾಗಿದ್ದುವು. ಅವುಗಳನ್ನು ನಮ್ಮ ಕಥಾನಾಯಕನು ಮನಸ್ಸಿಗೇ ತಂದುಕೊಳ್ಳದೆ. ತನ್ನ ಲಕ್ಷ್ಯವನ್ನು-ಗುರಿಯನ್ನು ಕುರಿತು ಮುಂದರಿಸುವಿಕೆಯನ್ನೇ ತನ್ನ ಪ್ರಥಮ ಕರ್ತವ್ಯವನ್ನಾಗಿಟ್ಟುಕೊಂಡು ನಡೆದು ತನ್ನ ಮೂಲಕ ಲೋಕಕ್ಕೆ ನಡೆಯಬೇಕಾಗಿದ್ದ ಆ ಒಂದು ಸೇವೆಯನ್ನು ಸಾರ್ಥಕರೀತಿಯಿಂದ ನಡೆಯಿಸಿ ಧನ್ಯತೆಯನ್ನು ಹೊಂದಿದನು. ಲೋಕದಲ್ಲಿ ಯಾವುದೊಂದು ಮಹತ್ಕಾರ್ಯವೂ, ಕಷ್ಟನಷ್ಟಗಳಿಗೂ, ಅಂಜಿಕೆ-ಬೆದರಿಕೆಗಳಿಗೂ ಎದೆನಡುಗದೆ ದೃಢಚಿತ್ತದಿಂದ ಮುಂದರಿವ ಮಹಾಮತಿಗಳಾದ ಧೀರ

ರಿಂದಲಲ್ಲಿದೆ, - ವಿನೋದಮೇಷಗಳನ್ನೆಣಿಸಿಕೊಂಡು, ಕಾಸುವೀಸಗಳ ಲಾಭ ನಷ್ಟಗಳಿಂದಲೇ ಉಬ್ಬಿ-ಕಂಗೆಡುವ ಪೊಳ್ಳೆದೆಯುವರಿಂದ ಎಂದೂ ನೆರವೇರಿ ದುದಿಲ್ಲ. ಮಾತ್ರವಲ್ಲ - ಏಳುವ ಕುಳ್ಳಿರುವ, ಹೆಜ್ಜೆಯಿಡುವ ಉಸಿರು ಬಿಡುವ ಕೆಲಸಗಳಿಗೂ ನಾವು ಅಸ್ವತಂತ್ರರು, ಅಶಕ್ತರು ಎಂದುಕೊಂಡು, ಪ್ರತಿಯೊಂದಕ್ಕೂ ದೈವಸಹಾಯವನ್ನೂ ಅದೃಷ್ಟದ ಬೆಂಬಲವನ್ನೂ ಎದು ರುನೋಡುತ್ತ ಕುಳ್ಳಿರುವ ಜಡಪ್ರಕೃತಿಯುವರಿಂದಲೂ ಯಾವ ಕಾರ್ಯವೂ ನಡೆಯದು-ಎಂದೂ ನಡೆದುದಿಲ್ಲ. ಯಾವನಿಂದಲಾಗಲಿ ಲೋಕದಲ್ಲಿ ಏನಾದ ರೊಂದು ಘನಕಾರ್ಯವು ನೆರವೇರಿ, ಅವನೂ ಮನುಷ್ಯನೆಂಬ ನಾಮಕ್ಕೆ ಅರ್ಹನೆನ್ನಿಸಿಕೊಳ್ಳಬೇಕಾಗಿದ್ದರೆ, ಅವನು ತನ್ನ ಜೀವಿತಕ್ಕೊಂದು ಗೊ ತ್ತಾದ ಧ್ಯೇಯವನ್ನಿಟ್ಟುಕೊಂಡು, ಅದರ ಸಾಧನೆಗಾಗಿಯೇ ತಮ್ಮ ಸರ್ವ ಶಕ್ತಿಯನ್ನೂ ವಿನಿಯೋಗಿಸುವ ವಿಷಯದಲ್ಲಿ ದೃಢಚಿತ್ತತೆಯನ್ನು ಗಳಿಸ ಬೇಕು. ಕಾರ್ಯ ಪ್ರಾರಂಭಮಾಡಿದಮೇಲೆ ಬೇಕಾದಷ್ಟು ಕಷ್ಟಗಳು ಬಂದಾಗ್ಯೂ ಅದನ್ನು ತ್ಯಜಿಸದೆ ಮುಂದರಿಸುವ ಸಹಿಷ್ಣುತಾಭಾವವನ್ನು ಅಭ್ಯಾಸಮಾಡಬೇಕು. ನಮ್ಮಲ್ಲಿ ಪೂರ್ವಕಾಲದಲ್ಲೂ ಆಧುನಿಕಕಾಲದ ಲ್ಲೂ ಇಂತಹ ಮಹತ್ಕಾರ್ಯ ಸಾಧಕರಾದ ಅನೇಕಾನೇಕ ಮಹನೀಯ ವ್ಯಕ್ತಿಶ್ರೇಷ್ಠರು ದೊರೆಯುವರಾದರೂ, ಸದ್ಯಃ ಕಾರ್ಯಪ್ರಪಂಚದಲ್ಲಿ ಧೀರ ರೆನ್ನಿಸಿಕೊಂಡು ಮುಂದರಿಯುತ್ತಿರುವ ಈ ಪಾಶ್ಚಾತ್ಯ ಕಾರ್ಯ ಸಾಧಕರ ಉದಾಹರಣೆಯೂ ನಮ್ಮ ಯುವಕರಿಗೆ ಮೇಲ್ಪಂಕ್ತಿಯಾಗಿರಲು ಅರ್ಹವಾ ಗಿದೆ. ಆದುದರಿಂದ ಉದಾರಸ್ವಭಾವದ ನಮ್ಮ ವಾಚಕಮಹಾಶಯರು ತಮ್ಮ ಚಿಕ್ಕವರಿಗೆ ಈ ಬಗೆಯ ಉತ್ತೇಜಕ ಗ್ರಂಥಗಳನ್ನು ಒದಗಿಸಿಕೊಟ್ಟು ತನ್ಮೂಲಕ ಅವರಲ್ಲಿ ಪುರುಷಪ್ರಯತ್ನದ ಆವಶ್ಯಕತೆ, ಧೈರ್ಯಸಾಹಸಗಳು ದೃಢಪ್ರಯತ್ನ ಶೀಲತೆ, ಕಷ್ಟಸಹಿಷ್ಣುತೆ ಮುಂತಾದ ಗುಣಗಳ ಅಭಿವೃ ದ್ಧಿಗೆ ಅವಕಾಶವನ್ನು ಕಲ್ಪಿಸಬೇಕು. ಈ ಶ್ರೇಷ್ಠ ಗುಣಗಳು ನಮ್ಮ ಯು ವಕರಲ್ಲೂ ಬಾಲಕ ಬಾಲಿಕೆಯರಲ್ಲೂ ಮೂಡಬೇಕೆಂಬ ಮಹದುದ್ದೇಶವನ್ನಿ ಟ್ಟುಕೊಂಡು, ಅದಕ್ಕೆ ಸಹಾಯಕವಾಗಿರಬೇಕೆಂದೇ ಈ ಗ್ರಂಥ ಪ್ರಕಟನಾ ಕಾರ್ಯದಲ್ಲಿ ತೊಡಗಿರುವ **ಸುಬೋಧ ಕುಸುಮಾಂಜಲಿ ಗ್ರಂಥಮಾಲೆ** ಯನ್ನು, ಅಭಿಮಾನಶಾಲಿಗಳಾದ ವಾಚಕ ಮಹಾಶಯರು ತಮ್ಮ ಮಿತ್ರ

ಬಾಂಧವರಲ್ಲೂ ಪ್ರಚುರಗೊಳಿಸಿ, ಆದರ ಈ ಸೇವೆಯನ್ನು ಸಾರ್ಥಕಗೊಳಿಸಬೇಕೆಂದು ಪ್ರಾರ್ಥಿಸುತ್ತೇವೆ.

ಇತಿಸುಜನ ವಿಧೇಯು

ಬೆಂಗಳೂರು ನಗರ
ತಾ. ೧೯—೧೦—೩೨

ಕಂದ:—

ಎಡರಡಸುವುದೆಂದಂಜುತೆ
ತೊಡಗರ್ಕಾರ್ಯವನೆ ನೀಚರೆಡರಡಸಲೊಡಂ ॥
ಬಿಡುವರ್ ಮಧ್ಯಮರೆಡರೆನೆ ।
ತಡಸಿದೊಡಂ ತ್ಯಜಿಸರಾಂತಕೃತ್ಯವ ಧೀರರ್ ॥

ನೀತಿಶತಕ.


ಶ್ಲೋಕ:—

ಅನಾರಂಭೋ ಮನುಷ್ಯಾಣಾಂ ಪ್ರಥಮಂ ಬುದ್ಧಿಲಕ್ಷಣಂ ।
ಆರಭ್ಯಸ್ಯಾಂತ್ಯಗಮನಃ ದ್ವಿತೀಯಂ ಬುದ್ಧಿಲಕ್ಷಣಂ ॥

*Never begin a work with a hurrah, and close it with an excuse.*



*Stephenson*



*Rocket*

ಶ್ರೀರಾಮ ಸಹಾಯಂ

ಹಬೆಯಂತ್ರ ನಿರ್ಮಾಪಕ

# ಜಾರ್ಜ್ ಸ್ಟೀವೆನ್ಸನ್

## ಅಧ್ಯಾಯ ೧ "ಜನನ-ಬಾಲ್ಯವಯಸ್ಸು"

ನಮ್ಮ ಮಾತೃಭೂಮಿಯಾದ ಈಗ ಭಾರತದೇಶಕ್ಕೆ ಪಾಶ್ಚಾತ್ಯ ದೇಶೀಯರ--ಮುಖ್ಯವಾಗಿ ಇಂಗ್ಲೀಷರ ಸಂಬಂಧವಾಗಿ ಸುಮಾರು ಮೂರು ಶತಮಾನಗಳಾಗುತ್ತ ಬಂದುವಷ್ಟೆ! ಈ ದೀರ್ಘಕಾಲದಲ್ಲಿ ಅವರ ಸಹವಾಸದಿಂದ ನಮ್ಮ ದೇಶಕ್ಕೆ ಹಲ ಕೆಲವು ಪ್ರಯೋಜನಗಳುಂಟಾಗಿವೆ. ಅನೇಕಾನೇಕ ಕಷ್ಟನಷ್ಟಗಳೂ ಒದಗಿವೆ. ಪ್ರಯೋಜನಗಳಲ್ಲಿ ಅತಿ ಮುಖ್ಯವಾದುದೆಂದರೆ, ಭೌತಿಕಸುಖಸಾಮಗ್ರಿಗಳನ್ನು ಒದಗಿಸಿದುದು. ಕಷ್ಟನಷ್ಟಗಳಲ್ಲಿ ಅತಿ ಮುಖ್ಯವಾದುದೆಂದರೆ ಭಾರತದೇಶದ ರಾಜಕೀಯ ಸ್ವಾತಂತ್ರ್ಯ ಹರಣ. ಈ ಸ್ವಾತಂತ್ರ್ಯಹರಣದೊಂದಿಗೆ ಮಿಕ್ಕ ಭಾರತೀಯ ಸಮಸ್ತ ಸೌಭಾಗ್ಯಗಳೂ ಹರಣವಾಗಿಹೋದುವು. ಭಾರತೀಯರು ಸಕಲ ವಿಧಗಳಲ್ಲೂ ಪರಾವಲಂಬಿಗಳಾದರು. ಅವರ ಸಮಸ್ತ ಕಾರ್ಯಗಳೂ ಈ ಪರದೇಶೀಯರ ಇಚ್ಛೆಯನ್ನನುಸರಿಸಿಯೇ ನಡೆಯಬೇಕಾಯಿತು. 'ಸರ್ವಂ ಪರವಶಂ ದುಃಖಂ ಸರ್ವಮಾತ್ಮವಶಂ ಸುಖಂ' ಎಂಬ ಆರ್ಯೋಕ್ತಿಯಲ್ಲಿ ಸತ್ಯಾಂಶವಿದ್ದಲ್ಲಿ ಈ ಪರಾಧೀನತೆಯಿಂದ ಪರವಶತೆಯಿಂದ ಉಂಟಾಗಬೇಕಾದ ಸಕಲ ದುಃಖಗಳೂ ಭಾರತೀಯರ ಪಾಲಿಗೊದಗಿದುವು. ಭಾರತದೇಶೀಯರು ತಮ್ಮ ಸ್ವದೇಶದಲ್ಲೇ ಪರದೇಶಿಗಳೂ, ಸ್ವಗೃಹದಲ್ಲೇ ಬಂದಿಗಳೂ ಆದಂತಾಗಿ ಪರಕೀಯರ ಅನುಗ್ರಹದಿಂದ ಉಪಜೀವಿತರಾಗುವ-ಆಗ್ರಹದಿಂದ ಹತಜೀವಿಗಳಾಗುವ ಸ್ಥಿತಿಗೆ ಬಂದುನಿಂತರು. ಈ ಪರದೇಶೀಯ ನಾಗರಿಕತೆಯು ರಾಜಕೀಯಸಾಮರ್ಥ್ಯದ ಬೆಂಬಲದಿಂದ ಬಹು ಶೀಘ್ರಕಾಲ

ದಲ್ಲೀ ದೇಶದಲ್ಲೆಲ್ಲ ವ್ಯಾಪಿಸಿತು. ಜನಜೀವಿತದ ಸರ್ವಾಂಗಗಳೂ ಈ ಪಾಶ್ಚಾತ್ಯ ನಾಗರೀಕತೆಯಿಂದ ವ್ಯಾಪಿಸಲ್ಪಟ್ಟವು. ಜನರಲ್ಲಿ ಭೌತಿಕವಾದ ಒಂದು ಬಗೆಯ ವಿಚಾರತರಂಗವು ಪ್ರಚೋದಿತವಾಯಿತು. ಅವರು ತಮ್ಮ ದೇಶಕ್ಕೆ ಸ್ವಾಭಾವಿಕವಾದ ಸಮಸ್ತ ಮಾರ್ಗಗಳನ್ನೂ ಕೈಬಿಟ್ಟು, ಪರಕೀಯರ ಕೈಬೊಂಬೆಗಳಾಗಿ ಸಕಲ ವಿಚಾರಗಳಲ್ಲೂ ಪರಾನುಕರಣಮಾಡತೊಡಗಿದರು. ಭಾರತದೇಶಕ್ಕೆ ಸ್ವಾಭಾವಿಕ ಧರ್ಮವಾಗಿದ್ದ ಆತ್ಮಸಾಕ್ಷಾತ್ಕಾರ ಅಥವ ಪರಮಾತ್ಮಪ್ರಾಪ್ತಿ ಎಂಬ ಮಾನವನ ಜೀವಿತಧ್ಯೇಯವು ಹಾಸ್ಯಾಸ್ಪದವಾಗಿ, ಭೌತಿಕಸುಖಸಾಮಗ್ರಿಗಳ ಸಂಗ್ರಹಣವೇ ಜೀವಿತದ ಪರಮಧ್ಯೇಯವೆಂಬ ಭಾವನೆಯು ಜನಮನವನ್ನಾಶ್ರಯಿಸಿತು. ಹೀಗೆ ಪ್ರಜಾವರ್ಗದ ಜೀವಿತಧ್ಯೇಯವೇ-ಸಂಪೂರ್ಣ ವ್ಯತ್ಯಸ್ತವಾಗಲು ಇನ್ನು ಹೇಳಬೇಕಾದುದೇನು? ಚತುರ್ವಿಧಪುರುಷಾರ್ಥಸಾಧನೆಗಳೂ ಭೌತಿಕಸುಖಸಾಧನೆ-ಇಂದ್ರಿಯಲೋಲುಪತೆ, ವಿಷಯಭೋಗಲಾಲಸತೆ ಎಂಬಿವುಗಳಲ್ಲಿ ಮುಕ್ತಾಯವನ್ನು ಹೊಂದಿದುವು. ಪಾಶ್ಚಾತ್ಯದೃಷ್ಟಿಯಿಂದ ಭಾರತೀಯರ, ಕಾಡುಮನುಷ್ಯರ ತರಗತಿಯಿಂದ ಮೇಲಕ್ಕೇರಿ ಮನುಷ್ಯೋತ್ತಮರ ಪದವಿಯನ್ನು ಹೊಂದಿದಾರೆಂದು ತೋರಬಹುದು. ಆದರೆ ಭಾರತೀಯ ದೃಷ್ಟಿಯಿಂದಲಂತೂ-ನವನಾಗರಿಕತೆಯ ಸೆಳವಿಗೆ ಸಿಕ್ಕಿದ ಭಾರತೀಯರ ಸರ್ವನಾಶವಾಯಿತೆಂದು ಹೇಳಲು ಏನೂ ಸಂಶಯವಿಲ್ಲ ಏಕೆಂದರೆ ಸಕಲ ಸುಖಸಂಪತ್ತುಗಳಿಂದ ಕೂಡಿದ್ದರೂ ಶರೀರಧಾರಿಯು ಆರೋಗ್ಯಭಾಗ್ಯವನ್ನೊಂದನ್ನು ಕಳೆದುಕೊಂಡಿದ್ದಲ್ಲಿ, ಮಿಕ್ಕ ಯಾವುದರಿಂದಲೂ ಅವನಿಗೆ ಹೇಗೆ ಪ್ರಯೋಜನವಿಲ್ಲವೋ, ಹಾಗೆಯೇ ಒಬ್ಬನು ಪ್ರಪಂಚವನ್ನೇ ಜಯಿಸಿದ್ದರೂ ತನ್ನ ಆತ್ಮನನ್ನೇ ಕಳೆದುಕೊಂಡಿದ್ದರೆ ಅವನ ಜೀವಿತವು ನಿರರ್ಥಕವೆನ್ನಲು ಸಂದೇಹವಿಲ್ಲವಷ್ಟೆ! ಆತ್ಮನಾಶವೇ ಸರ್ವನಾಶವೆಂದರೆ ಅದರಲ್ಲಿ ಅತಿಶಯೋಕ್ತಿಯೇನಿದೆ ?

ಈ ನವನಾಗರಿಕತೆಯೆಂಬ ಆತ್ಮನಾಶಕ ಸಾಮಗ್ರಿಯು ಭಾರತದೇಶದಲ್ಲಿ ವಿಶೇಷ ರೀತಿಯಿಂದ ಪ್ರಚಾರಕ್ಕೆ ಬರಲು ಒದಗಿದ ಅತಿ ಮುಖ್ಯ ಸಹಾಯವೆಂದರೆ ನವೀನಕಾಲದ ಯಾನಸಾಧನಗಳು. 'ರೈಲು' 'ಮೋಟಾರು' ಆಕಾಶವಿಮಾನ ಮೊದಲಾದ ಯಂತ್ರವಿಶೇಷಗಳಲ್ಲಿ ಮೊದಲನೆಯ ಬಾರಿ

ಕುಳಿತು, ಗಾಳಿ ಮಳೆ, ಹಗಲು ರಾತ್ರಿ, ನಗರ ಮಹಾರಣ್ಯಗಳೆಂಬ ಲಕ್ಷ್ಯ ವಿಲ್ಲದೆ, ಗಂಟೆಗೆ ನಾಲ್ವತ್ತೈವತ್ತು - ನೂರಿನ್ನೂರು ಮೈಲಿಗಳ ದೀರ್ಘ ಪ್ರಯಾಣವನ್ನು ಮಾಡುವ ಮನುಷ್ಯನು, ಸ್ವಾಭಾವಿಕವಾಗಿಯೇ ಮನು ಷ್ಯನ ಯಂತ್ರರಚನಾ ಸಾಮರ್ಥ್ಯವನ್ನೂ, ಭೌತಿಕವಿಜ್ಞಾನಶಾಸ್ತ್ರದ ಮಹ ತ್ವವನ್ನೂ ಕುರಿತು ಆಶ್ಚರ್ಯಮಗ್ನನಾಗುವನಲ್ಲದೆ, ಅಂತಹ ಬುದ್ಧಿಶಕ್ತಿ ಯನ್ನುಳ್ಳ ಮನುಷ್ಯನನ್ನೂ ಅಗಾಧವೂ ಅಚಿಂತ್ಯವೂ ಆದ ಶಕ್ತಿವಿಶೇಷ ಗಳನ್ನು ಉಂಟಾಗಿರುವ ಪೃಥಿವ್ಯಾದಿ ಮಹತ್ತತ್ವಗಳನ್ನೂ ಸೃಷ್ಟಿಸಿದ ಸರ್ವೇಶ್ವರನಾದ ಭಗವಂತನ ಕಡೆಗೆ ಅವನ ಮನಸ್ಸು ಹೋಗಲೇಲಾರದು. ಆ ಸಂದರ್ಭದಲ್ಲಿ ಬೇರೆಯಾರಾದರೂ ದೇವರಸ್ಮರಣೆ ಮಾಡಿಕೊಟ್ಟರೂ ಸಹ, ಅದು ಲಕ್ಷ್ಯೆಗೆ ಬಾರದಿರುವುದಂತಿರಲಿ, ಹಾಗೆ ಹೇಳಿದವನು ಗೊಡ್ಡು ವೈದಿಕ- ಧರ್ಮಜಡ ಎಂಬ ಅಪಹಾಸ್ಯಕ್ಕೆ ಗುರಿಯಾಗುವುದು ತಪ್ಪದು. ಹೀಗೆ ಪ್ರತಿಯೊಂದು ಕಾರ್ಯದಲ್ಲೂ, ಅಣುರೇಣು ತೃಣಕಾಷ್ಟಗಳಲ್ಲೂ ಭಗವಂ ತನ ಶಕ್ತಿವಿಶೇಷವನ್ನು ಕಾಣುತ್ತ - ತೇನವಿನಾತೃಣಮಪಿ ನಚಲತಿ'— 'ಯಾವಾತನ ಶಕ್ತಿವಿಶೇಷದ ಬೆಂಬಲವಿಲ್ಲದಿದ್ದಲ್ಲಿ ತೃಣವೂ ಅಲುಗಾಡ ಲಾರದು' ಎಂಬ ಶ್ರುತಿವಾಕ್ಯವನ್ನು ಸರ್ವದಾ ಮನನಮಾಡುತ್ತಲಿದ್ದ ನಮ್ಮ ದೇಶೀಯರಿಗೆ - ಅದೃಶ್ಯವಾದ ಭಗವಚ್ಛಕ್ತಿಯೆಂಬುದು ಕೈಲಾಗದ ಹೇಡಿ ಗಳಾಡುವ ಮಾತು, ನಿಜವಾದ ಶಕ್ತಿಯೆಂದರೆ ಭೌತಿಕಶಕ್ತಿಯೇ ಎಂದು ಮನಗಾಣಿಸಲು ಈ ಯಂತ್ರ ವಿಶೇಷಗಳೂ ಯಾನಸಾಧನಗಳೂ ವಿಶೇಷ ಸಹಾಯಮಾಡಿದುವು. ಈ ಬಗೆಯ ಮನೋಭಾವದೊಂದಿಗೇ ಮನುಷ್ಯ ನಲ್ಲಿ ಅವನಿಗೆ ಗೋಚರವಾಗದಂತೆಯೇ, ನಿರೀಶ್ವರಭಾವವು - ನಾಸ್ತಿಕಭಾ ವವು ಹುಟ್ಟಿ ಬೆಳೆಯಲಾರಂಭವಾಯಿತು. ಹಬೆಯ ಯಂತ್ರವೇ ಮುಂತಾದ ಸಕಲ ಯಂತ್ರಸಾಮಗ್ರಿಗಳೂ ನಮಗೆ ಮಾಡಿದ ಪ್ರಯೋಜನವೇನೆಂದು ತಾತ್ವಿಕ ದೃಷ್ಟಿಯಿಂದ ನೋಡಿದಲ್ಲಿ, ಅವು ನಮ್ಮಲ್ಲಿ ನಿರೀಶ್ವರಭಾವ-ನಾಸ್ತಿ ಕಭಾವಗಳನ್ನುಂಟುಮಾಡಿ ನಮ್ಮಲ್ಲಿದ್ದ ದೈವನ್ಯಸ್ತಭರ ಚಿತ್ತವೃತ್ತಿಯನ್ನು ಸೆಳೆದು ಆಸ್ಥಾನದಲ್ಲಿ ಆಸುರೀಭಾವವನ್ನು ಸ್ಥಾಪಿಸುವಲ್ಲಿ ಅಧಿಕ ಸಹಾಯ ಮಾಡಿದುವೆಂದು ಸ್ಪಷ್ಟವಾಗಿ ಹೇಳಬಹುದು.

ಆದರೆ, ಲೌಕಿಕವಾಗಿ ಅವುಗಳ ಮೂಲಕ ಆದ ಕೆಲವು ಪ್ರಯೋಜನ

ಗಳನ್ನು ಈ ಸಂದರ್ಭದಲ್ಲಿ ಮರೆಯುವಂತಿಲ್ಲ! ಸದ್ಯಃ ನಮಗೆ ರಾಜ್ಯಾಧಿಪತಿಗಳಾಗಿರುವ ಈ ಪರದೇಶೀಯ ಪ್ರಭುಗಳು ತಮ್ಮ ರಾಜಕಾರ್ಯಸೌಲಭ್ಯತೆಗೆಂದು ಸ್ಥಾಪಿಸಿಕೊಂಡ ಈ ಸೌಕರ್ಯಗಳು, ನಮಗೂ ಅಲ್ಪಸ್ವಲ್ಪ ಪ್ರಯೋಜನಕಾರಿಗಳಾದುವು. ಕ್ಷಾಮಕಾಲಗಳಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ದವಸಧಾನ್ಯಗಳನ್ನೊದಗಿಸಿ ಕಾಪಾಡುತ್ತದೆಂದು 'ರೈಲಿನ' ಉಪಯೋಗಗಳಲ್ಲಿ ಅತಿ ಮುಖ್ಯವಾದುದನ್ನಾಗಿ ಬಾಲಕರಿಗೆ ಹೇಳಿಕೊಡುವ ರೂಢಿಯುಂಟು. ಅಷ್ಟು ಮಾತ್ರವಲ್ಲ- ಇದರಿಂದ ಆದ ಅತಿ ಮುಖ್ಯ ಪ್ರಯೋಜನವೆಂದರೆ, ಏಕಮಾತ್ರ ಭಾರತಮಾತೆಯ ಮಕ್ಕಳಾಗಿದ್ದರೂ ಭಾಷಾಭೇದ ದೇಶಭೇದಗಳಿಂದ ಒಬ್ಬರಿಗೊಬ್ಬರಿಗೆ ಪರಸ್ಪರ ದರ್ಶನ ಸಂಭಾಷಣ ಸಮಾಗಮಗಳಿಗೆ ಅವಕಾಶವಿಲ್ಲದೆ ಬಹುಕಾಲದಿಂದಲೂ ಬೇರೆಬೇರೆಯಾಗಿಯೇ ಜೀವಿಸುತ್ತಾ ಬಂದ ನಮ್ಮ ದೇಶೀಯರಲ್ಲಿ ಪರಸ್ಪರ ಬಳಕೆಯನ್ನುಂಟುಮಾಡಲು ಇದೊಂದು ಪ್ರಬಲಸಾಧನವಾಯಿತು. ಈ ಸಾಧನದ ಮೂಲಕವಾಗಿಯೇ ವಾಣಿಜ್ಯವೂ ಕೈಗಾರಿಕೆಗಳೂ, ಹಲವು ಕಾರ್ಖಾನೆಗಳೂ ಹುಟ್ಟಿ ಬೆಳೆಯಲು ಅವಕಾಶವೊದಗಿತು. ಸೂರ್ಯಾಸ್ತಮಯದೊಂದಿಗೆ ಮಲಗಿ ನಿದ್ರಿಸುತ್ತಿದ್ದ ಲೋಕವು ಸೂರ್ಯೋದಯದೊಂದಿಗೆ ಹೇಗೆ ಜಾಗೃತಿಹೊಂದಿ ಕೊಡಹಿಕೊಂಡೆದ್ದು ಕಾರ್ಯತತ್ಪರವಾಗುವುದೋ ಹಾಗೆಯೇ, ಹಬೆಗಾಡಿಯ ಸೌಕರ್ಯವುಂಟಾಗಿರುವ ಊರಿನಲ್ಲಿ ದಿನದ ಕಾರ್ಯವೂ ತತ್ಸಂಬಂಧವಾದ ಸಕಲವಿಧ ಚಟುವಟಿಕೆಯೂ 'ರೈಲಿನ' ಮೂಲಕವೇ ಪ್ರಾರಂಭವಾಗುತ್ತದೆಯೆಂಬುದನ್ನು ವಿಚಾರಜ್ಞರು ತಿಳಿಯುವರು. ಈವೊಂದು ಯಂತ್ರವಿಶೇಷದ ಕಾರ್ಯಕಲಾಪವನ್ನನುಸರಿಸಿಕೊಂಡೇ ಲೋಕದಲ್ಲಿ ಕೋಟ್ಯಾಂತರಮಂದಿ ಜೀವನೋಪಾಯವನ್ನು ಸಂಪಾದಿಸಿಕೊಂಡಿದ್ದಾರೆಂಬ ವಿಚಾರವನ್ನು ಸಹ ಈ ಸಂದರ್ಭದಲ್ಲಿ ಮರೆಯಬಾರದು. ಹೀಗೆ ಈ ಯಂತ್ರವಿಶೇಷದಿಂದ ಲೋಕದೃಷ್ಟಿಯಿಂದ ಅನೇಕಾನೇಕ ಪ್ರಯೋಜನಗಳೂ ಉಂಟಾಗಿವೆ. ಇಂತಹ ಅಗಾಧ ಶಕ್ತಿಯುತ ಯಂತ್ರಸಾಮಗ್ರಿಯನ್ನು ಸೃಷ್ಟಿಸಿಟ್ಟು ಲೋಕದಲ್ಲಿ ವಿಶೇಷ ಜಾಕರೂಕತೆಯನ್ನೂ - ಕಾಲನಿಯಮನವನ್ನೂ, ಪ್ರಜಾವರ್ಗಕ್ಕೆ ಪ್ರಯಾಣ ಸೌಕರ್ಯವನ್ನೂ, ವ್ಯಾಪಾರ ಕೈಗಾರಿಕೆಗಳಿಗೊಂದು ಪ್ರಬಲ ಸಹಾಯವನ್ನೂ ಕಲ್ಪಿ

ಸಿದ ಮಹಾಪುರುಷನು ಒಬ್ಬನುಂಟು. ಕಾಲಾನುಸಾರವಾಗಿ ಲೋಕದಲ್ಲಿ ನಡೆಯಬೇಕಾಗಿದ್ದ ಈ ಮಹತ್ಕಾರ್ಯ ಸಾಧನೆಯಲ್ಲಿ ಭಗವಂತನ ಕೈಬೊಂಬೆಯಾಗಿಯೋ ಎಂಬಂತೆ ಆತನು ಈ ಯಂತ್ರವಿಶೇಷವನ್ನು ರಚನೆಮಾಡಿ ಲೋಕದಲ್ಲೊಂದು ನವಯುಗವನ್ನೇ ಸ್ಥಾಪಿಸಿಬಿಟ್ಟನು. ಆತನು ಈ ಯಂತ್ರವನ್ನು ಕಂಡುಹಿಡಿದಾಗ, ಈ ತನ್ನ ಕೆಲಸದ ಮೂಲಕ ಲೋಕದಲ್ಲಿ ಇಷ್ಟುಮಟ್ಟಿನ ಕಾರ್ಯ ನಡೆಯುವುದೆಂದಾಗಲೀ, ಅದು ಇಷ್ಟುಮಟ್ಟಿನ ಸುಧಾರಣೆಹೊಂದಿ ದೇಶಾಭಿವೃದ್ಧಿಕಾರ್ಯಕ್ಕೆ ಸಹಾಯಕವಾಗುವುದೆಂದಾಗಲೀ ಎಣಿಸದಿರಬಹುದು. ಆದರೆ ಅದರಿಂದ ಆದ ಪ್ರಯೋಜನವು ಮಾತ್ರ ಲೋಕವು ಆದರ ಕರ್ತೃವನ್ನು ಎಂದೆಂದಿಗೂ ಮರೆಯದೆ ತನ್ನ ಕಣ್ಣೆದುರಿಗೆ ಚಿರಜೀವಿಯನ್ನಾಗಿರಿಸಿಕೊಂಡಿರಲು, ಅವಕಾಶವನ್ನು ಉಂಟುಮಾಡಿದೆ. ಲೋಕದಲ್ಲಿ ಇಂತಹ ಒಂದು ಅಗಾಧ ಕಾರ್ಯಮಾಡಿದ ಮಹನೀಯನ ಚರಿತ್ರೆಯನ್ನು ಸಂಕ್ಷೇಪವಾಗಿಯಾದರೂ ನಮ್ಮ ಬಾಲಕ ಬಾಲಿಕೆಯರೂ ಜನಸಾಮಾನ್ಯವೂ ತಿಳಿದಿರತಕ್ಕುದು ಆವಶ್ಯಕವಲ್ಲವೆ! ಅದನ್ನು ಇಲ್ಲಿ ಕೊಡಲು ಪ್ರಯತ್ನಿಸುತ್ತೇವೆ. ವಾಚಕ ಮಹಾಶಯರು ಸಾವಧಾನದಿಂದ ಮುಂದರಿಸಬೇಕು.

ಇಂಗ್ಲೆಂಡು ದೇಶದಲ್ಲಿ ನ್ಯೂಕ್ಯಾಸಲ್ ಎಂಬೊಂದು ಊರು. ಅದಕ್ಕೆ ಎಂಟು ಮೈಲು ದೂರದಲ್ಲಿ ವೈಲಂ ಎಂಬೊಂದು ಗ್ರಾಮ. ಅದರಲ್ಲಿ ಕ್ರಿ. ಶ ಹದಿನೆಂಟನೆಯ ಶತಮಾನದ ಕೊನೆಯ ಭಾಗದಲ್ಲಿ ರಾಬರ್ಟ್ ಸ್ಟೀವನ್ಸನ್ ಎಂಬೊಬ್ಬ ಮನುಷ್ಯನು ವಾಸವಾಗಿದ್ದನು. ಆತನಿಗೆ ಮಾಬೆಲ್ ಸ್ಟೀವನ್ಸನ್ ಎಂಬಾಕೆಯು ಗೃಹಿಣಿಯಾಗಿದ್ದಳು. ಆ ದಂಪತಿಗಳು ಬಡವರಾಗಿದ್ದರೂ ಅನ್ಯೋನ್ಯ ಪ್ರೀತಿವಿಶ್ವಾಸಗಳಿಂದ - ಏಕದೇಹ ನ್ಯಾಯದಿಂದ ಸುಖವಾಗಿ ಕಾಲಯಾಪನೆ ಮಾಡುತ್ತಿದ್ದರು. ಅವರು ವಾಸವಾಗಿದ್ದ ಮನೆಯು ನಾಲ್ಕು ಕೊಠಡಿಗಳ ಒಂದು ಕಟ್ಟಡ. ಅದರಲ್ಲೊಂದು ಕೊಠಡಿಯಲ್ಲಿ ರಾಬರ್ಟ್ ಸ್ಟೀವನ್ಸನ್ನನು ತನ್ನ ಪತ್ನಿಯೊಂದಿಗೆ ವಾಸಿಸುತ್ತಿದ್ದನು. ಈ ಒಂದೇ ಕೊಠಡಿಯು ಅವರಿಗೆ ಪಾಕಶಾಲೆಯಾಗಿಯೂ, ಭೋಜನಶಾಲೆಯಾಗಿಯೂ ವಿಹಾರಮಂದಿರವಾಗಿಯೂ, ಚಂದ್ರಶಾಲೆಯಾಗಿಯೂ, ಶಯನಗೃಹವಾಗಿಯೂ ಉಪಯೋಗವಾಗಿದ್ದಿತು. ಅವರಿಗೆ ಜೇಮ್ಸ್ ಎಂಬೊಬ್ಬ ಮಗನು

ಹುಟ್ಟಿ ಎರಡು ವರ್ಷವಾಗುವ ವೇಳೆಗೆ, ೧೭೮೧ನೆಯ ಜೂನ್ ೯ನೆಯ ದಿನ ಮತ್ತೊಂದು ಗಂಡುಮಗುವು ಜನಿಸಿತು. ಆ ಮಗುವಿಗೆ ಜಾರ್ಜ್ ಸ್ಟೀವೆನ್ಸನ್ ಎಂದು ನಾಮಧೇಯವನ್ನಿಟ್ಟು, ಆ ಬಡ ತಾಯಿತಂದೆಗಳು, ತಮ್ಮ ಮಕ್ಕಳನ್ನು ಬಹು ಪ್ರೀತಿವಿಶ್ವಾಸಗಳಿಂದ ಕಾಪಾಡಿಕೊಂಡು ಬಂದರು.

ರಾಬರ್ಟ್ ಸ್ಟೀವೆನ್ಸನನು ವಿಶೇಷ ಬಲಶಾಲಿಯಲ್ಲದಿದ್ದರೂ ಕಷ್ಟ ಸಹಿಷ್ಣುವಾಗಿದ್ದನು. ಆತನ ಸದ್ಗುಣ ಸನ್ನಡತೆಗಳೂ, ದಯಾದಾಕ್ಷಿಣ್ಯ ಪ್ರಕೃತಿಯೂ, ಮೃದುಭಾವವೂ ಆತನ ನೆರೆಹೊರೆಯಲ್ಲಿ ಎಲ್ಲರಿಗೂ ಆತನಿಗೆ ಗೌರವಾದರಗಳನ್ನುಂಟುಮಾಡಿದ್ದುವು. ಆತನಿಗೆ ವಿಶೇಷ ವಿದ್ಯೆಯಾಗಲೀ ಮತ್ತಾವ ಪಾಂಡಿತ್ಯವಾಗಲೀ ಇರದಿದ್ದರೂ ಹೃದಯಂಗಮವಾಗಿ ಕಥೆಗಳನ್ನು ಹೇಳಿ ಶ್ರೋತೃಗಳ ಮನರಂಜನೆಮಾಡಬಲ್ಲ ಸಾಮರ್ಥ್ಯವು ಮಾತ್ರ, ಆತನಲ್ಲಿ ವಿಶೇಷವಾಗಿದ್ದಿತು. 'ಅರೇಬಿಯನ್ ನೈಟ್ಸ್' ಎಂಬ ಯವನ ಯಾಮಿನೀ ವಿನೋದ ಕಥೆಗಳಲ್ಲಿನ - ಸಿಂದ್‌ಬಾದ್ ನಾವಿಕನ ಕಥೆ ಮುಂತಾದುವುಗಳನ್ನು ಹೇಳಿ ತನ್ನ ಸುತ್ತಲೂ ನೆರೆದ ಆ ಗ್ರಾಮದ ಹುಡುಗರ ಮನಸ್ಸನ್ನು ಆಕರ್ಷಿಸುವಲ್ಲಿ ಆತನಿಗೆ ವಿಶೇಷ ಆಸಕ್ತಿಯುಂಟು. ಚಿಕ್ಕ ಮಕ್ಕಳನ್ನೂ, ಚಿಕ್ಕ ಪ್ರಾಣಿಗಳನ್ನೂ, ಚಿಕ್ಕ ಚಿಕ್ಕ ಮೃಗಪಕ್ಷಿಗಳನ್ನೂ ಕಂಡರೆ ಆತನಿಗೆ ಸ್ವಾಭಾವಿಕವಾಗಿಯೇ ಹೃದಯವು ಕರಗುವುದು. ಜಾರ್ಜ್ ಸ್ಟೀವೆನ್ಸನ್ನನಲ್ಲಿ ತನ್ನ ತಂದೆಯ ಈ ದಯಾಸ್ವಭಾವವು ಶತಾಂಶ ಒಡಮೂಡಿದ್ದಿತು. ಜಾರ್ಜನು ಇನ್ನೂ ಕೇವಲ ಚಿಕ್ಕಮಗುವಾಗಿದ್ದಾಗ ಒಂದು ವೇಳೆ ತಂದೆಯು ಅವನನ್ನು ಕಂಕುಳಲ್ಲೆತ್ತಿಕೊಂಡು, ಮರಗಳಲ್ಲಿನ ಪಕ್ಷಿಗಳ ಗೂಡುಗಳ ಬಳಿಗೆ ಕರೆದೊಯ್ದು ಕೈಯಿಂದ ಮಗುವನ್ನು ಎತ್ತಿ ಗೂಡಿನೊಳಗಿದ್ದ ರೆಕ್ಕೆ ಬಾರದಿದ್ದ ಪಕ್ಷಿಯ ಮರಿಗಳನ್ನು ತೋರಿಸಿದ್ದನಂತೆ. ಜಾರ್ಜನು ತನ್ನ ತಂದೆಯ ಈ ಪ್ರೇಮಮಯ ಕಾರ್ಯವನ್ನು ಕುರಿತು ತನ್ನ ಕೊನೆಗಾಲದವರೆಗೂ ಆಗಾಗ ಸಂದರ್ಭಬಂದಾಗಲೆಲ್ಲ ಹೇಳಿಕೊಳ್ಳುತ್ತಿದ್ದನು.

ಜಾರ್ಜನ ತರುವಾಯ ಆ ದಂಪತಿಗಳಿಗೆ ಮತ್ತೊಬ್ಬ ಮಗಳೂ, ಇಬ್ಬರು ಗಂಡುಮಕ್ಕಳೂ ಜನಿಸಿದರು ಕುಟುಂಬವು ದಿನ ದಿನಕ್ಕೆ ವೃದ್ಧಿಯಾಗುತ್ತಿದ್ದಂತೆ ಸಂಪಾದನೆ ಮಾತ್ರ ಹೆಚ್ಚಾಗಲಿಲ್ಲ. ಗಣಿಗಳಲ್ಲಿ ಉಪಯೋ

ಗಿಸುತ್ತಿದ್ದ ಯಂತ್ರದಲ್ಲಿ ಬೆಂಕಿಯನ್ನು ಉರಿಸಿ-ನೋಡಿಕೊಳ್ಳಬೇಕಾಗಿದ್ದ ಫೈರ್‌ಮ್ಯಾನ್ (*Fireman*) ಎಂಬ ಆತನ ಉದ್ಯೋಗದಲ್ಲಿ ಆತನಿಗೆ ವಾರಕ್ಕೆ ಹನ್ನೆರಡು ಷಿಲ್ಲಿಂಗ್ ಎಂದರೆ ಸುಮಾರು ಒಂಬತ್ತು ರೂಪಾಯಿಗಳ ಉತ್ಪತ್ತಿಯಾಗುತ್ತಿತ್ತು. ಅಷ್ಟುಮಂದಿ ಮಕ್ಕಳ, ಗಂಡಹೆಂಡಿರ ಅನ್ನ ಬಟ್ಟೆಗಳು, ಮನೆಯ ಬಾಡಿಗೆ, ಶುಭ-ಶೋಭನಾದಿ ಸಾಂಸಾರಿಕ ಕಾರ್ಯ ಗಳೂ ಎಲ್ಲವೂ ಅಷ್ಟರಲ್ಲೇ ಸಾಗಬೇಕಾಗಿದ್ದ ಆ ಬಡ ಕುಟುಂಬದ ತಾಪ ತ್ರಯವು ಎಷ್ಟೆಂದು ಹೇಳಲಾದೀತು! ಆ ವೇಳೆಗೆ ಜಾರ್ಜನಿಗೆ ಎಂಟು ವರ್ಷಗಳೂ, ಜೇಮ್ಸನಿಗೆ ಹತ್ತು ವರ್ಷಗಳೂ ತುಂಬಿದುವು. ಆ ಸಮೀ ಪದಲ್ಲೆಲ್ಲೂ ಪಾಠಶಾಲೆಗಳೇ ಇರದಿದ್ದುದರಿಂದ ಆ ಬಾಲಕರು ಅಷ್ಟು ವಯ ಸ್ಕರಾಗಿದ್ದರೂ ನಿರಕ್ಷರರಾಗಿಯೇ ಇದ್ದರು. ತಂದೆಯ ಬಡತನದಿಂದ ಅವರೂ ಆತನೊಂದಿಗೆ ಕಲ್ಲಿದ್ದಲಗಣಿಯ ಕೆಲಸಮಾಡಿ, ತಮ್ಮ ಅಲ್ಪ ಸ್ವಲ್ಪ ಸಂಪಾದನೆಯಿಂದ ಕುಟುಂಬದ ಖರ್ಚಿಗಾದರೂ ಸಹಾಯಕವಾಗಿ ಸ್ವಲ್ಪ ಹಣವನ್ನು ಒದಗಿಸಲೆಂದು ಯೋಚಿಸಿದನು. ಈ ಹಿರಿಯ ಮಕ್ಕಳು ಕೆಲಸಕ್ಕೆ ಹೋದ ಕಾಲದಲ್ಲಿ ಮಿಕ್ಕ ಹುಡುಗರು, ಕೈ ಕೂಸನ್ನೂ ಇತರ ಸಣ್ಣ ಮಕ್ಕಳನ್ನೂ ಕಲ್ಲಿದ್ದಲಿನ ಗಾಡಿಗಳ ಮಾರ್ಗದಲ್ಲಿ ಸಿಕ್ಕು ಅಪಾಯ ಗೊಳ್ಳದಂತೆ ಮನೆಯಲ್ಲಿ ಆಡಿಸಿಕೊಳ್ಳುತ್ತಲೂ ಕೆಲಸಕ್ಕೆ ಹೋದವರಿಗೆ ಮಧ್ಯಾಹ್ನಕ್ಕೆ ಆಹಾರವನ್ನು ಒಯ್ದುಕೊಡುತ್ತಲೂ ಇದ್ದರು. ಜಾರ್ಜ ನಿಗೆ ಸಿಕ್ಕಿದ ಮೊದಲ ಕೆಲಸವೆಂದರೆ, ಅವರ ಮನೆಯ ಸಮೀಪದಲ್ಲೇ ಇದ್ದ ಒಬ್ಬ ಶ್ರೀಮಂತಳ ಮನೆಯ ಹಸುಗಳನ್ನು ಕಾಯ್ದುಕೊಂಡು ಬರುವ ಕೆಲಸ. ಈ ಕೆಲಸಕ್ಕಾಗಿ ಅವನಿಗೆ ದಿನಕ್ಕೆ ಎರಡು ಪೆನ್ಸ್-ಎಂದರೆ ಎರ ಡಾಣೆ ಕೂಲಿಯೆಂದು ಗೊತ್ತಾಯಿತು. ಸಹಿಸಲಶಕ್ಯವಾಗಿದ್ದ ಆ ಬಡತನ ದಲ್ಲಿ ಆ ಕೆಲಸ ಸಿಕ್ಕುದು ಜಾರ್ಜನಿಗೆ ಪರಮಾನಂದವನ್ನುಂಟುಮಾಡಿತು.

ದನಕರುಗಳನ್ನು ಕಾಯುವ ಕೆಲಸದಲ್ಲಿ ಅವನಿಗೇನು ಹೆಚ್ಚು ಶ್ರಮ ವಿಲ್ಲದೆ, ಬೇಕಾದಷ್ಟು ಕಾಲವೂ ದೊರೆಯುತ್ತಿತ್ತು. ಜಾರ್ಜನು ಹಾಗೆ ದೊರೆತ ವೇಳೆಯನ್ನೆಲ್ಲ, ತನ್ನ ಸ್ನೇಹಿತನಾದ ಟಾಂ ಎಂಬುವನೊಂದಿಗೆ ಸೇರಿ, ಅಲ್ಲೇ ಸಿಕ್ಕುತ್ತಿದ್ದ ಜೇಡಿಮಣ್ಣಿನಿಂದ ನೀರು ತಿರುಗಿಸುವ ಯಂತ್ರ (*Water mills*)ದಂತಹ ಆಟಿಗೆಗಳನ್ನು ಮಾಡುತ್ತಾ ವಿನೋದಗೊಳ್ಳು

ವುದರಲ್ಲಿ ಕಳೆಯುತ್ತಿದ್ದನು. ಹಾಗೆ ತಮ್ಮ ಆ ಯಂತ್ರದ ಆಟಿಗೆಗೆ, ಅಲ್ಲೇ ಬೆಳೆದಿದ್ದ ಗಲಗುಗಳನ್ನು ಕೊಳವೆಗಳಂತೆ ಇಟ್ಟು, ಆ ತಮ್ಮ ಯಂತ್ರಗಳನ್ನು ಪೂರ್ತಿಗೊಳಿಸುತ್ತಿದ್ದರು. ಮುಂದೆ ಕೆಲವು ದಿನಗಳಲ್ಲೇ ಕುದುರೆಗಳಿಂದ ಎಳೆಯಲ್ಪಟ್ಟ ನೇಗಿಲನ್ನು ಉಪಯೋಗಿಸಿ ಹೊಲವನ್ನು ಉಳುವ ಕೆಲಸವು ಅವನಿಗೆ ದೊರೆಯಿತು. ಅದರಿಂದ ದಿನಕ್ಕೆ ನಾಲ್ಕು ಪೆನ್ನು ಸಂಪಾದನೆಯಾಗತೊಡಗಿತು. ಇನ್ನೂ ಕೆಲವು ದಿನಗಳೊಳಗಾಗಿ ಗಣಿಯಲ್ಲಿ ತನ್ನ ಅಣ್ಣನಾದ ಜೇಮ್ಸನಿಗಿದ್ದ 'ಪಿಕ್ಕರ್' ಎಂಬ ಕೆಲಸವು ಜಾರ್ಜನಿಗೂ ದೊರೆಯಿತು. ಆ ಕೆಲಸದಿಂದ ದಿನವೊಂದಕ್ಕೆ ಆರು ಪೆನ್ಸ್ ದೊರೆಯಲಾರಂಭವಾಯಿತು. ಜಾರ್ಜಿನ ಸಂತೋಷಕ್ಕೆ ಕೊನೆಮೊದಲಿಲ್ಲ. ಹಾಗೇ ಕೆಲವು ದಿನಗಳು ಕೆಲಸಮಾಡುವುದರೊಳಗಾಗಿಯೇ, ಅಲ್ಲಿಗೆ ಎರಡುಮೈಲು ದೂರದಲ್ಲಿದ್ದ ಮತ್ತೊಂದು ಗಣಿಯಲ್ಲಿ, ದಿನವೊಂದಕ್ಕೆ ಎಂಟ. ಪೆನ್ನು ಕೂಲಿ ದೊರೆವ ಮತ್ತೊಂದು ಕೆಲಸ ಸಿಕ್ಕಿತು. ಜಾರ್ಜನು ಅದಕ್ಕೆ ಸೇರಿ, ಉತ್ಸಾಹದಿಂದ ಕೆಲಸಮಾಡತೊಡಗಿದನು. ಆ ವೇಳೆಗೆ ಅವನಿಗೆ ಹದಿನಾಲ್ಕು ವರ್ಷಗಳು ತುಂಬಿದುವು. ಜಾರ್ಜನು ಆಗ ತನ್ನ ತಂದೆಗೆ ಸಹಾಯಕ ಕೆಲಸಗಾರ (*Assistant fireman*) ನಾಗಿ ದಿನವೊಂದಕ್ಕೆ ೧ಷಿಲ್ಲಿಂಗ್ ಸಂಬಳದಮೇಲೆ ನಿಯಮಿತನಾದನು. ಆ ದಿನ ಅವನಿಗಾದ ಸಂತೋಷಕ್ಕೆ ಮೇರೆಯಿಲ್ಲ. ತನಗೆ ಹೆಚ್ಚು ಸಂಪಾದನೆಯ ಆ ಕೆಲಸ ದೊರೆತ ಸಂಗತಿಯನ್ನು ಮನೆಯಲ್ಲಿ ತನ್ನ ತಾಯಿಗೆ ತಿಳಿಸಲಿಕ್ಕೆಂದು, ಕಾರ್ಖಾನೆಯು ಬಿಟ್ಟೊಡನೆಯೇ ಮನೆಗೆ ಒಂದೇ ಉಸಿರಿಗೆ ಓಡಿಹೋದನು. ಆ ಸಂತೋಷವಾರ್ತೆಯನ್ನು ಕೇಳಿ, ಆ ತಾಯಿಯೂ ಎಷ್ಟು ಸಮಾಧಾನಗೊಂಡು ಆನಂದಿಸಿರಬಹುದು! ಬಡಜನರು - ಅಲ್ಪತೃಪ್ತರು. ಅತ್ಯಲ್ಪ ಸಹಾಯದಿಂದಲೇ ಅವರ ಹೃದಯವು ತುಂಬಿಹೋಗುವುದು. ಆದರೆ ಅಷ್ಟು ಸುಲಭವಾಗಿ ಧನಾಶಾಪೀಡಿತರಾದ ಶ್ರೀಮಂತರ ಹೃದಯವನ್ನು ಆಹ್ಲಾದಗೊಳಿಸುವುದು ಸಾಧ್ಯವೆ?

ಜಾರ್ಜನು ಹೀಗೆ ಗೊತ್ತಾದ ಆ ಕೆಲಸದಿಂದ ದಿನಕ್ಕೆ ಒಂದು ಷಿಲಿಂಗನ್ನು ಸಂಪಾದನೆ ಮಾಡುತ್ತಿದ್ದುದು ಮಾತ್ರವಲ್ಲ. ಆಗಾಗ, ಬೇರೆ ಎಂತಹ ಕೆಲಸಗಳನ್ನಾದರೂ ಮಾಡಿ, ಅಲ್ಪ ಸ್ವಲ್ಪ ಹೆಚ್ಚು ಹಣವನ್ನೂ ಗಳಿಸುತ್ತಿ

ದ್ದನು. ತನ್ನ ತಂಗಿ ತಮ್ಮಂದಿರ ವಿಷಯದಲ್ಲಿ ಅವನಿಗೆ ವಿಶೇಷ ಮಮತೆ ಯಿತ್ತು. ಹಾಗೆ ಹೆಚ್ಚಾಗಿ ದೊರೆತ ಸಂಪಾದನೆಯಿಂದ ಅವರಿಗೆ ಬೇಕೆನ್ನಿಸಿದ ಬಟ್ಟೆ-ಬರೆ ತಿಂಡಿತೀರ್ಥಗಳನ್ನು ಕೊಂಡುಕೊಟ್ಟು ಅವರ ಮನರಂಜನೆ ಮಾಡುತ್ತಿದ್ದನು. ತನ್ನ ಸಾಮರ್ಥ್ಯದಿಂದ ಜಗತ್ತಿನಲ್ಲೇ ಅಗಾಧವಾದುದೊಂದು ಉದ್ಯೋಗಶಾಖೆಯನ್ನೇ ನಿರ್ಮಾಣಮಾಡಿದ ಆ ಮಹಾಪುರುಷನು, ಅತಿ ಬಡತನದಲ್ಲಿ ಜನನಹೊಂದಿ - ಬಾಲ್ಯವಯಸ್ಸಿನಲ್ಲಿ ವಿಶೇಷ ಕಷ್ಟಪಟ್ಟು - ಕೂಲಿಯಿಂದಲೇ ಜೀವನವನ್ನು ಪ್ರಾರಂಭಿಸಿದನು. ಆದುದರಿಂದ ಲೋಕದಲ್ಲಿ ಮಹತ್ಕಾರ್ಯಗಳನ್ನು ಮಾಡಬೇಕೆಂದರೆ, ಅಂಥವರು ಲಕ್ಷ್ಮೀಪುತ್ರರಾಗಿ ಜನಿಸಿ ಬಂಗಾರದ ತೊಟ್ಟಿಲಲ್ಲೇ ಬೆಳೆಯಬೇಕೆಂಬ ನಿಯಮವೇನೂ ಇಲ್ಲ! ಧೈರ್ಯ, ಸಾಹಸ, ಉತ್ಸಾಹ, ಕಷ್ಟಸಹಿಷ್ಣುತೆ, ನಿಷ್ಕಲ್ಮಷಮನೋಭಾವ ಮುಂತಾದ ಸದ್ಗುಣಗಳಿದ್ದರೆ ಎಂತಹ ಮನುಷ್ಯನಾದರೂ ಅಭಿವೃದ್ಧಿಗೆ ಬರಬಹುದು.

## ಅಧ್ಯಾಯ ೨ 'ವಿದ್ಯಾಭ್ಯಾಸ'

ರಾಬರ್ಟ್ ಸ್ಟೀವನ್ಸನ್ನನು ಲೋಕದ ಸ್ಥಿತಿಗತಿಗಳನ್ನನುಸರಿಸಿ ಕಾಲ ಬಂದಂತೆ ನಡೆವ ಚತುರ ಮನುಷ್ಯನಾಗಿದ್ದನು. ಮುಂದೆ ಕೆಲವು ದಿನಗಳಲ್ಲೇ ಅವರು ಅವರೆಗೆ ವಾಸವಾಗಿದ್ದ ಮನೆಯನ್ನು ಬಿಟ್ಟು 'ಜಾಲೀ ಕ್ಲೋಸ್' ಎಂಬ ಮತ್ತೊಂದು ಸ್ಥಳಕ್ಕೆ ಹೋದರು. ಈ ಹೊಸ ಪ್ರದೇಶದಲ್ಲಿ ಅವರಿಗೆ ಮನೆಯು ಬಾಡಿಗೆಯಿಲ್ಲದೆಯೇ ದೊರೆಯಿತು. ಅಲ್ಲದೆ ಇತರ ಹಲಕೆಲವು ಅನುಕೂಲತೆಗಳೂ ದೊರೆತುವು. ಜೇಮ್ಸನು ಈ ವೇಳೆಗೆ ಪ್ರಬುದ್ಧನಾಗಿ ತಂದೆಗೆ ಸಹಾಯಕನಾಗಿ ಕೆಲಸಮಾಡುವಂತಾದನು. ಮಿಕ್ಕ ಇಬ್ಬರು ಮಕ್ಕಳೂ ಅವನ ಬಳಿಯಲ್ಲೇ 'ಪಿಕ್ಕರ್' ಎಂಬ ಕೆಲಸ ಮಾಡುತ್ತಿದ್ದರು. ಮನೆಯಲ್ಲಿ ಸಂಸಾರವು ಇಷ್ಟುಮಟ್ಟಿಗೆ ಹೆಚ್ಚಿದರೂ ಅವರು ಇನ್ನೂ ಆ ಒಂದೇ ಕೊಠಡಿಯ ಚಿಕ್ಕ ಮನೆಯಲ್ಲೇ ವಾಸಮಾಡುತ್ತಿದ್ದರು.

ಗಂಡುಮಕ್ಕಳೆಲ್ಲರೂ ಸಂಪಾದನೆಗೆ ಸಿದ್ಧರಾದುದರಿಂದ ತಂದೆಮಕ್ಕಳ ಒಟ್ಟು ಸಂಪಾದನೆಯು ವಾರಕ್ಕೆ ಎರಡು ಪೌಂಡುಗಳಷ್ಟಾಯಿತು. ಆದರೂ, ಆಗಿನ ಕಾಲಸ್ಥಿತಿಯಿಂದ ಅವರು ಕೇವಲ ಅನ್ನಬಟ್ಟೆಗಳ ಮಟ್ಟಿಗೆ ತಾಪತ್ರಯವಿಲ್ಲದೆ ಇರಲು ಸಾಧ್ಯವಾಯಿತಲ್ಲದೆ, ಹೆಚ್ಚು ಅನುಕೂಲತೆಗಳೇನೂ ಒದಗಲು ಅವಕಾಶವಿರಲಿಲ್ಲ. ನೆಪೋಲಿಯನ್ನನೊಂದಿಗೆ ನಡೆದಿದ್ದ ಯುದ್ಧದಿಂದ ದೇಶದಲ್ಲಿ ಆಹಾರಾದಿ ಪದಾರ್ಥಗಳ ಧಾರಣೆಯು ವಿಶೇಷ ಹೆಚ್ಚಿ ಹೋಗಿದ್ದಿತು. ಅಲ್ಲದೆ ರಾಜ್ಯಾಂಗದವರು ಹೊರಿಸಿದ್ದ ತೆರಿಗೆಯು ಬಡಜನಗಳಿಗೆ ಸಹಿಸಲಶಕ್ಯವೆಂಬಂತಾಗಿದ್ದಿತು. ಆದರೂ ಸ್ಟೀವನ್ಸನ್ ಕುಟುಂಬದವರು ಇತರ ಕೆಲಸಗಾರರ ಕುಟುಂಬಗಳಿಗಿಂತಲೂ ಎಷ್ಟೋಮಟ್ಟಿಗೆ ಸುಖವಾಗಿದ್ದರು. ಇದಕ್ಕೆ ಮುಖ್ಯ ಕಾರಣ, ಆ ತಂದೆ ಮಕ್ಕಳು ಕಷ್ಟಪಟ್ಟು ಕೆಲಸಮಾಡುವಂತಹ ಚಟುವಟಿಕೆಯ ಸ್ವಭಾವದವರು. ಗೃಹಕೃತ್ಯವನ್ನು ಸಾಗಿಸುವ ರಾಬರ್ಟನ ಪತ್ನಿಯು ಮಿತವ್ಯಯಶೀಲಳು, ಗೃಹಕಾರ್ಯಗಳಲ್ಲೂ ಮಕ್ಕಳ ಪೋಷಣೆಯಲ್ಲೂ ಅತಿ ಚತುರಳು. ಈ ಕಾರಣಗಳಿಂದ ಅವರು, ನಮ್ಮ ಕಥಾನಾಯಕನ ಜನನ ಕಾಲದಲ್ಲಿದ್ದ ಸ್ಥಿತಿಗಿಂತಲೂ ಎಷ್ಟೋಮಟ್ಟಿಗೆ ಉತ್ತಮವಾಗಿದ್ದರು.

ಜಾರ್ಜ್ ಸ್ಟೀವೆನ್ಸನ್ನನು ಬಲಶಾಲಿಯಾದ ಯುವಕನಾಗಿ ಬೆಳೆದನು. ತನ್ನ ವಯಸ್ಸಿನ ಇತರರಿಗಿಂತಲೂ ಅವನು ಎತ್ತರವಾಗಿಯೂ ಗಟ್ಟಿಮುಟ್ಟಾಗಿಯೂ ಇದ್ದನು. ಆಜಾನುಬಾಹುವಾಗಿ ಉಕ್ಕಿನ ಕೊಡತಿಗಳಂತಿದ್ದ ಮೈಕೈಗಳಿಂದ ಅವನು ಎಂತಹ ಕೆಲಸವನ್ನಾದರೂ ಸಾಧಿಸಬಲ್ಲನೆಂದು, ಅವನನ್ನು ನೋಡಿದವರಿಗೆ ಒಂದು ಬಗೆಯ ಸಂತೋಷವುಂಟಾಗುವಂತೆ ಲಕ್ಷಣವಾಗಿದ್ದನು. ದಿನವೆಲ್ಲವೂ ಅವನ ಕಾಲವು ಯಂತ್ರದ ಬಳಿಯಲ್ಲಿ ಕೆಲಸಕಾರ್ಯಗಳಲ್ಲೇ ವ್ಯಯವಾಗುತ್ತಿದ್ದಿತಾದರೂ,ಸ್ವಲ್ಪವೇನಾದರೂ ವಿರಾಮ ದೊರೆತರೆ ಆ ಕಾಲವನ್ನು ಅವನು ಪಕ್ಷಿಗಳ ಗೂಡುಗಳನ್ನು ಸಂಗ್ರಹಿಸುವುದು, ಅವುಗಳಿಗೆ ತಿಂಡಿಕೊಟ್ಟು ಅವನ್ನು ಸಾಧುಮಾಡುವುದು ಮುಂತಾದ ಕೆಲಸಗಳಲ್ಲಿ ಕಳೆಯುವನು. ಅವನ ಈ ಸ್ವಭಾವವು ಪಕ್ಷಿಗಳಿಗೆ ವಿಶೇಷ ಪ್ರಿಯಕರವಾಗಿದ್ದಿರಬೇಕು! ಏಕೆಂದರೆ ಹಲವು ಪಕ್ಷಿಗಳು ಪಂಜರದಲ್ಲಿಟ್ಟು ಕೂಡಿಡಬೇಕಾದ ಆವಶ್ಯಕವೇ ಇಲ್ಲದೆ ಅವನ ಮನೆಯಲ್ಲಿ ಸಾಧು

ವಾಗಿ ಹಾರಾಡಿಕೊಂಡು ನಿರಾತಂಕವಾಗಿ ವಾಸವಾಡುತ್ತಿದ್ದುವು. ಅವನಿಗೆ ಹದಿನೈದುವರ್ಷ ತುಂಬಿತು. ಆಗ ಅವನ ಕೂಲಿಯು ಮತ್ತೊಮ್ಮೆ ಹೆಚ್ಚಿಸಲ್ಪಟ್ಟಿತು. ವಾರಕ್ಕೆ ಹನ್ನೆರಡು ಷಿಲ್ಲಿಂಗ್ ಕೂಲಿಯ ದರದಿಂದ, ಇಂಜನ್ಮ್ಯಾನ್ ಎಂಬ ಹೆಸರಿನಿಂದ ತನ್ನ ತಂದೆಗೆ ಸಹಾಯಕನಾಗಿ ಕೆಲಸ ಮಾಡಲು ನಿಯಮಿತನಾದನು. ಈ ಹೊಸ ಉದ್ಯೋಗವು ಅವನಿಗೆ ಅತಿಶಯ ಉತ್ಸಾಹವನ್ನುಂಟುಮಾಡಿದುದು ಮಾತ್ರವಲ್ಲ; ಪ್ರಯೋಜನಕಾರಿಯಾಗಿಯೂ ಪರಿಣಮಿಸಿತು. ಅವನು, ತನ್ನ ಉದ್ಯೋಗದ ವೇಳೆಯಲ್ಲಿ ತನ್ನ ಇಂಜನ್ನಿನ ಕೆಲಸವೆಷ್ಟೋ ಅಷ್ಟು ಮಾತ್ರವಲ್ಲದೆ, ಅದರ ಪ್ರತಿಯೊಂದು ಭಾಗವನ್ನೂ ಶ್ರದ್ಧೆಯಿಂದ ವಿಮರ್ಶಿಸುತ್ತ, ಒಂದೊಂದು ಭಾಗದ ಉಪಯೋಗವನ್ನೂ ಪರೀಕ್ಷಿಸಿ ತಿಳಿದುಕೊಳ್ಳುವುದರಲ್ಲಿ ಅತ್ಯಂತ ಶ್ರದ್ಧೆಯನ್ನಿಟ್ಟು ಕೆಲಸಮಾಡುತ್ತಿದ್ದನು. ಯಾವುದಾದರೊಂದು ಭಾಗವು ಕೆಟ್ಟು ಕೆಲಸಕ್ಕೆ ಕುಂದಕವಾಗುವುದೆಂದು ತೋರಿದರೆ, ಅನ್ನನೀರುಗಳನ್ನಾದರೂ ಬಿಟ್ಟು ಅದರ ಬಳಿಯಲ್ಲೇ ಕುಳಿತು, ಪ್ರತಿಯೊಂದು ಕೀಲನ್ನೂ ಕಳಚಿ, ಕೆಟ್ಟಿದ್ದ ಭಾಗವನ್ನು ಸರಿಪಡಿಸಿದಲ್ಲದೆ ಅವನಿಗೆ ಸಮಾಧಾನವೆನ್ನಿಸುತ್ತಿರಲಿಲ್ಲ. ಇಂಜನ್ನಿನ ಭಾಗವೇನಾದರೂ ಕೆಟ್ಟರೆ ಅದನ್ನು ಸರಿಪಡಿಸುವ ಕಾರ್ಯವು ಇಂಜನಿಯರ್ ಎಂಬ ಅಧಿಕಾರಿಗೆ ಸಂಬಂಧಪಟ್ಟುದು. ಆದರೆ ಜಾರ್ಜ್ ಸ್ಟೆಪೆನ್ಸನ್ನನು ಇಂಜನ್ನು ತನ್ನ ಕೈಯಲ್ಲಿರುವಾಗ ಅದರ ಯೋಗಕ್ಷೇಮವೆಲ್ಲವೂ ತನಗೇ ಸೇರಿದುದು ಎಂದು ಭಾವಿಸಿದ್ದನು. ಕಾರ್ಯದಲ್ಲಿ ಇಷ್ಟುಮಟ್ಟಿನ ಶ್ರದ್ಧೆಯಿದ್ದರಲ್ಲವೆ, ಆ ಕೆಲಸದ ಸಕಲ ಮರ್ಮಗಳೂ ಗೋಚರವಾಗುವುವು!

ಜಾರ್ಜನಿಗೆ ಚಿಕ್ಕಂದಿನಲ್ಲಿ ಜೇಡಿಮಣ್ಣಿನಲ್ಲಿ ಯಂತ್ರಗಳಂತೆ ಆಟಿಗೆಗಳನ್ನು ಮಾಡುವ ಚಟವಿದ್ದಿತೆಂದು ಹಿಂದೆ ಒಂದೆಡೆಯಲ್ಲಿ ಹೇಳಿದೆಯಲ್ಲವೆ! ಅವನು ಈಗ ದೊಡ್ಡ ಆಳೂ ಬಲಶಾಲಿಯೂ ಆಗಿಬೆಳೆದು, ವಾರಕ್ಕೆ ಹನ್ನೆರಡು ಷಿಲ್ಲಿಂಗುಗಳನ್ನು ಸಂಪಾದಿಸುವಂತಹ ಯುವಕನಾದರೂ ಆ ಚಟವು ಕಡಮೆಯಾಗಲಿಲ್ಲ. ಆದರೆ, ಅವನು ತಾನು ಅವರೆಗೆ ನೋಡಿದ್ದ ಅಥವ ಕೇಳಿದ್ದ ಯಂತ್ರಗಳ ಪ್ರತಿರೂಪಗಳನ್ನು ಮಾತ್ರವೇ ಮಾಡಬಲ್ಲವನಾಗಿದ್ದನು. ಇನ್ನೂ ಅನೇಕ ಬಗೆಯ ಯಂತ್ರಗಳ ವಿವರಣೆಯೂ ಉಪಯೋ

ಗವೂ ದೊಡ್ಡದೊಡ್ಡ ಗ್ರಂಥಗಳಲ್ಲಿ ಹೇಳಲ್ಪಟ್ಟಿದೆಯೆಂದು ಜನಗಳು ಹೇಳಿಕೊಳ್ಳುತಿದ್ದುದು ಅವನಿಗೆ ಆ ವಿಚಾರವನ್ನು ತಿಳಿದುಕೊಳ್ಳಬೇಕೆಂಬ ವಿಷಯದಲ್ಲಿ ಹೆಚ್ಚು ಕುತೂಹಲವನ್ನುಂಟುಮಾಡಿತು. ಆದುದರಿಂದ ತಾನು ಓದುಬರೆಹವನ್ನು ಕಲಿಯಲೇಬೇಕೆಂದು ನಿರ್ಧರಿಸಿದನು.

ತಮ್ಮ ವಿರಾಮಕಾಲವನ್ನು ಹುಂಜಗಳ ಕಾಳಗವನ್ನು ನೋಡುವುದರಲ್ಲೂ, ಕೆಲಸಕ್ಕೆ ಬಾರದ ಹರಟೆಕೊಚ್ಚುವುದರಲ್ಲೂ ಕಳೆಯುತ್ತಿದ್ದ, ಜೊತೆಯ ಕೆಲಸಗಾರರ ಸ್ವಭಾವವು ಜಾರ್ಜನಿಗೆ ಲೇಶಮಾತ್ರವೂ ಸರಿಬೀಳುತ್ತಿರಲಿಲ್ಲ. ಕೆಲಸದಲ್ಲಿ ವಿರಾಮ ದೊರೆಯಿತೆಂದರೆ, ಪುನಃ ತನ್ನಾ ಇಂಜನ್ನಿನ ಸಮೀಪವನ್ನೇ ಸೇರಿ, ಅದರ ಯಾವಯಾವ ಕೀಲು ಯಾವ ಉದ್ದೇಶದಿಂದ ಅಲ್ಲಿ ಇಡಲ್ಪಟ್ಟಿದೆ, ಅದರ ಗೊತ್ತಾದ ಉಪಯೋಗವೇನು ಎಂಬುದನ್ನು ಪರೀಕ್ಷಿಸುವನು. ಹೀಗೆ ತನ್ನ ಯಂತ್ರದ ವಿಷಯದಲ್ಲಿ ತಿಳಿಯಬಹುದಾದಷ್ಟು ಹೆಚ್ಚು ಸಂಗತಿಗಳನ್ನು ತಿಳಿಯಬೇಕೆಂದು ಸದಾ ಹಂಬಲಿಸುತ್ತಿದ್ದನು. ಈ ಆಸೆಯು, ಆ ಸಂಬಂಧ ಗ್ರಂಥಗಳನ್ನು ಅಭ್ಯಾಸಮಾಡದೆ ತೀರದೆಂದು ಮನಸ್ಸಿಗೆ ಹಿಡಿಯಿತು. ಒಡನೆ ಪಕ್ಕದ ಗ್ರಾಮದಲ್ಲಿ ರಾಬಿ ಕೋರ್ವೆಸ್ ಎಂಬಾತನು ಪ್ರಾರಂಭಿಸಿ ನಡೆಸುತ್ತಿದ್ದ ಒಂದು ರಾತ್ರಿಯ ಪಾಠಶಾಲೆಗೆ ವಾರಕ್ಕೆ ಮೂರು ದಿನಗಳಂತೆ ಹೋಗಿ ವಿದ್ಯಾಭ್ಯಾಸಮಾಡಲು ಪ್ರಾರಂಭಿಸಿದನು. ಇದಕ್ಕಾಗಿ ವಾರಕ್ಕೆ ಮೂರು ಪೆನ್ಸುಗಳ ವೇತನವನ್ನು ಕೊಡಬೇಕಾಗಿತ್ತು. ಜಾರ್ಜನು ಬಹು ಅಕ್ಕರೆಯಿಂದ ಕಲಿಯತೊಡಗಿದ ಉತ್ಸಾಹೀ ವಿದ್ಯಾರ್ಥಿಯಾದುದರಿಂದ ಬಹು ಶೀಘ್ರಕಾಲದಲ್ಲೇ ಆ ಉಪಾಧ್ಯಾಯನು ಕಲಿಸಬಹುದಾದಷ್ಟು ವಿದ್ಯೆಯನ್ನೂ ಕಲಿತುಬಿಟ್ಟನು. ಕೇವಲ ಓದುವಿಕೆ ಮತ್ತು ಬರೆಯುವಿಕೆ ಮಾತ್ರವೇ ಸಾಲದೆಂದೂ ತನ್ನ ಅಭ್ಯಾಸದಲ್ಲಿ ಮತ್ತೇನೋ ಒಂದು ಅಂಶವು ಬಿಟ್ಟುಹೋಗಿದೆಯೆಂದೂ ಅವನಿಗೆ ಬೋಧವಾಗುತ್ತಿದ್ದಿತು. ಆ ವೇಳೆಗೆ ಸರಿಯಾಗಿ, ಆಂಡ್ರ್ಯೂ ರಾಬರ್ಟ್ಸನ್ ಎಂಬೊಬ್ಬ ಸ್ಕಾಟ್ಲೆಂಡ್ ದೇಶೀಯನು ಮತ್ತೊಂದು ಪಾಠಶಾಲೆಯನ್ನು ಪ್ರಾರಂಭಿಸಿದನು. ಈ ನೂತನ ಶಾಲೆಯಲ್ಲಿ ಆತನು ಗಣಿತವನ್ನೂ ಕಲಿಸುತ್ತಿದ್ದನು. ಇದು ಜಾರ್ಜನಿಗೆ ಅತ್ಯಂತ ಪ್ರಿಯಕರವಾದ ಸಂಗತಿಯಾಗಿದ್ದಿತು. ಜಾರ್ಜನು ವಾರವೊಂದಕ್ಕೆ ನಾಲ್ಕು ಪೆನ್ಸು ವೇತನಕೊಟ್ಟು

ಆ ಪಾಠಶಾಲೆಗೆ ಸೇರಿ, ಅಲ್ಲಿ ಓದು ಬರೆಹಗಳೊಂದಿಗೆ ಗಣಿತವನ್ನೂ ಕಲಿಯಲಾರಂಭಿಸಿದನು. ಅವನ ಬುದ್ಧಿಯು ಬಹು ಸೂಕ್ಷ್ಮವಾಗಿದ್ದಿತು.

ನೂತನ ಉಪಾಧ್ಯಾಯನು ತನ್ನ ವಿದ್ಯಾರ್ಥಿಗಳ ವಿಷಯದಲ್ಲಿ ವಿಶೇಷ ಮಮತೆಯನ್ನು ತೋರಿಸುತ್ತಿದ್ದನು. ಪ್ರತಿದಿನದ ಪಾಠವು ಮುಗಿಯಿತೆಂಬೊಡನೆಯೇ ಮಾರನೆಯದಿನ ಮಾಡಿಕೊಂಡುಬರುವುದಕ್ಕಾಗಿ ಕೆಲವು ಲೆಕ್ಕಗಳನ್ನು ಕಲ್ಲುಹಲಗೆಯಮೇಲೆ ಹಾಕಿಕೊಡುತ್ತಿದ್ದನು. ಸ್ಟೀವೆನ್ಸನ್ನನು, ತನ್ನ ಜೊತೆಯ ಇತರ ಕೆಲಸಗಾರರಂತೆ, ವ್ಯರ್ಥ ಕಾಲಕ್ಷೇಪಮಾಡದವನಾದ್ದರಿಂದ, ಆಯಾದಿನದ ಲೆಕ್ಕಗಳನ್ನು ತನ್ನ ವಿರಾಮವೇಳೆಯಲ್ಲಿ ಮಾಡಿ ಮುಗಿಸಿ ಮಾರನೆಯದಿನ ಒಪ್ಪಿಸಿ, ಹೊಸ ಲೆಕ್ಕಗಳನ್ನು ಹಾಕಿಸಿಕೊಳ್ಳುವನು. ಹುಂಜದ ಕಾಳಗವೂ, ಕುಡಿತವೂ ಅವನಿಗೆ ಅಸಹ್ಯವನ್ನುಂಟುಮಾಡಿದುವು. ಹೀಗೆ ಮನಸ್ಸನ್ನು, ಮದ್ಯಾದಿಗಳ ಸಂಬಂಧದಿಂದ ಕೆಡಿಸಿಕೊಳ್ಳದೆ ಶುದ್ಧವಾಗಿಟ್ಟುಕೊಂಡು, ಜ್ಞಾನಸಂಪಾದನೆಯಲ್ಲೇ ನಟ್ಟ ಮನಸ್ಸುಳ್ಳವನಾಗಿ ಕೆಲಸಮಾಡುತ್ತಿದ್ದನು. ಈ ಅಭ್ಯಾಸದಿಂದಲೂ ಬೇಸರ ತೋರಿತೆಂದರೆ, ಆ ಕಾಲದಲ್ಲಿ ಅವನು ತನ್ನ ಮುದ್ದಿನ ಪಕ್ಷಿಗಳೊಂದಿಗೂ, ನಾಯಿಯೊಂದಿಗೂ ಆಟವಾಡುತ್ತ ವಿನೋದಗೊಳ್ಳುವನು. ಹೀಗೆ ಏಕನಿಷ್ಠೆಯಿಂದ ತನ್ನ ಯಂತ್ರವೇ ತನ್ನ ಸರ್ವಸ್ವವೂ ಎಂದು ತಿಳಿದು ಸದಾ ಅದರ ಮರ್ಮವನ್ನು ಅರಿವ ಕಾರ್ಯದಲ್ಲೇ ಉದ್ಯುಕ್ತನಾಗಿದ್ದ ಅವನಿಗೆ, ಅದನ್ನು ವೇಗವಾಗಿ ನಡೆಯಿಸುವ, ನಿಧಾನವಾಗಿ ನಡೆಯಿಸುವ - ಬೇಕೆಂದಾಗ ನಡೆಯಿಸುವ ಬೇಡವಾದಾಗ ಅಪಾಯವಿಲ್ಲದಂತೆ ನಿಲ್ಲಿಸುವ ಮುಂತಾದ ಕಾರ್ಯಗಳೆಲ್ಲವೂ ಚೆನ್ನಾಗಿ ಮನನವಾದುವು. ಒಂದೊಂದು ಕೀಲಿನ ಉಪಯೋಗವೂ ಹೃದ್ಗತವಾಯಿತು. ಕಣ್ಣುಮುಚ್ಚಿಕೊಂಡು ಯಂತ್ರದ ಯಾವ ಕೀಲನ್ನಾದರೂ ಉಪಯೋಗಿಸಿ ಯಂತ್ರದಿಂದ ಕೆಲಸಮಾಡಿಸಬಲ್ಲಷ್ಟು ಪರಿಶ್ರಮವು ಅವನಿಗುಂಟಾಯಿತು. ಬಹುದಿನಗಳಿಂದಲೂ, ಅದೇ ಕೆಲಸಮಾಡುತ್ತಿದ್ದ ಅವನಿಗಿಂತಲೂ ಎರಡರಷ್ಟು ವಯಸ್ಸಿನ, ಕೆಲಸಗಾರರಿಗೆ ತಿಳಿಯದಿದ್ದ ಯಂತ್ರದ ಮರ್ಮಗಳೆಲ್ಲ ಅವನಿಗೆ ಗೋಚರಕ್ಕೆ ಬಂದುವು ತಮ್ಮ ಕೆಲಸದಲ್ಲಿ ಪ್ರೌಢಿಮೆಯನ್ನು ಪಡೆದ ತರುವಾಯ, ಮನುಷ್ಯರು ಯುಕ್ತರೀತಿಯಿಂದ ಅಭಿವೃದ್ಧಿಗೆ ಬರುವುದರಲ್ಲಿ ತಡೆಯೇನಿದೆ?

ಪಾತ್ರತೆಯೊಂದು ಪ್ರಾಪ್ತಿಸಿತೆಂದರೆ ಧನವು ಅಗತ್ಯ ದೊರೆತೇದೊರೆಯು ವುದು. ಪಾತ್ರತೆಯಿಲ್ಲದೆ, ಬರೀ ಅಪೇಕ್ಷೆ ಮಾತ್ರವೇ ಯಾವ ಪ್ರತಿಫಲ ವನ್ನು ತಂದೀಯಬಲ್ಲುದು? '*Deserve and then desire*- ಪಾತ್ರತೆಯನ್ನು ಗಳಿಸು - ತರುವಾಯ ಅಪೇಕ್ಷೆಪಡು' ಎಂಬುದೊಂದು ಪ್ರಾಜ್ಞವಾಕ್ಯವಿದೆ! ಇದು ಯುಕ್ತವೇ ಆದರೂ, ಪಾತ್ರತೆಯನ್ನು ಗಳಿಸಿದ ತರುವಾಯ ಅಪೇಕ್ಷೆಪಡಬೇಕಾದುದೇ ಇಲ್ಲ. ಯೋಗ್ಯಪಾತ್ರವೆಂದು ತೋರಿದೊಡನೆಯೇ ಅದಕ್ಕೆ ತಕ್ಕ ಸ್ಥಾನವೂ, ಮಾನವೂ, ಬೆಲೆಯೂ ಲೋಕದಲ್ಲಿ ದೊರೆತೇ ದೊರೆಯುವುದು!

## ಅಧ್ಯಾಯ ೩ "ಮೊದಲನೆಯ ಹಬೆಯಯಂತ್ರ"

ಜಾರ್ಜ್ ಸ್ಟೀವೆನ್ಸನ್ನನು ೧೮೦೧ರ ವೇಳೆಗೆ ಇಪ್ಪತ್ತು ವರ್ಷಗಳ ಯೌವನಸ್ಥನಾದನು. ಎಂದಿನಂತೆ ವಿದ್ಯಾಭ್ಯಾಸವೂ ಗಣಿತಪಾಠವೂ ಕ್ರಮವಾಗಿ ನಡೆದಿತ್ತು. ಈಗ ವಾರಕ್ಕೆ ಅವನಿಗೆ ೧೭॥ ಷಿಲ್ಲಿಂಗ್‌ನಿಂದ ಒಂದು ಪೌಂಡುವರೆಗೆ ಸಂಪಾದನೆಯಾಗುತ್ತಿತ್ತು. ಸಾಲದುದಕ್ಕೆ, ಅವನು ಇತರ ಮಾರ್ಗಗಳಿಂದಲೂ ದ್ರವ್ಯಸಂಪಾದನೆ ಮಾಡುತ್ತಿದ್ದನು. ತಾನೇ ಪ್ರೀತಿಯಿಂದ ಪುಷ್ಟವಾಗಿ ಬೆಳೆಸಿದ ಮೊಲಗಳನ್ನೂ ಪಕ್ಷಿಗಳನ್ನೂ ಮಾರುತ್ತಿದ್ದನು. ಅವನ ದೃಷ್ಟಿಯಲ್ಲಿ ಕಷ್ಟಪಟ್ಟು ನ್ಯಾಯಮಾರ್ಗದಲ್ಲಿ ಮಾಡುತ್ತಿದ್ದ ಯಾವ ಕೆಲಸವೂ ಹೀನವಾದುದೆಂಬ ಭಾವನೆಯಿರಲಿಲ್ಲವಾದುದರಿಂದ, ಅವನು ತನಗೆ ವಿರಾಮವಿದ್ದ ವೇಳೆಯಲ್ಲೆಲ್ಲ, ನೆರೆಹೊರೆಯವರ ಪಾದರಕ್ಷೆ(ಬೂಟ್ಸು)ಗಳನ್ನು ರಿಪೇರಿಮಾಡಿ, ತನ್ಮೂಲಕವೂ ಅಲ್ಪಸ್ವಲ್ಪ ಹಣವನ್ನು ಸಂಪಾದಿಸುತ್ತಿದ್ದನು. ಈ ಸಂಬಂಧದಲ್ಲೇ ಅವನಿಗೆ ಫ್ಯಾನೀ ಹೆಂಡರ್‌ಸನ್ ಎಂಬ ತರುಣಿಯ ಪರಿಚಯವಾಯಿತು. ಆಕೆಯು ಸುಶೀಲೆಯೂ ಬುದ್ಧಿವಂತೆಯೂ, ಆಗಿದ್ದುದರಿಂದ ಜಾರ್ಜನಿಗೂ ಆಕೆಗೂ ದಿನ ದಿನಕ್ಕೆ ಹೆಚ್ಚುಹೆಚ್ಚು ಬಳಕೆಯೂ ಸ್ನೇಹವೂ ಉಂಟಾಗತೊಡಗಿತು. ಮಾ

ರನೇ ವರ್ಷವೇ ಅವರಿಬ್ಬರ ಸ್ನೇಹವೂ ಪ್ರೇಮದಲ್ಲಿ ಪರಿಣಾಮಹೊಂದಿ, ಇಬ್ಬರೂ ವಿವಾಹ ಬಾಂಧವ್ಯದಿಂದ ಒಂದಾದರು. ಜಾರ್ಜನು, ತನ್ನ ಕಾರ್ಯಶಾಲೆಯ ಪಕ್ಕದಲ್ಲೇ ಒಂದು ಮನೆಯನ್ನು ಗೊತ್ತುಮಾಡಿ ಅಲ್ಲಿ ತನ್ನ ಪತ್ನಿಹೊಂದಿಗೆ ವಾಸಿಸತೊಡಗಿದನು. ಆ ತರುಣ ತರುಣಿಯರ ದಾಂಪತ್ಯ ಜೀವನವು ಸುಖಮಯವಾಗಿದ್ದು, ಮುಂದಿನ ವರ್ಷದಲ್ಲೇ ಅವರಿಗೆ ಒಂದು ಗಂಡುಮಗುವನ್ನು ಪ್ರಸಾದಿಸಿತು.

ಚಿಕ್ಕಂದಿನಿಂದಲೂ, ಹಕ್ಕಿಪಕ್ಷಿಗಳನ್ನೂ ಸಣ್ಣಪುಟ್ಟ ಪ್ರಾಣಿಗಳನ್ನೂ ಅಗಾಧ ಪ್ರೇಮದಿಂದ ಕಂಡು ಮುದ್ದಿಸುತ್ತಿದ್ದ ಜಾರ್ಜನು, ತನ್ನ ಉದರ ಸಂಭೂತನಾದ ಮಗನನ್ನು ಎಷ್ಟುಮಟ್ಟಿಗೆ ಪ್ರೀತಿಸುತ್ತಿದ್ದನೆಂದು ಹೇಳಬೇಕಾದುದೇನು? ಆದರೆ ಆತನ ಈ ದಾಂಪತ್ಯಸೌಖ್ಯವು ಬಹುದಿನ ನಡೆದುಬರಲಿಲ್ಲ. ಮದುವೆಯಾದ ಮೂರು ವರ್ಷಗಳಾಗುವ ವೇಳೆಗೆ ಆಕೆಗೆ ಮೃತ್ಯು ಒದಗಿತು. ಸಂಸಾರ ಪ್ರಾರಂಭಕಾಲದಲ್ಲೇ ಒದಗಿದ ಆ ಅಪಮೃತ್ಯುವು, ಸ್ವಾಭಾವಿಕವಾಗಿ ಉತ್ಸಾಹಶಾಲಿಯೇ ಆದ ಆತನನ್ನೂ ಹತಾಶನನ್ನಾಗಿಸಿತು. ಅಷ್ಟರಲ್ಲಿ ಮಾಂಟ್ರೋಜ್ ಎಂಬೊಂದು ಸ್ಥಳದಲ್ಲಿದ್ದ ಒಂದು ಯಂತ್ರದ ಮೇಲುಸ್ತುವಾರಿ ನೋಡಿಕೊಳ್ಳುವುದಕ್ಕಾಗಿ ಅವನಿಗೆ ಆಹ್ವಾನ ಬಂತು. ಪ್ರಿಯಪತ್ನಿಯ ಮರಣದಿಂದ ಕೆಲಕಾಲ ಆ ಸ್ಥಳವನ್ನು ಬಿಡಬೇಕೆಂದುಕೊಂಡಿದ್ದ ಅವನು, ಒಡನೆ ತನ್ನ ಮಗುವನ್ನು ಆಪ್ತರಾದ ನೆರೆಯವರ ವಶದಲ್ಲಿ ಬಿಟ್ಟು, ತನ್ನ ಉದ್ಯೋಗದ ಸ್ಥಳಕ್ಕೆ ಪ್ರಯಾಣಮಾಡಿದನು. ಅಲ್ಲಿ ಚೆನ್ನಾಗಿ ಸಂಪಾದನೆಯಾಗಿ ಒಂದು ವರ್ಷದೊಳಗಾಗಿ ಅವನು ೨೮ ಪೌಂಡುಗಳನ್ನು ಗಳಿಸಿದನು. ಆದರೆ ಸ್ನೇಹಿತರನ್ನೂ ಸ್ವಜನರನ್ನೂ ಬಿಟ್ಟು ಆ ಪರಸ್ಥಳದಲ್ಲೇ ಬಹುಕಾಲ ನಿಲ್ಲುವುದು ಮನಸ್ಸಿಗೆ ಸರಿತೋರಲಿಲ್ಲವಾಗಿ, ಒಂದು ವರ್ಷವಾದೊಡನೆಯೇ ಅಲ್ಲಿಂದ ಹಿಂದಿರುಗಿ ಕಿಲ್ಲಿಂಗ್ ವರ್ತ್ ಎಂಬ ತನ್ನ ಮೊದಲಿನ ಸ್ಥಳಕ್ಕೇ ಬಂದುಬಿಟ್ಟನು.

ಸ್ವಜನರ ಬಳಿಗೆ ಬಂದನಾದರೂ, ಅವನಿಗೆ ಹೊಸಬಗೆಯ ಕಷ್ಟತಾಪತ್ರಯಗಳು, ಮೇಲೆ ಮೇಲೆ ಪ್ರಾಪ್ತವಾಗಿ ಅವನನ್ನು ಹಣ್ಣುಮಾಡುತ್ತಿದ್ದುವು. ಈ ಕಷ್ಟಗಳೊಂದಿಗೆ ಅವನ ತಂದೆಗೆ ಭಯಂಕರವಾದ ದುರ್ದೈವವೊಂದು ಒದಗಿಬಂತು. ಒಂದಾನೊಂದು ದಿನ ಅವನು ಒಂದು ಇಂಜ

ನ್ನಿನ ಒಳಭಾಗದಲ್ಲಿ ಕೆಲಸಮಾಡುತ್ತಿದ್ದಾಗ, ಮತ್ತೊಬ್ಬ ಕೆಲಸಗಾರನು ಆ ಸಂಗತಿಯನ್ನು ತಿಳಿಯದೆ, ಅದರೊಳಕ್ಕೆ ಹಬೆಯನ್ನು ಬಿಟ್ಟುಬಿಟ್ಟನು. ಈ ಅಪಘಾತದಿಂದ ಆತನ ಎರಡು ಕಣ್ಣುಗಳೂ ಪೂರ್ತಿಯಾಗಿ ಹೋಗಿ, ಆತನು ಮರಣಾವಧಿ ಕುರುಡನಾಗಿಬಿಟ್ಟನು. ಜಾರ್ಜನು, ತನ್ನಲ್ಲಿ ಶೇಖರಿಸಿಟ್ಟುಕೊಂಡಿದ್ದ ಹಣದಲ್ಲಿ ತಮ್ಮ ತಂದೆಯ ಸಾಲವನ್ನು ತೀರಿಸಿದ್ದಲ್ಲದೆ, ಮುಂದೆ ಅವರ ಪೋಷಣೆಯ ಭಾರವನ್ನೂ ಹೊರಬೇಕಾಯಿತು. ವೃದ್ಧನೂ ಅಂಧನೂ ಆದ ರಾಬರ್ಟ್ ಸ್ಟೀವರ್ಸನ್ನನೂ ಆತನ ಪತ್ನಿಯೂ ತಮ್ಮ ಮಗನಿದ್ದ ಮನೆಯಬಳಿಯಲ್ಲೇ ವಾಸಿಸುತ್ತ, ಅವನ ಚಿಕ್ಕ ಮಗನಾದ ರಾಬರ್ಟನನ್ನು ಪ್ರೀತಿಸುತ್ತ, ತಮ್ಮ ಕೊನೆಗಾಲವನ್ನು ಮಗನ ಪ್ರೀತಿ ವಿಶ್ವಾಸಗಳ ಆಶ್ರಯದಲ್ಲಿ ತೃಪ್ತರಾಗಿ ಕಳೆದರು. ತಮ್ಮ ಮೊಮ್ಮಗನ ಆಟಪಾಟಗಳೂ, ಅವರಿಗೆ ಆನಂದದಾಯಕವಾಗಿದ್ದು, ಅವರ ವೃದ್ಧಾಪ್ಯದಲ್ಲಿ ಕಾಲಯಾಪನೆಗೆ ಸಹಾಯಕವಾಗಿದ್ದುವು.

೧೮೦೭-೦೮ರಲ್ಲಿ ನೆಪೋಲಿಯನ್ನನೊಂದಿಗೆ ನಡೆದ ಭಯಂಕರ ಯುದ್ಧದ ಮೂಲಕ ದೇಶವೆಲ್ಲ ಅಲ್ಲೋಲ ಕಲ್ಲೋಲವಾಯಿತು. ದೇಶದಿಂದ ಧನವೂ ಜನವೂ ದೋಚಿಹೋದರು. ಧಾರಣೆವಾಸಿಗಳು ಒಂದಕ್ಕೆ ಹತ್ತಾಗಿ ಏರಿದುವು. ಈ ಕಾರಣಕ್ಕಾಗಿ ಸರ್ಕಾರದವರು ತೆರಿಗೆಗಳನ್ನು ಅಪರಿಮಿತವಾಗಿ ಏರಿಸಿಬಿಟ್ಟರು. ಸ್ಟೀವೆನ್ಸನ್ನನು ಉಳಿಸಿಟ್ಟುಕೊಂಡಿದ್ದ ದ್ರವ್ಯವೆಲ್ಲವೂ ಖರ್ಚಾಗಿ ಅವನು ಅತಿಶಯ ದುಸ್ಥಿತಿಗಿಳಿದನು. ಆ ವೇಳೆಗೆ ತನ್ನ ಮಗನು ಯುಕ್ತವಯಸ್ಕನಾಗಲು ಅವನಿಗೆ ಯೋಗ್ಯ ವಿದ್ಯಾಭ್ಯಾಸಮಾಡಿಸಬೇಕೆಂಬ ಚಿಂತೆಯು ಆತನಿಗೆ ಹತ್ತಿತು. ಬಾಲ್ಯದಲ್ಲಿ ಕ್ರಮ ವಿದ್ಯಾಭ್ಯಾಸಮಾಡಲು ಅವಕಾಶವಾಗದೆ ತನಗೆ ಬಂದ ದುರ್ದೆಸೆಯು ತನ್ನ ಮಗನಿಗೂ ಪ್ರಾಪ್ತಿಸಬಾರದೆಂದು, ಅವನಿಗೆ ತನ್ನಿಂದ ಸಾಧ್ಯವಾದಷ್ಟು ಬಗೆಯಿಂದ ಉತ್ತಮರೀತಿಯಿಂದ ಶಿಕ್ಷಣ ಕೊಡಬೇಕೆಂದು ನಿರ್ಧರಿಸಿದನು. ತನಗಿದ್ದ ಸಂಪಾದನೆಯಲ್ಲಿ ಸಂಸಾರದ ತಾಪತ್ರಯಗಳನ್ನು ನೀಗಿಸಿಕೊಂಡು ಮಗನ ವಿದ್ಯಾಭ್ಯಾಸದ ವೆಚ್ಚವನ್ನೂ ಭರಿಸುವುದು ಅಸಾಧ್ಯವೆನ್ನಿಸಿತು. ಆಗಲಾತನು, ತನ್ನ ನೆರೆಹೊರೆಯವರ ಗಡಿಯಾರಗಳನ್ನು ಸರಿಗೊಳಿಸಿ, ಆ ಮೂಲಕ ಉತ್ಪತ್ತಿಯಾದ ದ್ರವ್ಯವನ್ನೆಲ್ಲ ಮಗನ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಲು ನಿಶ್ಚ

ಯಿಸಿದನು. ಈ ಸಂಬಂಧದಲ್ಲೇ ಅವನಿಗೆ ಹೆಚ್ಚು ವೇತನದ ಬೇರೊಂದು ಕೆಲಸ ಸಿಕ್ಕಲೂ ಅವಕಾಶವಾಯಿತು. ಮುಂದೆ ಸ್ವಲ್ಪ ದಿನಗಳಲ್ಲೇ ಅವನು ೧೦೦ ಪೌಂಡುಗಳಷ್ಟು ನಿಧಿಯನ್ನು ಶೇಖರಿಸಿಟ್ಟನು. ೧೮೧೨ನೆಯ ಸಂವತ್ಸರದ ವೇಳೆಗೆ ಅವನ ಆದಾಯವು ವರ್ಷಕ್ಕೆ ನೂರು ಪೌಂಡುಗಳಿಗೇರಿತು. ಈ ಕಾಲದಲ್ಲೂ ಅವನು ತನ್ನ ಗಣಿತಾಭ್ಯಾಸವನ್ನು ಬಿಟ್ಟಿರಲಿಲ್ಲ. ಬುದ್ಧಿಶಾಲಿಯಾದ ಜಾರ್ಜ್ ಸ್ಟೀವೆನ್ಸನ್ನನು ತನ್ನ ಮಗನ ವಿದ್ಯಾಭ್ಯಾಸದಿಂದ ತಾನೂ ಪ್ರಯೋಜನ ಹೊಂದುತ್ತಿದ್ದನು. ಅವನ ಪ್ರಾರಂಭ ವಿದ್ಯಾಭ್ಯಾಸವೆಲ್ಲ ಮುಗಿದ ತರುವಾಯ ಅವನನ್ನು ಎಡಿಂಬರ್ಗ್ ವಿಶ್ವವಿದ್ಯಾನಿಲಯಕ್ಕೆ ಕಳುಹಿ ಅಲ್ಲಿ ಪ್ರೌಢವಿದ್ಯಾಭ್ಯಾಸಕ್ಕೂ ತಕ್ಕ ಅನುಕೂಲತೆಗಳನ್ನು ಒದಗಿಸಿಕೊಟ್ಟನು. ಅಲ್ಲಿ ಒಂದು ಪರ್ಯಾಯ (*session*) ದ ಉಪನ್ಯಾಸಗಳಿಗಾಗಿಯೇ ೮೦ ಪೌಂಡುಗಳನ್ನು ಕೊಡಬೇಕಾಗುತ್ತಿತ್ತು. ಆದರೆ ಜಾರ್ಜನು ಅದಕ್ಕೆಹಿಂದೆಗೆಯದೆ ಬಹು ಕಷ್ಟಪಟ್ಟು ಆ ದ್ರವ್ಯವನ್ನು ಒದಗಿಸಿ ಅಲ್ಲಿಗೆ ಕಳುಹಿಸಿ ಅವನಿಗೆ ಪ್ರೌಢವಿದ್ಯಾಭ್ಯಾಸದ ಪ್ರಯೋಜನವುಂಟಾಗಲು ಅವಕಾಶಮಾಡಿಕೊಟ್ಟನು. ಮಗನೂ, ತಂದೆಯು ತನ್ನ ವಿದ್ಯಾಭ್ಯಾಸಕ್ಕಾಗಿ ಪಡುತ್ತಿದ್ದ ಶ್ರಮದ ಪ್ರಮಾಣವನ್ನರಿತು, ತನ್ನ ಕಾಲವನ್ನು ಸದುಪಯೋಗಗೊಳಿಸಿಕೊಂಡು, ಪ್ರೊಫೆಸರರ ಪ್ರೀತಿವಿಶ್ವಾಸಗಳಿಗೆ ಪಾತ್ರನಾಗಿ, ವಿದ್ಯಾಭ್ಯಾಸಮಾಡಿ, ಗಣಿತಶಾಸ್ತ್ರದಲ್ಲಿ ಬಹುಮಾನಗಳನ್ನು ಸಂಪಾದಿಸಿದನು. ೧೮೨೩ರಲ್ಲಿ ವಿದ್ಯಾಭ್ಯಾಸವು ಮುಗಿಯಲು ಮನೆಗೆ ಹಿಂದಿರುಗಿದ ಮಗನನ್ನು ಕಂಡು, ತಂದೆಯು ಪರಮಾನಂದಗೊಂಡನು.

ಸ್ಟೀವೆನ್ಸನ್ ಕುಟುಂಬದವರ ಚರಿತ್ರೆಯನ್ನು ಮುಂದರಿಸುವ ಮೊದಲು, ಅವರು ಇಷ್ಟುಮಟ್ಟಿಗೆ ಅಭಿವೃದ್ಧಿಗೆ ಬಂದು ಕಾರ್ಯ ಪ್ರಾರಂಭ ಮಾಡುವ ವೇಳೆಗೆ, ಹಬೆಯನ್ನು ಮನುಷ್ಯನು ತನ್ನ ಅನುಕೂಲಕ್ಕಾಗಿ ಉಪಯೋಗಿಸಿಕೊಳ್ಳುವ ವಿಚಾರದಲ್ಲಿ ಎಷ್ಟುಮಟ್ಟಿನ ಅಭಿವೃದ್ಧಿಯಾಗಿತ್ತೆಂದು ಗಮನಿಸುವುದು ಆವಶ್ಯಕವಿದೆ. 'ರೈಲ್‌ವೇ' ಎಂದರೆ, ನೆಲದಮೇಲೆ ಚಕ್ರಗಳು ಸರಾಗವಾಗಿ ಉರುಳುವುದಕ್ಕಾಗಿ ಅವುಗಳ ಕೆಳಗೆ ಸಾಲಾಗಿ ಹೊಂದಿಸಿಟ್ಟ ಉಕ್ಕಿನ ಹಳಿಗೆಗಳೆಂದು ಅರ್ಥವಾಗುತ್ತದೆ. ಇವುಗಳನ್ನು ಪ್ರಾರಂಭದಲ್ಲಿ ಉಪಯೋಗಿಸಬೇಕಾದ ಆವಶ್ಯಕತೆಯುಂಟಾದುದಕ್ಕೆ, ಗಣಿಗಳಿಂದ

ಕಲ್ಲಿದ್ದಲನ್ನು ಸಾಗಿಸುವ ಕಾರ್ಯವನ್ನು ಸರಾಗಗೊಳಿಸಬೇಕೆಂಬುದೇ! ಇದಕ್ಕೂ ಮೊದಲು ಕಲ್ಲಿದ್ದಲಿನ ದೊಡ್ಡದೊಡ್ಡ ಗಾಡಿಗಳನ್ನು ಕುದುರೆಗಳಿಂದ ಎಳೆಸುತ್ತಿದ್ದರು. ಇದರಿಂದ ರಸ್ತೆಯು ಬಹು ಶೀಘ್ರವಾಗಿಯೇ ಕೆಟ್ಟು ಹೋಗುತ್ತಿದ್ದುದರಿಂದ, ಪ್ರಾರಂಭಕ್ಕೆ ನೆಲಕ್ಕೆ ಮರದ ಹಲಗೆ ಅಥವ ತುಂಡುಗಳನ್ನು ಹೊದಿಸಿ ಅವುಗಳಮೇಲೆ ಬಂಡಿಯ ಚಕ್ರಗಳು ಉರುಳುವಂತೆ ಏರ್ಪಡಿಸಿದರು. ಅವೂ ಸಹ ಬಹಳ ಸ್ವಲ್ಪಕಾಲದಲ್ಲೇ ಕಿತ್ತುಹೋಗಿ ತೊಂದರೆಯಾಗುತ್ತಿದ್ದುದರಿಂದ, ಸುಮಾರು ೧೭೩೮ ನೆಯ ವರ್ಷದ ಸುಮಾರಿನಲ್ಲಿ ಆ ಹಲಗೆಗಳಮೇಲೆ ತೆಳುವಾದ ಕಬ್ಬಿಣದ ತಗಡುಗಳನ್ನು ಹೊಡೆದು, ಅವುಗಳಮೇಲೆ ಚಕ್ರಗಳು ಉರುಳಲು ಅನುಕೂಲಪಡಿಸಿದರು.

ಆದರೇನು! ಈವರೆಗೆ ನಡೆದ ಸುಧಾರಣೆಯೆಲ್ಲ ರಸ್ತೆಯನ್ನು ಸುಗಮಗೊಳಿಸುವುದಕ್ಕೆ ಮಾತ್ರವಾಯಿತಲ್ಲದೆ, ಬಂಡಿಯ ಪ್ರಯಾಣವೇಗವನ್ನು ಹೆಚ್ಚಿಸುವ ಪ್ರಯತ್ನವಲ್ಲ. ಈ ಕಾರ್ಯವು ೧೭ ನೆಯ ಶತಮಾನದ ಪ್ರಾರಂಭದಲ್ಲೇ ಸಾಲೊಮನ್ ಡಿ ಕಾಸ್ ಎಂಬೊಬ್ಬ ಪ್ರಾನ್ಸ್ ದೇಶೀಯನಿಂದ ಪ್ರಾರಂಭಿಸಲ್ಪಟ್ಟಿದ್ದಿತು. ಆದರೆ ಆ ಕಾಲದ ಜನರು ಆ ಸುಧಾರಣೆಯ ಮಹತ್ವವನ್ನು ಲೇಶಮಾತ್ರವೂ ಅರಿಯದವರಾಗಿದ್ದುದರಿಂದ ಅವನು ಹುಚ್ಚನೆಂದು ತೀರ್ಮಾನಿಸಿ ಸೆರೆಮನೆಯನ್ನು ಸೇರಿಸಿದರು. ಆ ದುರ್ದೈವಿಯು, ತಾನು ಹುಚ್ಚನಲ್ಲ. ತಾನು ಕಂಡುಹಿಡಿದಿರುವ ತತ್ವವನ್ನು ಪ್ರಯೋಗಕ್ಕಿಟ್ಟರೆ ದೇಶದಲ್ಲಿ ಲಕ್ಷ್ಮಿಯು ತಾಂಡವವಾಡುವಂತೆ ಸಂಪತ್ತು ಅಭಿವೃದ್ಧಿಗೊಳ್ಳುವುದು, ಎಂದು ಅರಚಿಕೊಂಡರೂ ಕೇಳುವವರಿರಲಿಲ್ಲ. ಹೀಗಾಗಿ ಆ ದುರ್ದೈವಿಯು, ತನ್ನ ಆ ಮಹತ್ವದ ಭಾವನೆಯೊಂದಿಗೆ ಸೆರೆಮನೆಯಲ್ಲೇ ಮರಣ ಹೊಂದಿದನು.

ಹದಿನೇಳನೆಯ ಶತಮಾನದ ಕೊನೆಯಭಾಗದಲ್ಲಿ ಸರ್ ಹಂಫ್ರಿಮ್ಯಾಕ್ ವರ್ತ್ ಎಂಬಾತನು ಹಬೆಯ ಯಂತ್ರದ ಸಹಾಯದಿಂದ ಕಬ್ಬಿಣದ ಹಳಿಗಳಮೇಲೆ ಒಂದರಹಿಂದೊಂದರಂತೆ ಹಲವು ಗಾಡಿಗಳನ್ನು ತಗುಲಿಸಿ ಸಾಗಿಸುವುದು ಸಾಧ್ಯವೆಂದು ಸೂಚಿಸಿದ್ದನು. ಮತ್ತು ೧೬೮೦ ರಲ್ಲಿ ಇಂಗ್ಲೆಂಡಿನ ಸುಪ್ರಸಿದ್ಧ ವಿಜ್ಞಾನಶಾಸ್ತ್ರಜ್ಞನಾದ ಸರ್ ಐಜಾಕ್‌ನ್ಯೂಟನ್ನನು ಒಬ್ಬನೇ ಮನುಷ್ಯನನ್ನು ಸಾಗಿಸಿಕೊಂಡು ಹೋಗಬಲ್ಲ ಚಿಕ್ಕದೊಂದು ಹಬೆಯಯಂ

ತ್ರವನ್ನು ಕುರಿತು ವರ್ಣಿಸಿದನು. ಈ ತರುವಾಯ ಡಾ. ಡಾರ್ವಿನ, ಡಾ. ರಾಬಿನ್ಸನ್, ಜೇಮ್ಸ್‌ವಾಟ್ ಮುಂತಾದ ವೈಜ್ಞಾನಿಕರೆಲ್ಲರೂ, ವಿಧವಿಧವಾಗಿ ಪ್ರಯತ್ನಿಸಿ ಹಬೆಯನ್ನು ಹೇಗೆ ಸ್ವಾಧೀನಕ್ಕೆ ತಂದುಕೊಂಡು ಅದರಿಂದ ಉಪಯೋಗಕರವಾದ ಕೆಲಸ ಮಾಡಿಸಿಕೊಳ್ಳಬಹುದೆಂದು ಕಂಡುಹಿಡಿದಿದ್ದರು. ಕೊನೆಗೆ ೧೭೭೦ ರ ವೇಳೆಗೆ ಕಗ್ನಾಟ್ ಎಂಬೊಬ್ಬ ಫ್ರಾನ್ಸ್ ದೇಶೀಯನು ಉಪಯೋಗಾರ್ಹವಾದ ಒಂದು ಯಂತ್ರವನ್ನು ಗೊತ್ತಾಗಿ ನಿರ್ಮಿಸಿದನು. ಆದರೆ, ಅದನ್ನು ಪ್ರಯೋಗಕ್ಕೆ ಇಟ್ಟಾಗ ಅದು ದೊಡ್ಡದೊಂದು ಗೋಡೆಯನ್ನು ಬೀಳಿಸಿ, ಭಯಂಕರವೆನ್ನಿಸಿದುದರಿಂದ ಅದನ್ನು ವಿಚಿತ್ರವಸ್ತುವೆಂದು ಪ್ರದರ್ಶನಾಲಯದಲ್ಲಿ ಮಾತ್ರವೇ ಇಡಲು ಉಪಯೋಗಿಸಿ, ಕೆಲಕಾಲ ಸುಮ್ಮನಾದರು.

೧೮೦೦ ರಲ್ಲಿ ನ್ಯೂಕಾಸೆಲ್ ಎಂಬಲ್ಲಿದ್ದ ಮಿ|| ಥಾಮಸ್ ಎಂಬಾತನು, ನಾಲ್ಕು ಚಕ್ರಗಳಮೇಲೆ ಸಾಮಾನ್ಯವಾದ ರಸ್ತೆಯಮೇಲೂ ಓಡಬಲ್ಲ ಒಂದು ಹಬೆಯ ಯಂತ್ರವನ್ನು ಕಂಡುಹಿಡಿಯಲು ಸಮರ್ಥನಾದನು. ಅದನ್ನು ಲಂಡನ್ನಿನಲ್ಲಿ ಪ್ರದರ್ಶಿಸಲು ಕೊಂಡೊಯ್ಯುತ್ತಿದ್ದಾಗ, ಎತ್ತು ಕುದುರೆಗಳ ಸಹಾಯವಿಲ್ಲದೆಯೇ ಓಡುತ್ತಿದ್ದ ಆ ಬಂಡಿಯನ್ನು ಕಂಡು ಜನರು ಅದು ಭೂತಚೇಷ್ಟೆಯೋ ಎಂದು ಭಯಗೊಂಡರು. ಸುಂಕದಕಟ್ಟೆಯ ಬಳಿಯಿದ್ದ ಕಾವಲುಗಾರರನ್ನು ಕುರಿತು, *ಸುಂಕ ಎಷ್ಟು ಕೊಡಬೇಕೆಂದು ಪ್ರಶ್ನಿಸಲು, ಅವನು ಭಯಗೊಂಡು- 'ಭೂತಮಹಾಶಯ, ಏನೂ ಕೊಡಬೇಕಾದ್ದಿಲ್ಲ - ಹೋಗು ಹೋಗು' ಎಂದು ಹೋಗಲಿತ್ತನಂತೆ.

ಹಬೆಯ ಯಂತ್ರವು ಅಷ್ಟುಮಟ್ಟಿನ ಪೂರ್ಣಾವಸ್ಥೆಗೆ ಬಂದಿದ್ದಿತಾದರೂ, ಆಗಿನ ರಸ್ತೆಗಳ ದುಸ್ಥಿತಿಯಿಂದ ಅದರ ಅಭಿವೃದ್ಧಿಯು ಕೆಲಕಾಲ ತಡೆಯಲ್ಪಟ್ಟಿತು. ಕೊನೆಗೆ ಮಿ|| ಬ್ಲಾಕೆಟ್ ಎಂಬಾತನು ೧೮೧೧ರಲ್ಲಿ ಕಬ್ಬಿ

---

* *'What is to pay' asked the driver.*
*The man clung to the gatepost, and stammered; "N-n- nothing to pay! My dear Mr. Devil, drive on as fast as you can! Nothing to pay!'*

*-George Stephenson. PP. 34-35.*

ಣದ ಹಳಿಗಳನ್ನು ನೆಲದಮೇಲೆ ಜೋಡಿಸಿ, ಆ ರಸ್ತೆಯಮೇಲೆ, ಒಂದೇ ಕುದುರೆಯು ಎರಡು ದೊಡ್ಡ ಗಾಡಿಗಳನ್ನು ಎಳೆಯುವ ಸೌಕರ್ಯವನ್ನು ಏರ್ಪಡಿಸಿದನು. ರಸ್ತೆಯು ಹೀಗೆ ಸುಧಾರಣೆಯಾದುದರೊಂದಿಗೇ ಯಂತ್ರವನ್ನು ಸುಧಾರಿಸುವ ಪ್ರಯತ್ನವೂ ನಡೆದಿದ್ದಿತು. ಹಲವುಮಂದಿ ಯಂತ್ರವಿದರೂ, ವೈಜ್ಞಾನಿಕರೂ ಅದನ್ನು ಹೇಗೆ ಪೂರ್ಣಾವಸ್ಥೆಗೆ ತಂದು ಉಪಯೋಗಕ್ಕೆ ಸಿದ್ಧಗೊಳಿಸಬಹುದೆಂಬ ವಿಷಯದಲ್ಲಿ, ಅಹರ್ನಿಶಿ ಯೋಚನಾಮಗ್ನರಾಗಿದ್ದರು.- ಅವರೆಲ್ಲರ ತಪಸ್ಸೂ, ನಮ್ಮ ಕಥಾನಾಯಕನಲ್ಲಿ ಸಿದ್ಧಿಹೊಂದಿದುವು. ಆತನು, ಅದನ್ನು ಪರಿಪೂರ್ಣಾವಸ್ಥೆಗೆ ತಂದು, ಉಪಯೋಗಕ್ಕೆ ಸಿದ್ಧಗೊಳಿಸಿ ಯಶಸ್ವಿಯಾದನು.

ವಿ॥ ಬ್ಲಾಕೆಟ್ಟನು ಮೇಲ್ಕಂಡಂತೆ ಯಂತ್ರವನ್ನು ತಯಾರಿಸಿ, ಪ್ರಯೋಗವನ್ನು ನಡೆಯಿಸುತ್ತಿದ್ದ ಕಾಲದಲ್ಲಿ ಜಾರ್ಜ್ ಸ್ಟೀವೆನ್ಸನ್ನನು ಕಿಲ್ಲಿಂಗ್‌ವರ್ತ್ ಗಣಿಯಲ್ಲೇ ಇಂಜನಿಯರ್ ಆಗಿದ್ದುದರಿಂದ, ಆವರೆಗೆ ಆ ಪ್ರಾಂತದಲ್ಲಿ ತಯಾರಾಗಿದ್ದ ಯಂತ್ರಗಳ ಮಾದರಿಗಳನ್ನೆಲ್ಲ ನೋಡಿ, ಅವುಗಳಲ್ಲಿದ್ದ ಲೋಪಗಳನ್ನೆಲ್ಲ ಪರೀಕ್ಷಿಸಿ ತಿಳಿಯಲು ವಿಶೇಷ ಅವಕಾಶವೊದಗಿದ್ದಿತು. ಬ್ಲಾಕೆಟ್ಟನ ಪ್ರಯತ್ನದ ಮುಂದೆ ಮತ್ತಾರೂ ಸುಧಾರಣೆಯನ್ನು ನಡೆಸಿರಲಿಲ್ಲ. ಜಾರ್ಜನು ಇದನ್ನು ಕಂಡು, ತಾನು ಈವರೆಗೆ ತಯಾರಾಗಿರುವ ಮಾದರಿಗಳನ್ನೆಲ್ಲ ಮೀರಿಸುವಂತಹ ಯಂತ್ರವೊಂದನ್ನು ರಚಿಸಬಲ್ಲೆನೆಂದು ತನ್ನ ಗಣಿಯ ಯಜಮಾನನಿಗೆ ಭರವಸೆಕೊಟ್ಟನು. ಲಾರ್ಡ್ ರ್‍ಯಾವೆನ್ಸ್‌ವರ್ತ್ ಎಂಬ ಹೆಸರಿನ ಆ ಧಣಿಯು, ಸ್ಟೀವೆನ್ಸನ್ನನ ಸಾಮರ್ಥ್ಯವನ್ನು ಬಲ್ಲವನಾಗಿದ್ದುದರಿಂದ ಒಡನೆ ಆ ಕೆಲಸಕ್ಕೆ ಆವಶ್ಯಕವಾಗುವಷ್ಟು ದ್ರವ್ಯಸಹಾಯಮಾಡುವೆನೆಂದು ವಾಗ್ದಾನಮಾಡಿದನು ಧನಸಹಾಯವು ಹಾಗೆ ಒದಗಿತಾದರೂ, ಯೋಗ್ಯ ಕೆಲಸಗಾರರನ್ನು ಹವಣಿಸಿಕೊಳ್ಳುವುದು ಸುಲಭವಾಗಲಿಲ್ಲ. ಆದರೂ, ಆ ಧೀರನು ಕೆಲಸಕ್ಕೆ ಪ್ರಾರಂಭಿಸಿ, ತಮ್ಮ ಗಣಿಯ ಕಮ್ಮಾರನ ಸಹಾಯದಿಂದಲೇ ಹತ್ತು ತಿಂಗಳ ಪರಿಶ್ರಮದಿಂದ ಒಂದು ಹೊಸ ಮಾದರಿಯ ಯಂತ್ರವನ್ನು ರಚನೆಮಾಡಿದನು. ೧೮೧೪ನೆಯ ಜೂಲೈ ೨೫ರಲ್ಲಿ ಅದನ್ನು ಮೊದಲನೆಯ ಬಾರಿ, ಪ್ರಯೋಗಕ್ಕಿಟ್ಟು ಪರೀಕ್ಷಿಸಿದರು. ಆ ಯಂತ್ರವು ಮೂವತ್ತು ಟನ್ನುಗಳ ಭಾರವನ್ನು ಹೊತ್ತು ಬಂಡಿ

ಗಳನ್ನೆಳೆದುಕೊಂಡು ಏರ್ರಿಕೆಯಲ್ಲಿ ಗಂಟೆಯೊಂದಕ್ಕೆ ನಾಲ್ಕುಮೈಲುಗಳಂತೆ ಪ್ರಯಾಣಮಾಡಿತು.

ಸ್ಟೀವೆನ್ಸನ ಈ ಯಂತ್ರವು, ಕೇವಲ ಪ್ರದರ್ಶನಕ್ಕಾಗಿ ಮಾತ್ರ ರಚನೆಯಾದುದಾಗಲಿಲ್ಲ. ಅಂದಿನಿಂದಲೇ ಕ್ರಮವಾಗಿ ಆ ಮೂಲಕವೇ ಕಲ್ಲಿದ್ದಲನ್ನೂ ಸಾಗಿಸುತ್ತಾ ಬಂದರು. ಹೀಗೆ ಒಂದು ವರ್ಷಕಾಲ ನಡೆಯಿತು. ಕೊನೆಯಲ್ಲಿ ನೋಡಲಾಗಿ, ಕುದುರೆಗಳ ಮೂಲಕ ಎಳೆಸಿದ್ದರೆ ಎಷ್ಟು ಖರ್ಚಾಗುತ್ತಿದ್ದಿತೋ, ಈ ಹಬೆಯಂತ್ರದ ಮೂಲಕವೂ ಅಷ್ಟೇ ಖರ್ಚಾಗಿದ್ದಿತು. ಇದು ಕಾರ್ಖಾನೆಯ ಯಜಮಾನರಿಗೆ ನಿರುತ್ಸಾಹವನ್ನುಂಟುಮಾಡಿದುದರಿಂದ- ಮುಂದೆ ಅವರ ಮೂಲಕ ದ್ರವ್ಯಸಹಾಯ ಪಡೆದು ಅದನ್ನು ಅಭಿವೃದ್ಧಿಗೊಳಿಸಬೇಕಾಗಿದ್ದರೆ, ಆ ಯಂತ್ರದಲ್ಲಿದ್ದ ಲೋಪಗಳನ್ನು ತಪ್ಪದೆ ತಿದ್ದಿ, ಅದನ್ನು ಸುಧಾರಿಸಬೇಕೆಂದು ಸ್ಟೀವೆನ್ಸನ್ನನು ನಿರ್ಧರಿಸಿಕೊಂಡನು. ಆ ಯಂತ್ರದಲ್ಲಿದ್ದ ದೊಡ್ಡ ಲೋಪವೆಂದರೆ, ನಡೆಯುವಾಗ ಅದು ವಿಶೇಷವಾಗಿ ಅಲುಗಾಡುತ್ತಾ, ಶಬ್ದಮಾಡುತ್ತಿದ್ದಿತು. ಅಲ್ಲದೆ, ಯಂತ್ರ ನಡೆಯಲು ಆವಶ್ಯಕವಾದಷ್ಟು ಹಬೆಯು ಹೋಗಲಾಗಿ ಮಿಕ್ಕುದೆಲ್ಲವೂ ಹೊರಕ್ಕೆ ಹೋಗಿ ವ್ಯರ್ಥವಾಗುತ್ತಿದ್ದಿತು. ಜಾರ್ಜನು, ಈ ಲೋಪಗಳನ್ನು ಹೇಗೆ ಸರಿಪಡಿಸಬಹುದೆಂದು ಬಹುದಿನಗಳವರೆಗೆ ತದೇಕಧ್ಯಾನದಿಂದ ಯೋಚಿಸಿ, ಕೊನೆಗೆ ಅವುಗಳನ್ನು ಸರಿಪಡಿಸುವ ಉಪಾಯಗಳನ್ನು ಕಂಡುಹಿಡಿದು, ೧೮೧೫ ರ ವೇಳೆಗೆ ಯಂತ್ರವನ್ನು ಸುಧಾರಿಸಿದನು. ಆಗ ಅವನ ಯಂತ್ರದ ಪ್ರಯಾಣ ವೇಗವು ದ್ವಿಗುಣಿತವಾಯಿತಲ್ಲದೆ, ಬಂಡಿಯು ಪ್ರಯಾಣಮಾಡುವಾಗ, ಅಲುಗಾಡದೆ, ಶಬ್ದವಾಗದೆ, ಸರಾಗವಾಗಿ ಸಾಗುತ್ತಿದ್ದಿತು. ಜಾರ್ಜನು ತನ್ನ ಈ ಮೊದಲನೆಯ ಹಬೆಯ ಯಂತ್ರವನ್ನು 'ಮೈಲಾರ್ಡ್' ಎಂದರೆ 'ನನ್ನ ಪ್ರಭು' ಎಂಬ ನಾಮಧೇಯದಿಂದ ಕರೆದು ಗೌರವಿಸಿದನು.

## ಅಧ್ಯಾಯ ೪ 'ಚೀಫ್ ಇಂಜನಿಯರ್ ಅಧಿಕಾರ'

ಮನುಷ್ಯನಾಗಿ ಜನ್ಮಿಸಿದವನು ತನ್ನ ಜನ್ಮವನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂದು ಇಚ್ಛಿಸಿದಲ್ಲಿ, ಸದಾ ಉದ್ಯೋಗಿಯಾಗಿರುವ ಅಭ್ಯಾಸವನ್ನಿಟ್ಟುಕೊಳ್ಳತಕ್ಕುದೊಂದು ಅತ್ಯಾವಶ್ಯಕವಾದ ಕಾರ್ಯವಾಗಿದೆ. ಈ ಒಂದು ಅಭ್ಯಾಸದಿಂದ, ಅವನಿಂದ ಕಾಲಾನುಸಾರ ಪ್ರಪಂಚಕ್ಕೆ ಅಗಾಧ ಪ್ರಯೋಜನವುಂಟಾಗದಿರದು. ನಿರುದ್ಯೋಗಿಯಾದವನು, ಪರೋಪಕಾರಿಯಾಗದಿರುವುದಂತಿರಲಿ, ತನ್ನ ಹಿತವನ್ನೇ ತಾನು ಸಾಧಿಸಿಕೊಳ್ಳಲಾರನು. ಆದುದರಿಂದ ಮನುಷ್ಯನು, ಸರ್ವದಾ ಯಾವುದಾದರೊಂದು ಉಪಯುಕ್ತವಾದ ಕಾರ್ಯವನ್ನು ಕೈಕೊಂಡು ನಿರಲಸಿಕೆಯಿಂದ ಕೆಲಸ ಮಾಡುವ ಅಭ್ಯಾಸವನ್ನು ಬಾಲ್ಯದಿಂದಲೂ ನಡೆಯಿಸಿಕೊಂಡು ಬರಬೇಕು. ಇದು ಕೇವಲ ಐಹಿಕವೇ ಆಗಿದ್ದರೂ ಕಾಲಕ್ರಮದಲ್ಲಿ ಐಹಿಕ ಪಾರತ್ರಿಕಗತಿಗಳೆರಡನ್ನೂ ಸಾಧಿಸಿಕೊಡಲು ಸಾಧಕವಾಗುವುದು.

ಜಾರ್ಜ್ ಸ್ಟೀವನ್ಸನ್ನನು, ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ, ಹಬೆಯ ಯಂತ್ರದ ಉತ್ಕೃಷ್ಟ ಮಾದರಿಯನ್ನು ತಯಾರಿಸಿ ತನ್ನ ಜೊತೆಯವರಿಂದ ಹೊಗಳಿಕೆಗೆ ಪಾತ್ರನಾದುದರೊಂದಿಗೇ ಅನೇಕ ಮಂದಿ ಗಣಿ ಕೆಲಸಗಾರರ ಪ್ರಾಣರಕ್ಷಣೆಗೆ ಅತ್ಯಾವಶ್ಯಕವೆನ್ನಿಸುವ - ಗಣಿಗಳಲ್ಲಿ ಉಪಯೋಗಿಸಬಹುದಾದ 'ಸೇಫ್ಟೀಲ್ಯಾಂಪ್' ಎಂಬೊಂದು, ಕೈದೀಪವನ್ನು ಕಂಡುಹಿಡಿದು ಮಹದುಪಕಾರ ಮಾಡಿದನು. ೧೮೦೬ನೆಯ ಸಂವತ್ಸರದಲ್ಲಿ ಆತನು ಕಿಲ್ಲಿಂಗ್‌ವರ್ತ್ ಎಂಬಲ್ಲಿ ಯಂತ್ರ ನಡೆಯಿಸುವ ಕೆಲಸದಲ್ಲಿದ್ದಾಗ ಗಣಿಯಲ್ಲಿ ಸ್ಫೋಟವಾಗಿ ಹತ್ತುಮಂದಿ ಒಡನೆ ಮೃತ್ಯುವಿಗೆ ತುತ್ತಾದರು. ಗಣಿಗಳಲ್ಲಿ ಸೇರಿರುವ ವಿಷವಾಯುವಿಗೆ ಭೂಮಂಡಲದ ಮೇಲಿನ ವಾತಾವರಣದ ಸಂಪರ್ಕವಾಯಿತೆಂದರೆ, ಅದು ಸ್ಫೋಟವಾಗಿ ಫಿರಂಗಿಯನ್ನು ಹಾರಿಸಿದಂತೆ ಭಯಂಕರ ಶಬ್ದವನ್ನುಂಟುಮಾಡಿ, ವಿಶೇಷ ಪ್ರಮಾಣದ ಕಲ್ಲುಮಣ್ಣುಗಳನ್ನು ತೂರಿ ಹಲವರಿಗೆ ಪ್ರಾಣಾಪಾಯಕ್ಕೆ ಕಾರಣವಾಗುವುದು. ಸ್ಟೀವನ್ಸನ್ನನು ಈ ಅನಾಹುತವನ್ನು ಹೇಗಾದರೂ ತಪ್ಪಿಸಬೇಕೆಂದು ಬಹು ದಿನಗಳವರೆಗೆ ಯೋಚಿಸಿ, ಒಂದು ನವೀನರೀತಿಯ ದೀಪವನ್ನು ತಯಾರಿಸಿ

ಕೊಟ್ಟನು. ೧೮೧೫ ರಲ್ಲಿ ಲಂಡನ್ನಿನ ವಿಶ್ವವಿದ್ಯಾನಿಲಯದಲ್ಲಿ ಸುಪ್ರಸಿದ್ಧ ಭೌತಿಕ ರಸಾಯನಶಾಸ್ತ್ರಜ್ಞನೆಂದು ಹೆಸರಾಗಿದ್ದ ಸರ್. ಹಂಫ್ರಿಡೇವಿ ಎಂಬಾತನೂ ಅಂತಹ ಒಂದು ದೀಪವನ್ನು ತಯಾರಿಸಿಕೊಟ್ಟನು. ಡೇವಿಯು ಶಾಸ್ತ್ರಜ್ಞಾನದ ಸಹಾಯದಿಂದ ತಯಾರಿಸಿದ್ದರೆ, ಜಾರ್ಜನು ಸ್ವಾನುಭವದಿಂದಲೂ ಮೇಲೆ ಮೇಲೆ ಗಣಿಗಳಲ್ಲುಂಟಾಗುತ್ತಿದ್ದ ಅನಾಹುತಗಳ ಕಾಲದಲ್ಲಿ ಉಪಯೋಗಿಸಿ, ಅದರ ಸಾಧಕ ಬಾಧಕಗಳನ್ನು ಸರಿಗೊಳಿಸಿಕೊಳ್ಳುತ್ತ ಬಂದ ಪ್ರಯೋಗಗಳಿಂದಲೂ ತಯಾರಿಸಿದ್ದನು. ಪ್ರದರ್ಶನಕ್ಕೆ ಬಂದಾಗ್ಗೆ, ಇಬ್ಬರಲ್ಲಿ ಯಾರೋ ಒಬ್ಬರು ಮತ್ತೊಬ್ಬರ ಮಾದರಿಯನ್ನು ನೋಡಿ, ಮೋಸದಿಂದ ತಯಾರಿಸಿದುದೆಂಬ ಸಂಶಯವು ಹುಟ್ಟಿತು. ಹಂಫ್ರಿಡೇವಿಯು ವಿಶ್ವವಿದ್ಯಾನಿಲಯದಲ್ಲಿ ಘನವಾದ ಅಧಿಕಾರ ಸ್ಥಾನದಲ್ಲಿದ್ದುದರಿಂದ ಸ್ವಾಭಾವಿಕವಾಗಿ ಆತನ ಪಕ್ಷವೇ ಗೆದ್ದು ತನ್ಮೂಲಕ ಆತನಿಗೆ ೨೦೦೦ ಪೌಂಡುಗಳ ಬಹುಮಾನವು ದೊರೆಯಿತು. ಸ್ಟೀವೆನ್‌ಸನ್ನನಿಗೆ ನೂರು ಗಿನಿ (೧೦೫ ಪೌಂಡುಗಳು)ಗಳ ಬಹುಮಾನಕೊಟ್ಟರು.– ಸ್ಟೀವೆನ್‌ಸನ್ನನ ಸ್ನೇಹಿತರಿಗೂ ಹಿತಚಿಂತಕರಿಗೂ ಇದು ಸಹನೆಯಾಗದೆ, ೧೮೧೭ನೆಯ ಸಂವತ್ಸರದಲ್ಲಿ ಆತನು ಆ ದೀಪವನ್ನು ತಯಾರಿಸುವುದಕ್ಕಾಗಿ ಪಟ್ಟ ಪರಿಶ್ರಮವನ್ನು ಕುರಿತು ವರ್ಣಿಸುವ ಒಂದು ವಿಸ್ತಾರವಾದ ಲೇಖನವನ್ನು ಸಚಿತ್ರವಾಗಿ ಬರೆಸಿ, ವಾರ್ತಾಪತ್ರಿಕೆಗಳಲ್ಲಿ ಪ್ರಕಟಗೊಳಿಸಿದರು. ಸ್ಟೀವೆನ್‌ಸನ್ನನು ತಾನು ಕಂಡುಹಿಡಿದ ದೀಪವನ್ನು ಹಲವು ವಿಧ ಪರೀಕ್ಷೆಗಳಿಗೊಳಪಡಿಸಿ, ಗಣಿಗಳಲ್ಲಿ ಒತ್ತಿಡಲ್ಪಡುತ್ತಿದ್ದ ಹೈಡ್ರೊಜನ್ ಎಂಬ ವಾಯುವಿಶೇಷದೊಂದಿಗೆ, ಭೂಮಿಯ ಮೇಲಣ ವಾಯುವಿನೊಂದಿಗೆ ಸಂಬಂಧವನ್ನುಂಟುಮಾಡದಂತೆಯೇ, ಈ ದೀಪದ ಮೂಲಕ ಗಣಿಗಳಲ್ಲಿ ಬೆಳಕನ್ನು ಹೊಂದಲು ದೀಪವು ಹೇಗೆ ತಯಾರಿಸಲ್ಪಡುವುದು ಆವಶ್ಯಕವೆಂಬುದನ್ನು ಕಾರ್ಯಕಾರಣಗಳೊಂದಿಗೆ ಆ ಲೇಖನದಲ್ಲಿ ವಿವರಿಸಿದ್ದನು. ಆತನ ಈ ಪರಿಶ್ರಮಕ್ಕಾಗಿ ಮೆಚ್ಚಿದ ಗಣಿಯ ಕೆಲಸಗಾರರು ಒಂದು ಸಾವಿರ ಪೌಂಡುಗಳ ನಿಧಿಯನ್ನು ಶೇಖರಿಸಿ ಆತನಿಗೆ ಸಮರ್ಪಿಸಿದರು. ಅದೇ ಸಂದರ್ಭದಲ್ಲೇ ಗಣಿಗಳಲ್ಲಿ ಕಲ್ಲಿದ್ದಲನ್ನು ಹೊರುವ ಮುಂತಾದ ಕೀಳು ಕೆಲಸದವರು ಮೂರುಕಾಸು ಆರುಕಾಸುಗಳಂತೆ ಶೇಖರಿಸಿ

ತಮ್ಮ ಕೃತಜ್ಞತೆಯ ಸೂಚನೆಯಿಂದು ಒಂದು ಬೆಳ್ಳಿಯ ಗಡಿಯಾರವನ್ನು ಆತನಿಗೆ ಸಮರ್ಪಿಸಿದರು. ಆತನು, ಆ ಬಡ ಕೆಲಸಗಾರರು ಹೃತ್ಪೂರ್ವಕ ಪ್ರೇಮದಿಂದ ಕೊಟ್ಟ ಆ ಪುಟ್ಟ ಗಡಿಯಾರದ ಬಹುಮಾನವನ್ನು ಸಾವಿರ ಪೌಂಡುಗಳ ಬಹುಮಾನಕ್ಕಿಂತಲೂ ಅಧಿಕವಾದುದೆಂದೂ ಅಮೌಲ್ಯವಾದು ದೆಂದೂ ಭಾವಿಸಿದನು.

ಕಿಲ್ಲಿಂಗ್‌ವರ್ತ್ ಗಣಿಯಲ್ಲಿ, ಜಾರ್ಜ್ ಸ್ಟೀವೆನ್ಸನ್ನನ ಮೊದಲನೆಯ ಯಂತ್ರವು ಉತ್ಕೃಷ್ಟರೀತಿಯಿಂದ ಕೆಲಸಮಾಡುತ್ತಿದ್ದುದನ್ನು ಕಂಡ ಇತರ ಗಣಿಗಳವರು ತಮ್ಮ ಗಣಿಗಳಿಗೂ ಆ ಸೌಕರ್ಯವನ್ನು ಕಲ್ಪಿಸಿಕೊಳ್ಳಲು ಅಪೇಕ್ಷಿಸಿದರು. ೧೮೧೯ರಲ್ಲಿ ಡರ್ಹ್ಯಾಂ ಎಂಬ ಜಿಲ್ಲೆಯಲ್ಲಿದ್ದ ಹೆಟ್ಟನ್ ಎಂಬ ಗಣಿಯವರು, ತಮ್ಮ ಗಣಿಗಾಗಿ ಒಂದು ರೈಲ್ವೇಯನ್ನೂ ಇಂಜನನ್ನೂ ತಯಾರಿಸಿಕೊಡಬೇಕೆಂದು ಸ್ಟೀವೆನ್ಸನನ್ನು ಪ್ರಾರ್ಥಿಸಿದರು. ಆತನು ಒಡನೆ ಆ ಆಹ್ವಾನವನ್ನು ಸ್ವೀಕರಿಸಿ, ತನ್ನ ಸೋದರನಾದ ರಾಬರ್ಟನೊಂ ದಿಗೆ ಕೆಲಸಕ್ಕೆ ತೊಡಗಿದನು. ೧೮೨೨ರಲ್ಲಿ ಎಂಟುಮೈಲು ಉದ್ದದ ಆ ರಸ್ತೆಯು ಪ್ರಯಾಣಕ್ಕೆ ಸಿದ್ಧವಾಯಿತು. ಈ ರಸ್ತೆಯಮೇಲೆ ಜಾರ್ಜನ ಐದು ಇಂಜನುಗಳು ಬಂಡಿಗಳನ್ನೆಳೆದುಕೊಂಡು ಸಂಚರಿಸುತ್ತಿದ್ದುವು.

ಹಬೆಯ ಶಕ್ತಿಯಿಂದ ಬಂಡಿಗಳನ್ನೆಳೆಸಿ ಕಲ್ಲಿದ್ದಲನ್ನು ಸಾಗಿಸುವ ಈ ಯಾನ ಸಾಧನವು ಕುದುರೆಬಂಡಿಗಳ ಮೂಲಕ ಸಾಗಿಸುವ ಮಾರ್ಗಕ್ಕಿಂ ತಲೂ ಉತ್ತಮವಾದುದೂ ಲಾಭಕರವಾದುದೂ ಎಂಬುದು ಕ್ರಮಕ್ರಮ ವಾಗಿ ಜನಗಳ ಅನುಭವಕ್ಕೆ ಬರತೊಡಗಿತು. ಹೆಟ್ಟನಲ್ಲಿ ಕೆಲಸವು ಮುಗಿದ ವೇಳೆಗೆ ಸರಿಯಾಗಿ, ಸ್ಟಾಕ್‌ಟನ್ ಮತ್ತು ಡಾರ್ಲಿಂಗ್‌ಟನ್ ಎಂಬ ಊರುಗಳ ಮಧ್ಯದಲ್ಲಿ ರೈಲ್ವೇಯನ್ನು ಹಾಕಬೇಕೆಂಬ ಬಗ್ಗೆ ಸ್ಟೀವೆನ್ಸನನು ಪ್ರಾರ್ಥಿಸಲ್ಪಟ್ಟನು. ಇಲ್ಲಿಯ ಗಣಿಗಳ ಗೊತ್ತುಗಾರರಲ್ಲೊಬ್ಬನಾದ ಮಿ|| ಪೀಸ್ ಎಂಬಾತನು, ಜಾರ್ಜನ ಅಪೇಕ್ಷಾನುಸಾರವಾಗಿ ಕಿಲ್ಲಿಂಗ್ ವರ್ತ್ ಕಾರ್ಯಾಲಯವನ್ನು ಸಂದರ್ಶಿಸಿ ಅಲ್ಲಿ ಆತನ ಯಂತ್ರವು ಮಾಡು ತ್ತಿದ್ದ ಕಾರ್ಯವನ್ನು ಕಣ್ಣಾರಮುಟ್ಟನೋಡಿ, ತನ್ನ ಗಣಿಯಲ್ಲೂ ಆತನ ಮೂಲಕವೇ ರೈಲ್ವೇಯನ್ನು ಹಾಕಿಸಬೇಕೆಂದು ನಿಶ್ಚಯಿಸಿ, ತನ್ನ ಜಿಲ್ಲಾ ಅಧಿಕಾರಿಗಳಿಂದ ಕಾರ್ಯಪ್ರಾರಂಭಮಾಡಲು ಅಪ್ಪಣೆಯನ್ನು ಪಡೆದನು.

ಸ್ಟೀವನ್ಸನ್ನನು ೧೮೨೩ ರಲ್ಲಿ, ಸಂವತ್ಸರಕ್ಕೆ ಮುನ್ನೂರು ಪೌಂಡುಗಳ ವೇತನದಮೇಲೆ ಇಂಜನಿಯರ್ ಅಧಿಕಾರದಲ್ಲಿದ್ದು ಈ ಕೆಲಸವನ್ನು ಸಾಗಿಸಲು ನಿಯಮಿತನಾದನು. ಆತನ ಕಾರ್ಯದ ಮಹತ್ವವು ಎಲ್ಲೆಲ್ಲೂ ಕೊಂಡಾಡಲ್ಪಟ್ಟಿತು.

ಸ್ಟೀವನ್ಸನ್ನನು ಒಡನೆ ಕೆಲಸಕ್ಕೆ ಪ್ರಾರಂಭಿಸಿದನು. ಆತನಿಗೆ ಆ ಕಾಲದಲ್ಲಿ ಆ ಕೆಲಸ ತಿಳಿದ ಸಹಾಯಕರೂ ಇರಲಿಲ್ಲ. ರಸ್ತೆ ಹಾಕುವುದಕ್ಕಾಗಿ ಒಂದೊಂದು ಅಂಗುಲ ಭೂಮಿಯನ್ನು ಅಳೆಯುವ ಕೆಲಸವನ್ನೂ ಆತನೇ ಮಾಡಬೇಕಾಗಿತ್ತು. ಹೀಗೆ ಕೆಲಸವನ್ನು ಸಾಗಿಸುವುದರೊಂದಿಗೇ ಕೆಲಸಗಾರರನ್ನೂ ತಯಾರಿಸುತ್ತ ಆ ಧೀರನು ಪ್ರಾತಃಕಾಲ-ಕಣ್ಣು ಕಾಣಿಸುವಷ್ಟು ಬೆಳಕಾದಾಗಿನಿಂದ ರಾತ್ರಿ ಕತ್ತಲಾಗುವವರೆಗೆ ಕಾರ್ಯತತ್ಪರನಾಗಿ ದುಡಿಯುತ್ತಿದ್ದನು. ಕಾಲಕಾಲಕ್ಕೆ ಆಹಾರಪಾನೀಯಗಳ ಯೋಚನೆಯನ್ನು ಸಹ ಮಾಡದೆ, ಹಸಿದ ಹೊತ್ತಿಗೆ ಎಲ್ಲಿ ಸ್ವಲ್ಪ ರೊಟ್ಟಿಯೂ-ಹಾಲೂ ದೊರೆತರೆ ಅಷ್ಟರಲ್ಲೇ ತೃಪ್ತನಾಗಿ ಸದಾ ಆ ಕೆಲಸವನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಶ್ರಮಪಟ್ಟನು. ಈ ಮಧ್ಯೆ ನ್ಯೂಕ್ಯಾಸೆಲ್ ಎಂಬ ಸ್ಥಳವು ಇಂಜನುಗಳನ್ನು ಕಟ್ಟುವ ಕಾರ್ಯಾಲಯವನ್ನು ಸ್ಥಾಪಿಸಲು ಯೋಗ್ಯವಾದ ಸ್ಥಳವೆಂದು ಆತನ ಮನಸ್ಸಿಗೆ ತೋರಲು, ಆ ಸಂಗತಿಯನ್ನು ಮಿ|| ಪೀಸ್ ಮುಂತಾದವರಿಗೂ ಸೂಚಿಸಿದನು. ಆ ಸಲಹೆಯು ಅವರಿಗೂ ಉಪಯುಕ್ತವಾದುದೆನ್ನಿಸಿತು. ಮಿ|| ಪೀಸ್ ಸಾಹೇಬನು ಆ ಕಾರ್ಯಪ್ರಾರಂಭಕ್ಕೆಂದು ತಾನು ೫೦೦ ಪೌಂಡುಗಳನ್ನು ಕೊಟ್ಟನು. ಮಿ|| ರಿಛರ್ಡ್‌ಸನ್ ಎಂಬಾತನು ೫೦೦ ಪೌಂಡುಗಳನ್ನು ಕೊಟ್ಟನು. ಜಾರ್ಜ್ ಸ್ಟೀವನ್ಸನ್ನನು, ತಾನು ಸೇಫ್ಟೀಲ್ಯಾಂಪ್ ಕಂಡ.ಹಿಡಿದುದಕ್ಕಾಗಿ ದೊರೆತಿದ್ದ ಸಾವಿರ ಪೌಂಡುಗಳ ಬಹುಮಾನ ದ್ರವ್ಯವನ್ನೂ ಈ ಕಾರ್ಯಕ್ಕಾಗಿ ಉಪಯೋಗಿಸಿದನು. ಹೀಗೆ ರೈಲ್ವೆರಸ್ತೆಯನ್ನು ಸಿದ್ಧಗೊಳಿಸುವ ಕಾರ್ಯವೂ, ಇಂಜನುಗಳನ್ನೂ, ಕಬ್ಬಿಣದಹಳಿ ಮುಂತಾದ ರಸ್ತೆಗೆಬೇಕಾದ ಸಾಮಾನುಗಳನ್ನು ಸಿದ್ಧಗೊಳಿಸುವ ಕಾರ್ಯವೂ ಏಕಕಾಲದಲ್ಲಿ ನಡೆಯಬೇಕಾಗಿದ್ದಿತು. ಸ್ಟೀವನ್ಸನ್ನನು ಒಂದು ಕ್ಷಣ ವಿರಾಮವಿಲ್ಲದಂತೆ ಸದಾ ಕೆಲಸಮಾಡುತ್ತಿದ್ದನು. ದೃಢಾಂಗನಾದ ಆತನ ದೇಹದಾರ್ಢ್ಯವು ಈ ದಿನಗಳಲ್ಲಿ ಆತನಿಗೆ ಕಷ್ಟ ಸಹಿಷ್ಣು

ತೆಗೆ ಸಹಾಯಕವಾಯಿತು. ಆತನ ಜೊತೆಯ ಕೆಲಸಗಾರರೆಲ್ಲರೂ ಸೋತು ಉಸ್ ಎಂದು ಹೋದರೂ, ಸ್ಟೀವೆನ್‌ಸನು ನೂತನೋತ್ಸಾಹದಿಂದ ಸದಾ ಹಸನ್ಮುಖಿಯಾಗಿ ಕೆಲಸಕ್ಕೆ ಮುಂದೆ ನುಗ್ಗುತ್ತಿದ್ದನು. ೧೮೨೫ನೆಯ ಸಂವತ್ಸರದವೇಳೆಗೆ ರಸ್ತೆಯು ಸಿದ್ಧವಾಯಿತು. ಆ ವರ್ಷದ ಸೆಪ್ಟಂಬರು ತಿಂಗಳ ೨೭ನೆಯ ತಾರೀಖಿನದಿನ ಆ ರೈಲ್ವೇಯು ತೆರೆಯಲ್ಪಡತಕ್ಕದೆಂದು ನಿರ್ಧರವಾಯಿತು. ಆ ದಿನ ಪ್ರಾತಃಕಾಲದವೇಳೆಗೆ ರಸ್ತೆಯ ಉಭಯಪಾರ್ಶ್ವಗಳಲ್ಲೂ ಸಾವಿರಾರು ಜನರು, ಆ ಅಪೂರ್ವ ನೋಟವನ್ನು ನೋಡಲು ಸಾಲುಕಟ್ಟಿನಿಂತರು. ಇಂಜನಿಗೆ ಕಲ್ಲಿದ್ದಲು ಮತ್ತು ಗೋಧಿಯಹಿಟ್ಟಿನ ಮೂಟೆಗಳಿಂದ ತುಂಬಿದ ೬ ಬಂಡಿಗಳೂ, ಪ್ರಯಾಣಿಕರಿಂದ ತುಂಬಿದ ೨೧ ಬಂಡಿಗಳೂ, ಪುನಃ ಕಲ್ಲಿದ್ದಲಿನ ಆರು ಬಂಡಿಗಳೂ ತಗುಲಿಸಲ್ಪಟ್ಟಿದ್ದುವು. ಪ್ರಾರಂಭದಲ್ಲಿ ಗಂಟೆಯೊಂದಕ್ಕೆ ಐದು ಮೈಲುಗಳಂತೆ ಮಾತ್ರ ಹೊರಟ ಬಂಡಿಯು, ಬರುತ್ತ ಬರುತ್ತ ತನ್ನ ವೇಗವನ್ನು ಹೆಚ್ಚಿಸಿ, ಗಂಟೆಗೆ ೧೫ ಮೈಲಿಯಂತೆ ಓಡತೊಡಗಿತು. ಬಾವುಟವನ್ನು ಹಿಡಿದು, ಕುದುರೆಯಮೇಲೆ ಮುಂದೆ ಸವಾರಿಮಾಡುತ್ತಿದ್ದ ಮುಂದಾಳೂ, ಹಿಂದೆ ಕುದುರೆಗಾಡಿಯಲ್ಲಿ ಬರುತ್ತಿದ್ದ ಮಿ|| ಪೀಸ್ ಮುಂತಾದ ಡೈರೆಕ್ಟರರೂ, ಉಭಯಪಾರ್ಶ್ವಗಳಲ್ಲೂ ಬರುತ್ತಿದ್ದ ಪ್ರೇಕ್ಷಕರೂ, ವಾಯುವೇಗದಿಂದಲೋ ಎಂಬಂತೆ ಓಡುತ್ತಿದ್ದ ಆ ರೈಲ್‌ಗಾಡಿಯ ವೇಗದೊಂದಿಗೆ ಓಡಲಾರದೆ ಹಿಂದೆಬಿದ್ದುಹೋದರು. ಜನಗಳಿಗೆಲ್ಲರಿಗೂ, ರೈಲ್‌ಗಾಡಿಯು ಕೇವಲ ಕಲ್ಲಿದ್ದಲನ್ನು ಸಾಗಿಸುವುದಕ್ಕೆ ಮಾತ್ರವಲ್ಲ- ಪ್ರಯಾಣಕ್ಕೂ ಅದನ್ನು ಉಪಯೋಗಿಸಬಹುದು ಎಂಬ ವಿಷಯದಲ್ಲಿ ಸಂದೇಹವು ಉಳಿಯಲಿಲ್ಲ. ದಿನಕ್ರಮೇಣ-ರೈಲ್‌ರಸ್ತೆಯ ಉದ್ದಕ್ಕೂ ಹಾಳುಬಿದ್ದಿದ್ದ ಅನೇಕ ಸ್ಥಳಗಳಲ್ಲಿ ಕಾರ್ಖಾನೆಗಳೂ, ಮನೆಮಠಗಳೂ ಪ್ರಾರ್ಥನಾಮಂದಿರ (ಚರ್ಚ್) ಗಳೂ, ಪಾಠಶಾಲೆಗಳೂ ನಿರ್ಮಿತವಾದುವು. ಇಷ್ಟು ಕೆಲಸ ನಡೆವುದರೊಂದಿಗೆ, ಸ್ಟೀವೆನ್‌ಸನ ಕೈಕೆಳಗಿದ್ದು ನೂರಾರುಮಂದಿ-ಸಾವಿರಾರುಮಂದಿ ಕೆಲಸಗಾರರೂ ತಯಾರಾಗತೊಡಗಿದರು.

ದಿನದಿನಕ್ಕೆ ಹಬೆಯಂತ್ರದ ಉಪಯೋಗವನ್ನು ಕುರಿತು ಜನಗಳ ಮನಸ್ಸಿನಲ್ಲಿದ್ದ ಸಂದೇಹವು ತೊಲಗುತ್ತ, ಅದರಿಂದ ಉಂಟಾಗುವ ವಿಶೇಷ ಪ್ರಯೋಜನವನ್ನು ಕುರಿತು ನವೀನ ನವೀನ ಭಾವನೆಗಳೂ ಆಶಯಗಳೂ

ಉದಯಿಸತೊಡಗಿದುವು. ರೈಲ್ವೆಯನ್ನು ಕೇವಲ ಕಲ್ಲಿದ್ದಲನ್ನು ಸಾಗಿಸು ವುದಕ್ಕೆ ಮಾತ್ರವಲ್ಲ—ಇತರ ಪದಾರ್ಥಗಳನ್ನು ಸಾಗಿಸುವುದಕ್ಕೂ ಉಪ ಯೋಗಿಸಿ ಒಳದೇಶದ ವ್ಯಾಪಾರ ಉದ್ಯೋಗಗಳನ್ನೂ ತಕ್ಕಷ್ಟು ಪ್ರಮಾಣ ದಿಂದ ಹೆಚ್ಚಿಸಬಹುದೆಂದು ತೋರಿತು. ಇಂಗ್ಲೆಂಡು ದೇಶದಲ್ಲಿ ರೈಲ್ವೆಯು ಯಂತ್ರನಿರ್ಮಾಣಕಾರ್ಯವು ಪ್ರಾರಂಭವಾಗುವುದಕ್ಕೆ ಸುಮಾರು ಐವತ್ತು ವರ್ಷಗಳ ಪೂರ್ವದಲ್ಲೇ ಯಂತ್ರಗಳ ಮೂಲಕ ಹತ್ತಿಯ ಬಟ್ಟೆ ಗಳನ್ನು ತಯಾರಿಸುವ ಸುಧಾರಣೆಯು ನಡೆದು ವಿಶೇಷ ಲಾಭಕರವಾದ ಉದ್ಯೋಗವಾಗಿ ಪರಿಣಮಿಸಿದ್ದಿತು. ಮ್ಯಾಂಚೆಸ್ಟರ್ ನಗರವು ಈ ಕೈಗಾ ರಿಕೆಯ ಕೇಂದ್ರಸ್ಥಾನವಾಗಿದ್ದು, ಅಲ್ಲಿಗೆ ಅಮೆರಿಕಾ ಖಂಡದಿಂದ ಬರುವ ಅರಳೆಯನ್ನು ಸಮುದ್ರತೀರ ಪಟ್ಟಣವಾದ ಲಿವರ್‌ಪೂಲ್ ಎಂಬ ಪಟ್ಟಣ ದಿಂದ ಸಾಗಿಸುವ ಕಾರ್ಯವೊಂದು ಅತಿಮುಖ್ಯ ಪ್ರಶ್ನೆಯಾಗಿದ್ದಿತು. ಆ ಕಾಲದಲ್ಲಿ, ಕುದುರೆಯಗಾಡಿಗಳ ಮೂಲಕವಲ್ಲದೆ, ಕಾಲುವೆಯಲ್ಲಿ ದೋಣಿ ಗಳ ಮೂಲಕವೂ ಪದಾರ್ಥಗಳನ್ನು ಊರಿಂದೂರಿಗೆ ಸಾಗಿಸುತ್ತಿದ್ದ ಪದ್ಧತಿ ಯಿದ್ದಿತು. ಲಿವರ್ಪೂಲ್ ಮತ್ತು ಮ್ಯಾಂಚೆಸ್ಟರ್‌ಗಳ ಮಧ್ಯೆ ಅಂತಹ ಒಂದು ಕಾಲುವೆಯಿದ್ದು ಅದರ ಮೂಲಕ ಸಾಗುತ್ತಿದ್ದ ಅರಳೆಯ ಮೂಟೆ ಗಳು, ಸಕಾಲದಲ್ಲಿ ಬಂದು ತಲುಪದೆಯೂ, ಹಿಮಗಾಲದಲ್ಲಿ ಕಾಲುವೆಯ ನೀರು ಗಡ್ಡೆಕಟ್ಟುತ್ತಿದ್ದುದರಿಂದ ದೋಣಿಗಳ ಪ್ರಯಾಣಕ್ಕೆ ವಿಘ್ನವುಂ ಟಾಗಿ ಎಷ್ಟೋ ದಿನಗಳವರೆಗೆ, ಅರಳೆಯಿಲ್ಲದ್ದಕ್ಕಾಗಿ ಕಾರ್ಖಾನೆಗಳನ್ನು ಮುಚ್ಚಿಬಿಡುವ ಪ್ರಸಂಗ ಒದಗುತ್ತಲೂ ಇದ್ದಿತು. ಇಂಗ್ಲೆಂಡಿನ ಇತರ ಕೆಲವುಭಾಗಗಳಲ್ಲಿ ಹಬೆಯ ಯಂತ್ರಗಳ ಮೂಲಕ ರೈಲ್ವೆಯಮೇಲೆ ಪದಾ ರ್ಥಗಳನ್ನು ಸಾಗಿಸಿ ಕೆಲಸ ನಡೆಸುತ್ತಿದ್ದುದನ್ನು ಕರ್ಣಾಕರ್ಣಿಕೆಯಾಗಿ ಕೇಳಿದ್ದ ಕಾರ್ಖಾನೆಗಳವರು, ತಾವೂ ಆ ಬಗೆಯ ಯಾನಸಾಧನವನ್ನು ಕಲ್ಪಿಸಿಕೊಂಡು ತನ್ಮೂಲಕ ಪ್ರಯೋಜನ ಹೊಂದಬಾರದೇಕೆಂದು ಯೋಚಿಸಿದರು.

ಲಿವರ್‌ಪೂಲ್ ಮತ್ತು ಮ್ಯಾಂಚೆಸ್ಟರ್ ಪಟ್ಟಣಗಳ ಮಧ್ಯದಲ್ಲಿ ರೈಲ್ವೇಯಾಗಿ ತನ್ಮೂಲಕ ಲಿವರ್‌ಪೂಲಿಗೆ ಬರುವ ಅರಳೆಯ ಮೂಟೆಗಳೆ ಲ್ಲವೂ ಸಾಗಲು ಅವಕಾಶವಾದರೆ, ಮುಂದೆ, ತಮಗೆ ಬರುತ್ತಿದ್ದ ಲಾಭಕ್ಕೆ

ವಿಶೇಷ ಧಕ್ಕೆಯುಂಟಾಗುವುದೆಂದು ಅಲ್ಲಿನ ಕಾಲುವೆಗಳ ಸ್ವಂತಗಾರರು ಭಯಪಟ್ಟು ಸಾಧ್ಯವಾದಷ್ಟುಮಟ್ಟಿಗೆ ಆ ರಸ್ತೆಯೇ ಆಗದಂತೆ ಪ್ರಯತ್ನ ಪಟ್ಟರು. ಆ ರಸ್ತೆಯ ನಿರ್ಮಾಣಕ್ಕೆಂದು ಪಾರ್ಲಿಮೆಂಟು ಸಭೆಯ ಎದುರಿಗೆ ತರಲ್ಪಟ್ಟ ಮಸೂದೆಯನ್ನು ವಿವಿಧ ಕಾರಣಗಳನ್ನು ಮುಂದುಮಾಡಿ ವಿರೋಧಿಸಿ, ಅದು ಮಂಜೂರಾಗದಂತೆ ಮಾಡಿಬಿಟ್ಟರು. ಪಾರ್ಲಿಮೆಂಟು ಮೆಂಬರುಗಳಿಗೆ ಲಂಚಕೊಟ್ಟು, ಆ ಬಿಲ್ಲನ್ನು ದ್ವೇಷಿಸಿ ಹಿಂದಕ್ಕೆ ತಳ್ಳುವಂತೆ ಪ್ರಯತ್ನಮಾಡಿದರು. ಹೀಗೆ ಎರಡುಸಾರಿ ಅದು ಬಿದ್ದುಹೋಯಿತಾದರೂ, ಸ್ಟೀವನ್‌ಸನ ಕಾರ್ಯದಲ್ಲೂ, ಅವನ ಯಂತ್ರದ ಕರ್ತೃತ್ವ ಶಕ್ತಿಯಲ್ಲೂ ವಿಶ್ವಾಸವನ್ನಿಟ್ಟಿದ್ದ ಕೆಲವುಂದಿ ಪ್ರಮುಖರು ಅದನ್ನು ಅಲ್ಲಿಗೇ ಬಿಡದೆ, ೧೮೨೬ನೆಯ ಮಾರ್ಚಿ ತಿಂಗಳಲ್ಲಿ ಅದು ಬಹುಮತದಿಂದ ಮಂಜೂರಾತಿಗೆ ಬರುವವರೆಗೂ ಬಿಡದೆ ಸಾಧಿಸಿದರು. ಅತಿ ಮುಖ್ಯವಾದ, ಈ ಸರ್ಕಾರದ ಅಪ್ಪಣೆಯೊಂದು ದೊರೆತ ತರುವಾಯ, ಈ ಕಾರ್ಯಕ್ಕಾಗಿ ಮೂರು ಲಕ್ಷ ಪೌಂಡುಗಳ ನಿಧಿಯನ್ನು ಸೇರಿಸಿ ಅತ್ಯುತ್ಸಾಹದಿಂದ ಕಾರ್ಯಪ್ರಯತ್ನಮಾಡಿದ್ದ ಪ್ರಮುಖರು, ವರ್ಷವೊಂದಕ್ಕೆ । ಒಂದು ಸಾವಿರ ಪೌಂಡುಗಳಂತೆ ವೇತನವನ್ನು ಗೊತ್ತುಮಾಡಿ, ಜಾರ್ಜ್ ಸ್ಟೀವನ್‌ಸನ್ನನೇ ಆ ಕಾಮಗಾರಿಯ ಚೀಫ್ ಇಂಜನಿಯರ್ ಅಧಿಕಾರವನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸಿದರು. ಸ್ಟೀವನ್‌ಸನ್ನನೂ ಸಂತೋಷದಿಂದ ಆ ಉದ್ಯೋಗವನ್ನು ಸ್ವೀಕರಿಸಿದನು.

---

## ಅಧ್ಯಾಯ ೫ "ಲಿವರ್‌ಪೂಲ್-ಮ್ಯಾಂಚೆಸ್ಟರ್ ರೈಲ್ವೆ"

ಜಾರ್ಜ್ ಸ್ಟೀವನ್‌ಸನ್ನನು, ಕಂಪೆನಿಯವರು ತನ್ನಮೇಲೆ ಹೊರಿಸಿದ ಉತ್ತರ ವಾದಿತ್ವದ ಭಾರವನ್ನು ಹೊರಲು ಸಿದ್ಧನಾದನು. ಲಿವರ್‌ಪೂಲ್ ನಗರವನ್ನೇ ತನ್ನ ವಾಸಸ್ಥಳವನ್ನಾಗಿ ಏರ್ಪಡಿಸಿಕೊಂಡನು. ಈ ಕಾಮಗಾರಿಯು ಪೂರೈಸುವವರೆಗೆ ನಡೆದ ಪ್ರತಿಯೊಂದು ಕೆಲಸವೂ,-ಒಂದು ಗಜ

ರೈಲುರಸ್ತೆ ಹಾಕುವ, ಭೂಮಿಯನ್ನು ಅಳೆವ, ಕೆಲಸಗಾರರ ವೇತನವನ್ನು ಹಂಚುವ ಮುಂತಾದ ಪ್ರತಿಯೊಂದು ಸಣ್ಣ ಕೆಲಸವೂ ಆತನ ಮೇಲ್ವಿಚಾರಣೆಯಿಂದಲೇ ಮಾಡಲ್ಪಟ್ಟಿತು. ಅಷ್ಟು ಬಗೆಯ ಅಗಾಧ ಪ್ರಮಾಣದ ಕೆಲಸವು ನಡೆವ ಸಂಪೂರ್ಣ ಜವಾಬುದಾರಿಯನ್ನೂ ವಹಿಸಿದ್ದ ಆತನ ಕಷ್ಟವು ಎಷ್ಟಿದ್ದೀತೆಂಬುದನ್ನು ಕುರಿತು ಇಲ್ಲಿ ಹೇಳಲು ಸಾಧ್ಯವಿಲ್ಲ. ಆ ಬಗೆಯ ಕೆಲಸವನ್ನು ತಿಳಿದ ಕೆಲವು ಮಂದಿ ಕೆಲಸಗಾರರಾದರೂ ಇದ್ದಲ್ಲಿ ಆತನ ಕಷ್ಟವು ಸ್ವಲ್ಪಮಟ್ಟಿಗಾದರೂ ಕಡಮೆಯಾಗಬಹುದಿತ್ತು. ಆದರೆ ಆತನ ಕಾರ್ಯವು ಕೆಲಸಕಾರ್ಯಗಳಿಗೆ ಸೂಚನೆಯಿತ್ತು ಮಾಡಿಸುವುದಾಗಿರದೆ - ಪ್ರತಿಯೊಂದು ಕೆಲಸದಲ್ಲೂ ಜನಗಳನ್ನು ತಯಾರಿಸಿ, ಅವರಿಗೆ ಕೆಲಸವನ್ನು ಕಲಿಸಿ ಅವರಿಂದ ಕೆಲಸಮಾಡಿಸಬೇಕಾಗಿದ್ದಿತು.

ಮಾತ್ರವಲ್ಲ, ತಾನು ಚೀಫ್ ಇಂಜನಿಯರಾಗಿ ನಿಯಾಮಕವಾಗಿ ಕೇವಲ 'ರೈಲ್'- ಮಾರ್ಗವನ್ನು ತಯಾರಿಸಿಕೊಟ್ಟರಾಯಿತು ಎಂಬಂತಿರಲಿಲ್ಲ. ಅದು ಸಿದ್ಧವಾಗುವವೇಳೆಗೆ, ಇತ್ತ ಇಂಜಿನುಗಳೂ, ಸಾಮಾನು ಹೇರುವ ಬಂಡಿಗಳೂ ತಯಾರಾಗಿ ಸಿದ್ಧವಾಗಿರಬೇಕಾದುದೊಂದು ಕಾರ್ಯವೂ ಆತನ ಜವಾಬುದಾರಿಗೇ ಸಂಬಂಧಪಟ್ಟಿದ್ದಿತು. ಮ್ಯಾಂಚೆಸ್ಟರ್ ಮತ್ತು ಲಿವರ್ಪೂಲ್‌ಗಳ ಮಧ್ಯೆ ತಯಾರಾಗ ಬೇಕಾಗಿದ್ದ ರಸ್ತೆಯೇನೋ ಮೂವತ್ತು ಮೈಲುಗಳಷ್ಟು ಮಾತ್ರವೇ! ಆದರೆ ಅದು ಮಧ್ಯೆ, ಒಂದು ನಗರದ ಕೆಳಭಾಗದಲ್ಲಿ ಸುರಂಗದೊಳಗೆ ಹೋಗಬೇಕಾಗಿತ್ತು, ಮಧ್ಯೆ ನಾಲ್ಕಾರು ಹಳ್ಳಗಳೂ, ಒಂದು ಕಣಿವೆಯೂ, ಹತ್ತು ಹನ್ನೆರಡು ರಸ್ತೆಗಳೂ, ಇವಲ್ಲದೆ ನಾಲ್ಕು ಮೈಲುದೂರದ ಒಂದು ಪೊಳ್ಳು ನೆಲದ - ಕೆಸರಿನ ಕೊಳಚೆಯ ಸ್ಥಳವೂ ಇದ್ದಿತು. ಇಷ್ಟು ಅಡಚಣೆಗಳನ್ನು ನಿವಾರಿಸಿಕೊಂಡು, ರಸ್ತೆಯನ್ನು ಸಿದ್ಧಗೊಳಿಸುವುದಕ್ಕಾಗಿಯೇ ಆತನು ಅಗಾಧ ಶ್ರಮಪಡಬೇಕಾಗಿದ್ದಿತು. ಆದರೂ ಧೀರನಾದ ಆತನು ಆ ಕಷ್ಟವನ್ನು ಲಕ್ಷ್ಯಮಾಡದೆ, ದೇಶದ ಎಲ್ಲಾ ಭಾಗಗಳಿಂದಲೂ ಕೆಲಸಗಾರರನ್ನು ಬರಮಾಡಿಕೊಂಡು, ಧೈರ್ಯದಿಂದಲೂ ನಿರಲಸಿಕೆಯಿಂದಲೂ ಕೆಲಸವನ್ನು ಮುಂದರಿಸಿದನು.

ಸ್ಟೀವರ್ಸನು ಬೆಳಗ್ಗೆ ಹೊತ್ತು ಹುಟ್ಟುವ ವೇಳೆಗೆ ಮುಂಚಿತವಾಗಿಯೇ ತನ್ನ ಕೆಲಸದಮೇಲಿರುತ್ತಿದ್ದನು. ಇನ್ನೂ ಕತ್ತಲೆಂದೂ ಚಳಿಯೆಂದೂ

ಊರಿನವರು ಮುಸುಕಿಟ್ಟು ಮಲಗಿದ್ದ ವೇಳೆಯಲ್ಲಿ, ಆತನಾಗಲೇ ಎದ್ದು, ತನ್ನ ಯಂತ್ರದ ಬಳಿಯಲ್ಲಿರುತ್ತಿದ್ದನು. ಅವನ ಆಹಾರವಾದರೋ ಅತಿಶಯ ಸಾದಾರೀತಿಯದಾಗಿದ್ದಿತು. ಅವನಿಗೆ ದೊರೆತಿದ್ದ ಕೆಲಸಗಾರರು, ವಿದ್ಯಾಗಂಧವನ್ನು ಅರಿಯದವರಾದರೂ, ನಂಬಿಗಸ್ತರೂ, ಕಷ್ಟಸಹಿಷ್ಣುಗಳೂ, ಧೈರ್ಯಶಾಲಿಗಳೂ, ದೃಢಾಂಗರೂ ಆದ ಬಡಜನರು. ಸ್ಟೈಫೇರ್ಸನ್ನನು ಅವರಲ್ಲಿ ವಿಶೇಷ ಪ್ರೀತಿವಿಶ್ವಾಸವಿಟ್ಟು ನಡೆದುಕೊಳ್ಳುತ್ತಿದ್ದನು. ಅವರಿಗೆ ತಮ್ಮ ಯಜಮಾನನು ಒಣದಂಭದರ್ಪಗಳನ್ನು ತೋರಿಸಿ, ಕೇವಲ ಆಜ್ಞೆಗಳನ್ನು ಮಾತ್ರ ಮಾಡುತ್ತ ಅಧಿಕಾರ ಮಾಡುವ - ಕೆಲಸ ತಿಳಿಯದ ಮೂರ್ಖನಲ್ಲವೆಂಬುದು ತಿಳಿದಿದ್ದಿತು. ದಯಾಳುವಾಗಿ, ಬಳಿಯಲ್ಲೇ ನಿಂತು, ತಪ್ಪಿದ್ದರೆ ಮೃದುವಾಕ್ಯಗಳಿಂದಲೂ, ಉತ್ತೇಜಕ ವಾಕ್ಯಗಳಿಂದಲೂ ಬೆನ್ನು ತಟ್ಟುತ್ತಾ, ತಾನು ಮಾಡಿ ತೋರಿಸಿ-ಮಾಡಿರೆಂದು ಹೇಳುವ, ತಮ್ಮಲ್ಲೇ ಒಬ್ಬನೆಂದು ತಿಳಿದಿದ್ದರು. ಯಜಮಾನನೆಂದರೆ ಪ್ರೀತಿಯಿಲ್ಲದ ಒಣಭಯವಲ್ಲದೆ, - ಭಕ್ತಿಯುತವಾದ ಭಯದಿಂದ, ತಮ್ಮ ತಮ್ಮ ಕಾರ್ಯಗಳನ್ನು ಮನಃಪೂರ್ವಕವಾಗಿ ಮಾಡುತ್ತಲಿದ್ದರು. ತಮ್ಮ ಕೆಲಸವು ತಮ್ಮ ಯಜಮಾನನ ಕಣ್ಣಿಗೆಬಿದ್ದರೆ ಸಾಕು, ಎಂದು ಉತ್ಸುಕತೆಯಿಂದ ಕಾರ್ಯತತ್ಪರರಾಗಿರುವರು. ಕಾರ್ಯಕ್ಷೇತ್ರಕ್ಕೆ ಹೋದನೆಂದರೆ, ಒಡನೆ ಒಂದು ಸ್ಥಳದಲ್ಲಿ ನಿಲ್ಲದೆ, ಇವನ ಕಾರ್ಯವನ್ನು ನೋಡಿ, ಅವನ ಕೆಲಸದಲ್ಲಿದ್ದ ತಪ್ಪನ್ನು ಹಸನ್ಮುಖದಿಂದ ತಿದ್ದಿಕೊಟ್ಟು, ಮತ್ತೊಬ್ಬನ ಕೈಸುತ್ತಿಗೆಯನ್ನು ಕೈಗೆ ತೆಗೆದುಕೊಂಡು, ಅದನ್ನು ಸರಿಯಾಗಿ ಹಿಡಿದು ಕೆಲಸಮಾಡುವ ರೀತಿಯನ್ನು ತೋರಿಸಿ, ಉತ್ತಮವಾಗಿ ಕೆಲಸಮಾಡಿದವನನ್ನು ಮೆಚ್ಚಿಕೊಂಡು ಬೆನ್ನು ತಟ್ಟಿ ಹೊಗಳಿ ಪ್ರೋತ್ಸಾಹಿಸುವನು. ಅವನ ಕೆಲಸಗಾರರಿಗೆ ಸ್ಟೈಫೇರ್ಸನ್ ಎಂದರೆ, ಆತನು ತಮ್ಮಾ ಕೆಲಸದಲ್ಲಿ ಸರ್ವಜ್ಞನೆಂದೇ ಭಾವನೆಯಿತ್ತು.

ಸ್ಟೈಫೇರ್ಸನ್ನನು ಸರ್ವ ಸುಲಭನಾಗಿದ್ದನು. ಅವನ ಮನೆಯಲ್ಲಿ ಹಲವುಮಂದಿ ತರುಣರಿದ್ದು ಅವನಿಂದ ಕೆಲಸವನ್ನು ಕಲಿಯುತ್ತಿದ್ದರು. ಅವನ ಬೋಧನೆಯೆಂದರೆ ಗಿಳಿ ಪಾಠದಂತಲ್ಲ ಪ್ರತಿಯೊಂದು ಕೆಲಸವನ್ನೂ ವಿದ್ಯಾರ್ಥಿಯು ಸ್ವತಃ ಯೋಚಿಸಿ, ವಿಮರ್ಶಿಸಿ, ಕೆಟ್ಟುದನ್ನು ತಾನೇ ತಿದ್ದಿ ಸರಿಪಡಿಸಿಕೊಂಡು ಕಲಿತುಕೊಳ್ಳಬೇಕಾಗಿದ್ದಿತು. ವಿದ್ಯಾರ್ಥಿಗಳು ಆತುರ

ಪಡದೆ, ಅಸಹನೆಗೆ ವಶರಾಗದೆ, ಉದ್ವೇಗಗೊಳ್ಳದೆ ಬೇಸರಿಸದೆ ಕಷ್ಟಸಹಿಷ್ಣುತೆಯಿಂದ ನಿಧಾನವಾಗಿ ಪ್ರಯತ್ನಿಸುವಂತೆ ಆತನು ಬೋಧಿಸಿ, ಮಾರ್ಗದರ್ಶಕನಾಗುತ್ತಿದ್ದನು. ಆತನ ಬಳಿಯಿದ್ದು ಶಿಕ್ಷಿತರಾದವರು, ಕೊನೆಗೆ ಉತ್ಕೃಷ್ಟ ಕೆಲಸಗಾರರೆಂದು ವಿಖ್ಯಾತರಾದರು.

ಮೂವತ್ತು ಮೈಲುಗಳ ಆ ರಸ್ತೆಯಲ್ಲಿ ಮಧ್ಯೆ ಅರುವತ್ತೂ ಮೂರು ಸೇತುವೆಗಳು ತಯಾರಾದುವು. ಅವುಗಳಲ್ಲೊಂದು ಬಹು ದೊಡ್ಡದು. ಅದರಲ್ಲಿ ಎಪ್ಪತ್ತು ಅಡಿ ಎತ್ತರ, ಐವತ್ತು ಅಡಿ ಅಗಲದ ಒಂಬತ್ತು ಕಮಾನುಗಳು ಇದ್ದುವು. ಮಾರ್ಗಮಧ್ಯದಲ್ಲಿ ಜಮೀನುಗಳ ಹಿಡುವಳಿದಾರರು, ಪ್ರಾರಂಭದಲ್ಲಿ ಗೊತ್ತಾಗಿದ್ದಂತೆ ತಮ್ಮ ಭೂಮಿಯಲ್ಲಿ ಸ್ಥಳವನ್ನು ಕೊಡಲು ಅಡ್ಡಿ ಮಾಡಿದುದರಿಂದ, ಮಧ್ಯೆ ಎರಡು ಮೈಲುಗಳಷ್ಟು ದೂರ ನೂರು ಅಡಿ ಎತ್ತರದ ಒಂದು ಗುಡ್ಡವನ್ನು ಕತ್ತರಿಸಿ ರಸ್ತೆಮಾಡಿಕೊಂಡು ಮುಂದರಿಸಬೇಕಾಯಿತು. ನಾಲ್ಕುಲಕ್ಷ ಎಂಭತ್ತುಸಾವಿರ ಘನಅಡಿಗಳಷ್ಟು ಕಲ್ಲನ್ನು ಚೂರ್ಣಗೊಳಿಸಿ ಮುಂದರಿಸಬೇಕಾದ ಆ ಕಾರ್ಯವೇನು ಸಾಮಾನ್ಯವಾದುದೇ!

ರಸ್ತೆಯ ಕಾಮಗಾರಿಯನ್ನು ಮುಂದರಿಸುತ್ತಿರುವಲ್ಲಿ ಇದಕ್ಕಿಂತಲೂ ಕಷ್ಟತರವಾದ ಕಾರ್ಯವೊಂದು ಸಂಭವಿಸಿತು. ಲಿವರ್‌ಪೂಲ್ ಪಟ್ಟಣದ ಕೆಳಗಡೆಯೇ ಒಂದೂಕಾಲು ಮೈಲು ಸುರಂಗಹೊಡೆದು ರಸ್ತೆಮಾಡಬೇಕಾಯಿತು. ಕಠಿಣವಾದ ಕಲ್ಲುಬಂಡೆಗಳನ್ನು ಒಡೆದು ಮಾಡಬೇಕಾದ ಸುರಂಗದ ಆ ರಸ್ತೆಯು ಕಷ್ಟಕರವಾದುದು ಮಾತ್ರವಲ್ಲ-ಅಪಾಯಕರವೂ ಆಗಿದ್ದಿತು. ಕೆಲಸವು ಬಹು ನಿದಾನವಾಗಿ ಸಾಗತೊಡಗಿತು. ಒಂದುಬಾರಿ ಸ್ಟೀವೆನ್‌ಸನ್ನನು ನೋಡಲು ಬಂದಾಗ, ಕೆಲಸಗಾರರೆಲ್ಲರೂ ಸುರಂಗದ ಹೊರಗೆ ಕೈಕಟ್ಟಿಕೊಂಡು ಸುಮ್ಮನೆ ಕುಳಿತುಬಿಟ್ಟಿದ್ದರು. ಕಾರಣವೇನೆಂದು ಕೇಳಲು, ಸ್ವಲ್ಪ ಹೊತ್ತಿಗೆಮುಂಚೆ, ಒಂದು ಅಪಾರ ಮರಳರಾಶಿಯು ಕಳಚಿಕೊಂಡು ಬಿದ್ದು ಹಲವರು ಹೂತುಹೋಗಬೇಕಿತ್ತು. ದೈವಯೋಗದಿಂದ ಆ ಅನಾಹುತವನ್ನು ತಪ್ಪಿಸಿಕೊಂಡು ಬದುಕಿದೆವು, ಎಂದು ಹೇಳಿ ಅಂತಹ ಮೃತ್ಯುಮುಖಕ್ಕೆ ಹೋಗಿ ಕೆಲಸಮಾಡಲು ಹೆದರಿ ಕುಳಿತುಬಿಟ್ಟರು. ಸ್ಟೀವೆನ್‌ಸನ್ನನು, ಆ ಸಂದರ್ಭವನ್ನು ತಿಳಿದು ಏನೂಹೇಳದೆ, ನೇರವಾಗಿ ಸುರಂಗದೊಳಗೆ ಆ ಅಪಾಯ

ಸ್ಥಳವೆಂಬಲ್ಲಿಗೆ ತಾನೇ ನುಗ್ಗಿ ನಡೆದನು. ಒಡನೆ ಮೂಕರಂತೆ ಕೆಲಸಗಾರರೆಲ್ಲರೂ ಅವನನ್ನು ಹಿಂಬಾಲಿಸಿ, ಕೆಲಸಕ್ಕೆ ಪ್ರಾರಂಭಿಸಿದರು.

ಇದಕ್ಕಿಂತಲೂ ಕಷ್ಟತರವಾದುದೆಂದರೆ, ಮಾರ್ಗಮಧ್ಯದಲ್ಲಿ ಅವರಿಗೆ ದೊರೆತ ನಾಲ್ಕುಮೈಲು ದೂರದ ಪೊಳ್ಳು ಜೌಗುಭೂಮಿ. ಅಲ್ಲಿ ರಸ್ತೆಹಾಕುವುದು ಬಹು ಕಷ್ಟವೆನ್ನಿಸಿತು. ಇಂಜಿನಿಯರುಗಳೆಲ್ಲ, ಅದು ಅಸಾಧ್ಯವಾದ ಕಾರ್ಯವೆಂದು ಹೇಳಿಬಿಟ್ಟರು. ಡೈರೆಕ್ಟರುಗಳು, ಆಗದ ಕಾರ್ಯ: ಈ ಮಾರ್ಗವನ್ನೇ ಬಿಟ್ಟು, ಬೇರೊಂದು ಮಾರ್ಗವಾಗಿಯೇ ರೈಲುಮಾರ್ಗವನ್ನು ಹಾಕಬೇಕಲ್ಲದೆ, ಈ ಮಾರ್ಗವಾಗಿ ಖರ್ಚುಮಾಡುತ್ತ ಹೋಗುವುದು ನಿರುಪಯೋಗವೆಂದು ಹತಾಶರಾದರು. ಆದರೆ, ಸ್ಟೀವೆನ್ಸನ್ ಮಾತ್ರ ಹಾಗೆ ಹತಾಶನಾಗದೆ, ಎಲ್ಲರಿಗೂ ಧೈರ್ಯಹೇಳುತ್ತಾ, ದೀರ್ಘಪ್ರಯತ್ನಮಾಡಿ, ೧೮೩೦ನೆಯ ಇಸವಿಯ ಪ್ರಾರಂಭದವೇಳೆಗೆ ಆ ರಸ್ತೆಯನ್ನು ಪೂರೈಸಿಕೊಟ್ಟನು. ಆ ವರ್ಷದ ಪ್ರಾರಂಭದದಿನ ಆ ರಸ್ತೆಯಮೇಲೆ ಮೊದಲನೆಯ ಬಾರಿ ಪ್ರಯಾಣಿಕರ ಬಂಡಿಯೊಂದು ಹೊರಟು, ಸುರಕ್ಷಿತವಾಗಿ ಪ್ರಯಾಣ ಮಾಡಿತು.

ಮ್ಯಾಂಚೆಸ್ಟರ್ ಮತ್ತು ಲಿವರ್‌ಪೂಲ್ ಮಾರ್ಗವು ಇಷ್ಟು ದೂರದವರೆಗೆ ಸಿದ್ಧವಾಗಿದ್ದಾಗಲೂ ಸಹ, ಆ ಕಂಪೆನಿಯ ಡೈರೆಕ್ಟರುಗಳು, ಇನ್ನೂ ಆವಿಯಶಕ್ತಿಯಿಂದ ನಡೆವ ಇಂಜಿನುಗಳನ್ನು ಉಪಯೋಗಿಸಬೇಕೇ, ಅಥವ ಕಬ್ಬಿಣದ ಹಳಿಗಳಮೇಲೆ, ಕುದುರೆಗಳಿಂದ ಎಳೆಯಲ್ಪಡುವ ಬಂಡಿಗಳನ್ನು ಉಪಯೋಗಿಸಬೇಕೇ ಎಂಬುದನ್ನು ನಿರ್ಧರಿಸಿರಲಿಲ್ಲ. ಸ್ಟೀವೆನ್ಸನ ಸಾಮರ್ಥ್ಯದ ಪರಿಚಯವಿದ್ದರೂ, ಅವನ ಕಾರ್ಯವನ್ನು ಅಸೂಯಾಪರರಾದ ಕೆಲಮಂದಿ ಇಂಜಿನಿಯರುಗಳು ಮೆಚ್ಚಿ ಶಿಫಾರಸು ಮಾಡಲಾರದಿದ್ದುದರಿಂದ ಅವರಿಗೆ ನಂಬಿಕೆ ಹುಟ್ಟದಾಯಿತು. ಆದರೆ ಸ್ಟೀವೆನ್‌ಸನ್‌ನು ತನ್ನ ಪ್ರಯತ್ನವನ್ನು ಬಿಡದೆ ಒಂದು ಇಂಜನ್ನನ್ನು ತಯಾರಿಸುತ್ತಲೇ ಇದ್ದನು. ಕೆಲವು ದಿನಗಳಾದಮೇಲೆ ಮತ್ತೊಂದುಬಾರಿ ಸ್ಟಾಕ್‌ಟರ್, ಡಾರ್ಲಿಂಗ್‌ಟನ್, ಕಿಲ್ಲಿಂಗ್‌ವರ್ತ್ ಮುಂತಾದ ಸ್ಥಳಗಳಿಗೆ ಡೈರೆಕ್ಟರುಗಳಲ್ಲಿ ಕೆಲವರು ಪ್ರಯಾಣಮಾಡಿ, ಅಲ್ಲಿ ಸ್ಟೀವೆನ್ಸನು ತಯಾರಿಸಿದ್ದ ಆವಿಯ ಇಂಜನುಗಳು ಮಾಡುತ್ತಿದ್ದ ಕೆಲಸವನ್ನು ಪರೀಕ್ಷಿಸಿ ಸಂತುಷ್ಟರಾಗಿ, ಹಬೆಯ ಇಂಜನನ್ನು

ತಯಾರಿಸಲು ಕೆಲವು ನಿಬಂಧನೆಗಳನ್ನು ಏರ್ಪಡಿಸಿ, ಆ ನಿಬಂಧನೆಗಳಂತೆ ತೃಪ್ತಿಕರವಾಗಿ ತಯಾರಿಸಲ್ಪಟ್ಟ ಇಂಜನಿಗೆ ೫೦೦ ಪೌಂಡುಗಳ ಬಹುಮಾನ ಕೊಡತಕ್ಕುದೆಂದು ನಿರ್ಣಯಿಸಿದರು.

ಜಾರ್ಜ್ ಸ್ಟೀವೆನ್ಸನನೂ, ಆತನ ಮಗನಾದ ರಾಬರ್ಟ್ ಸ್ಟೀವೆನ್ಸನನೂ, ಈ ಸುಸಂದರ್ಭವನ್ನು ಕಳೆದುಕೊಂಡಾರೇ! ತಮ್ಮ ಸರ್ವಶಕ್ತಿಯನ್ನೂ ಪ್ರಯೋಗಿಸಿ, ಡೈರೆಕ್ಟರುಗಳು ಗೊತ್ತುಮಾಡಿದ್ದ ನಿಬಂಧನೆಗಳಿಲ್ಲಕ್ಕೂ ತೃಪ್ತಿಕರವಾದಂಥ ರಾಕೆಟ್ '*The Rocket*' ಎಂಬ ಹೆಸರಿನ ಒಂದು ಇಂಜನ್ನನ್ನು ತಯಾರಿಸಿದರು. ಇವರು ಮಾತ್ರವಲ್ಲ: ಇನ್ನೂ ಮೂವರು ಕಾರೇಗಾರರೂ ಈ ಪೋಟಾಪೋಟಿಗೆ ಇಂಜನುಗಳನ್ನು ತಯಾರಿಸಿದ್ದರು. ಅವುಗಳನ್ನು ಪ್ರಯೋಗಕ್ಕಿಟ್ಟು ಅವುಗಳ ಕಾರ್ಯಶಕ್ತಿಯನ್ನು ಪರೀಕ್ಷಿಸಲು ೧೮೨೯ನೆಯ ಅಕ್ಟೋಬರು ೬ನೆಯ ದಿನವು ಗೊತ್ತುಮಾಡಲ್ಪಟ್ಟಿತು. ಆ ದಿನ '**ನಾವೆಲ್‌ಟಿ**' '**ಸ್ಯಾನ್ಸ್‌ಪೆರೇಲ್**' '**ರಾಕೆಟ್**' ಮತ್ತು '**ಪರ್ಸಿವಿಯರೆನ್ಸ್**' ಎಂಬ ಹೆಸರಿನ ನಾಲ್ಕು ಇಂಜನುಗಳನ್ನು ಪೋಟಾಪೋಟಿಗಾಗಿ ಅವುಗಳ ಕರ್ತರು ತಂದು ನಿಲ್ಲಿಸಿದರು. ಆ ನಾಲ್ಕರಲ್ಲೂ ಅತ್ಯುತ್ತಮ ರೀತಿಯಿಂದ ಪೂರ್ಣವಾಗಿ ತಯಾರಾಗಿದ್ದುದೆಂದರೆ ರಾಕೆಟ್ ಒಂದೇ! ಪ್ರಯೋಗಕ್ಕಿಟ್ಟಾಗ್ಗೆ ಅವುಗಳಲ್ಲೊಂದೊಂದೂ ಸ್ವಲ್ಪ ಸ್ವಲ್ಪ ದೂರ ಓಡಿತಾದರೂ, ಕೊನೆಯುವರೆಗೂ ಸ್ಟೀವೆನ್ಸನರ ರಾಕೆಟ್ ಒಂದೇ ಸಕಲವಿಧವಾದ ಪರೀಕ್ಷೆಗಳಿಗೆ ಒಳಪಟ್ಟರೂ ಜಯಶಾಲಿಯಾಗಿ ಗಂಟೆಗೆ ಸರ್ವಸಾಮಾನ್ಯವಾಗಿ ಹದಿನೈದು ಮೈಲಿಗಳ ಪ್ರಯಾಣಮಾಡಲು ಶಕ್ತವಾದ ಯಂತ್ರವೆಂದು ನಿರ್ಧರವಾಯಿತು. ಸಂದೇಹಪಡುತ್ತಿದ್ದ ಡೈರೆಕ್ಟರುಗಳು, ಸಂತುಷ್ಟರಾಗಿ ಸ್ಟೀವೆನ್ಸನನಿಗೆ ಧನ್ಯವಾದಗಳನ್ನರ್ಪಿಸಿ ಮನಸಾರೆ ಹೊಗಳಿದರು. ನೆರೆದ ಸಹಸ್ರಾರು ಜನಗಳು, ಜಯಘೋಷಮಾಡುತ್ತಿರಲು, ಮೊದಲೇ ಏರ್ಪಡಿಸಿದ್ದ ಐದುನೂರು ಪೌಂಡುಗಳ ಬಹುಮಾನವು 'ರಾಕೆಟ್' ಇಂಜನಿಗಾಗಿ ಸ್ಟೀವೆನ್ಸನ್ ತಂದೆಮಕ್ಕಳಿಗೆ ಕೊಡಲ್ಪಟ್ಟಿತು.

ಹೀಗೆ ೧೮೨೯ನೆಯ ಅಕ್ಟೋಬರು ನವಂಬರು ವೇಳೆಗೆ ಯಂತ್ರವು ಸಿದ್ಧವಾಯಿತಾದರೂ, ರಸ್ತೆಯು ಪ್ರಯಾಣಕ್ಕೆ ಸಿದ್ಧವಾಗಿರಲಿಲ್ಲ. ೧೮೨೯ನೆಯ ವರ್ಷದಲ್ಲಿ ಮಳೆ ಸ್ವಲ್ಪ ಹೆಚ್ಚಾಗಿ ಕೆಲಸಕಾರ್ಯಗಳು ಶೀಘ್ರವಾಗಿ

ನಡೆಯದೆ, ೧೮೩೦ ನೆಯ ಜೂನ್ ವೇಳೆಗೆ ಕಾಮಗಾರಿಗಳೆಲ್ಲ ಮುಗಿದು ಪ್ರಯಾಣಕ್ಕೆ ರಸ್ತೆಯು ಸಿದ್ಧವಾಯಿತು. ಒಡನೆ ಒಂದು ದಿನ ಕಂಪೆನಿಯ ಡೈರೆಕ್ಟರುಗಳನ್ನೆಲ್ಲ ಬಂಡಿಗಳಲ್ಲಿ ಕೂರಿಸಿಕೊಂಡು ಲಿವರ್ಪೂಲಿನಿಂದ ಮ್ಯಾಂಚೆಸ್ಟರಿಗೂ, ಅಲ್ಲಿಂದ ಹಿಂದಿರುಗಿ ಲಿವರ್ಪೂಲಿಗೂ ಪ್ರಯಾಣಮಾಡಿಸಿದನು. ಲಿವರ್ಪೂಲಿನಬಳಿ ಮಾಡಿದ ಸುರಂಗಮಾರ್ಗವನ್ನು ಕಲ್ಲಿದ್ದಲಹೊಗೆ (*coal-gas*) ಯಿಂದ ತಯಾರಿಸಲ್ಪಟ್ಟ ದೀಪಗಳಿಂದ ಬೆಳಕು ಮಾಡಿದರು. ಹೀಗೆ ಸರ್ವವೂ ಸಿದ್ಧವಾದಮೇಲೆ ೧೮೩೦ ನೆಯ ಸೆಪ್ಟಂಬರು ೧೫ ನೆಯ ದಿನ ಲಿವರ್ಪೂಲ್ ಮ್ಯಾಂಚೆಸ್ಟರ್ ಮಾರ್ಗವು ಸಾರ್ವಜನಿಕ ಉಪಯೋಗಕ್ಕಾಗಿ ತೆರೆಯಲ್ಪಡತಕ್ಕದೆಂದು ನಿರ್ಣಯವಾಯಿತು. ಅದು ಆಗ ಕೇವಲ ಆ ಎರಡು ಊರುಗಳಿಗೆ ಮಾತ್ರ ಸಂಬಂಧಿಸಿದ ವಿಚಾರವಾಗಲಿಲ್ಲ. ಪ್ರಪಂಚದ ನಾಗರಿಕತೆಯು ಅಭಿವೃದ್ಧಿಮಾರ್ಗದಲ್ಲಿ ಪಡೆದ ಜಯದ ಸ್ಫುಟವಾದ ಒಂದು ಉದಾಹರಣೆಯಾದುದರಿಂದ ಅದರ ಆ ಉತ್ಸವಕಾಲದಲ್ಲಿ ಸಕಲರೂ ಉತ್ಸಾಹಗೊಂಡು ಭಾಗ ತೆಗೆದುಕೊಂಡರು. ಡ್ಯೂಕ್ ಆಫ್ ವೆಲ್ಲಿಂಗ್‌ಟನ್ ಎಂಬ ಸರ್ವ ಸೇನಾಧಿಪತಿಯೂ, ಬ್ರಿಟಿಷ್ ಚಕ್ರಾಧಿಪತ್ಯದ ಮಂತ್ರಿಶೇಖರನೂ, ಸರ್ ರಾಬರ್ಟ್‌ಪೀಲ್ ಎಂಬ ಶ್ರೀಮಂತನೂ, ಸ್ಟೇಟ್ ಸೆಕ್ರೆಟರಿ ಎಂಬ ಮುಖ್ಯಾಧಿಕಾರಿಯೂ, ಮತ್ತು ಈ ರೈಲ್ವೆ ನ್ಯಾಯಚಟ್ಟವು ಮಂಜೂರಾಗಲು ಅವಿಶ್ರಾಂತ ಶ್ರಮಪಟ್ಟು ಕೆಲಸಮಾಡಿದ ಲಿವರ್ಪೂಲಿನ ಪಾರ್ಲಿಮೆಂಟ್ ಮೆಂಬರು Mr. ಹಸ್ಕಿನ್‌ಸನ್ ಎಂಬಾತನೂ, ಇನ್ನೂ ಹತ್ತೆಂಟು ಸಹಸ್ರ ಜನರೂ, ಆ ಅಪೂರ್ವನೋಟವನ್ನು ನೋಡಲು ಆತುರಗೊಂಡು ನೆರೆದರು. ಅಷ್ಟು ಜನಸಂದಣಿಯು ಸೇರಿದಾಗ ಅಕಸ್ಮಾತ್ತಾಗಿ ಆಗಬಹುದಾದ ಅಪಾಯಗಳಿಗೆ ಅವಕಾಶವಾಗದಂತೆ, ಸೋಲ್ಜರುಗಳನ್ನೂ ಪೋಲೀಸಿನವರನ್ನೂ ನಿಯಮಿಸಿ ಡೈರೆಕ್ಟರುಗಳು ಬಹುಮಟ್ಟಿನ ಎಚ್ಚರಿಕೆಯಿಂದಿದ್ದರು.

ಜಾರ್ಜ್ ಸ್ಟೀವೆನ್‌ಸನನು ತನ್ನ ನ್ಯೂಕ್ಯಾಸೆಲ್ ಕಾರ್ಯಾಲಯ (ಫ್ಯಾಕ್ಟರಿ)ದಲ್ಲಿ ತಯಾರಿಸಿದ್ದ ನಾರ್ತಂಬ್ರಿಯನ್, ಫಿನಿಕ್ಸ್, ನಾರ್ತ್‌ಸ್ಟಾರ್, ರಾಕೆಟ್, ಡಾರ್ಟ್, ಕಾಮೆಟ್, ಆರೋ, ಮಿಟಿಯೋರ್ ಎಂಬ ಎಂಟು ಇಂಜನುಗಳನ್ನು ತಂದು ಪ್ರಯಾಣಕ್ಕೆ ಸಿದ್ಧಗೊಳಿಸಿ ನಿಲ್ಲಿಸಿದನು. ಎಲ್ಲಕ್ಕಿಂ

ತಲೂ ಮುಂದಿನ ನಾರ್ತಂಬ್ರಿಯನ್ ಇಂಜನನ್ನು ಜಾರ್ಜ್ ಸ್ಟೀವೆನ್‌ಸನ್ನನೇ ನಡೆಯಿಸಿದನು. ಮಿಕ್ಕ ಇಂಜನುಗಳನ್ನು ಅವನ ತಮ್ಮನೂ ಮಗನೂ ಮತ್ತು ಮುಖ್ಯರಾದ ಶಿಷ್ಯರೂ ನಡೆಯಿಸಲು ಸಿದ್ಧರಾದರು. ರಸ್ತೆಯು ದ್ದಕ್ಕೂ ನೆರೆದಿದ್ದ ಸಹಸ್ರಾರುಮಂದಿ ಪ್ರಜೆಗಳು ಆ ಅಪೂರ್ವನೋಟ ವನ್ನು ನೋಡಿ, ಕಿವಿಗಳು ಕಿವುಡಾಗುವಂತೆ ಮಾಡುತ್ತಿದ್ದ ಜಯಘೋಷ ಗಳಿಂದ ಆ ಪ್ರಯಾಣವು ಪ್ರಾರಂಭವಾಯಿತು. ಆ ಶುಭ ಪ್ರಯಾಣದಲ್ಲಿ ಅಪಾಯವುಂಟಾಗದಂತೆ ಎಷ್ಟುಮಟ್ಟಿನ ಜಾಗರೂಕತೆಯನ್ನು ವಹಿಸಿದ್ದರೂ ದುರ್ದೈವವಶವಾಗಿ ಒಂದು ಅಪಾಯ ನಡೆದುಹೋಯಿತು. ಲಿವರ್ಪೂಲಿ ನಿಂದ ಹದಿನೇಳು ಮೈಲು ದೂರದಲ್ಲಿ, ನೀರು ತೆಗೆದುಕೊಳ್ಳಲಿಕ್ಕಾಗಿ ಬಂಡಿ ನಿಂತಿದ್ದಾಗ ಕೆಳಕ್ಕೆ ಇಳಿದಿದ್ದ ಪಾರ್ಲಿಮೆಂಟ್ ಮೆಂಬರು ಮಿ|| ಹಸ್ಕಿಸ್ಸನ್ ಎಂಬಾತನಮೇಲೆ ಬಂಡಿಯು ಹರಿದು ಆತನು ಬಹು ಅಪಾಯಹೊಂದಿ ಆ ದಿನ ಸಾಯಂಕಾಲವೇ ಮೃತನಾದನು. ಆ ದಿನ ಆ ಸಂಬಂಧದಲ್ಲಿ ನಡೆಯ ಬೇಕೆಂದು ಏರ್ಪಟ್ಟಿದ್ದ ಅನೇಕ ಸಂತೋಷಕೂಟಗಳು ಬಹು ವ್ಯಸನದಿಂದ ನಿಂತುಹೋದುವು. ಆದರೆ ಮೊದಲೇ ಏರ್ಪಟ್ಟಿದಂತೆ ಪ್ರಯಾಣವು ಮಾತ್ರ ಮ್ಯಾಂಚೆಸ್ಟರ್‌ವರೆಗೆ ಹೋಗಿ ಒಡನೆ ಹಿಂದಿರುಗತಕ್ಕುದೆಂದು ಡ್ಯೂಕನು ಆಜ್ಞಾಪಿಸಿದನು.

ಸ್ಟಾಕ್‌ಟನ್ ಮತ್ತು ಡಾರ್ಲಿಂಗ್‌ಟನ್‌ಗಳಲ್ಲಿ ಪ್ರಾರಂಭಿಸಿದ್ದ ರೈಲು ಮಾರ್ಗಗಳಿಗಿಂತಲೂ, ಈ ರಸ್ತೆಯು ಉತ್ಕೃಷ್ಟ ತರಗತಿಯದಾಗಿ ಪರಿಣ ಮಿಸಿತು. ದಿನವೊಂದಕ್ಕೆ ೫೦೦ ಮಂದಿ ಪ್ರಯಾಣಮಾಡಲು ಸಾಧ್ಯವಾ ದೀತೋ ಎಂದು ಸಂದೇಹಗೊಂಡಿದ್ದ ಡೈರೆಕ್ಟರಿಗೆ ಪ್ರಾರಂಭದಲ್ಲೇ ೧೨೦೦ ಜನರು ಪ್ರಯಾಣಮಾಡಿದ್ದನ್ನು ಕಂಡು ಪರಮಾಶ್ಚರ್ಯವಾಯಿತು. ರೈಲು ಮೂಲಕ ಗಂಟೆಯೊಂದಕ್ಕೆ ಹತ್ತು ಮೈಲುಗಳಂತೆ ಪ್ರಯಾಣ ಸೌಕರ್ಯವು ಏರ್ಪಡಬಹುದೆಂದು ಇಂಜನಿಯರುಗಳೇ ಲೆಕ್ಕಹಾಕಿದ್ದರು. ಆದರೆ ಗಂಟೆ ಯೊಂದಕ್ಕೆ ೨೪ ರಿಂದ ೩೦ ಮೈಲುಗಳವರೆಗೆ ಓಡುತ್ತಿದ್ದ ಇಂಜನುಗಳನ್ನು ನೋಡಿ ಅವರೇ ಏನು ಹೇಳಲೂ ತೋರದೆ, ಸ್ಟೀವೆನ್‌ಸನ್ನನ ಸಾಮರ್ಥ್ಯಕ್ಕೆ ತಲೆದೂಗಿದರು.

ರೈಲುಮಾರ್ಗದ ಪ್ರಯೋಜನವು ದಿನದಿನಕ್ಕೆ ಹೆಚ್ಚುತ್ತ ನಡೆಯಿತು.

ಪ್ರಾರಂಭಕ್ಕೆ ಅದರ ವಿಷಯದಲ್ಲಿ ದೋಷವನ್ನೂ ಅಸಹನೆಯನ್ನೂ ವ್ಯಕ್ತಪಡಿಸಿದ್ದ ಅನೇಕರು ಈಗ ಅದನ್ನು ಹೊಗಳತೊಡಗಿದರು. ಪ್ರಾರಂಭಕ್ಕೆ ರಸ್ತೆಯನ್ನು ಹಾಕಲು ತಮ್ಮ ಭೂಮಿಯನ್ನು ಕೊಡಲು ಒಪ್ಪದಿದ್ದವರೂ, ಹಲವು ಬಗೆಯ ಅಡಚಣೆಗಳನ್ನು ತಂದೊಡ್ಡಿದವರೂ ಈಗ ತಮಗೆ ಆ ಲಾಭವು ತಪ್ಪಿಹೋಯಿತಲ್ಲಾ ಎಂದು ಮರುಗತೊಡಗಿದರು. ರೈಲುಮಾರ್ಗದ ಉಭಯಪಾರ್ಶ್ವಗಳಲ್ಲೂ, ಮನೆಗಳೂ, ಪ್ರಾರ್ಥನಾಮಂದಿರಗಳೂ ಅಂಗಡಿ ಮುಂಗಟ್ಟುಗಳೂ ಏರ್ಪಾಡಾದುವು.

ಲಿವರ್‌ಪೂಲ್ ಮ್ಯಾಂಚೆಸ್ಟರು ಮಾರ್ಗವು ಪ್ರಾರಂಭವಾಗಿ ಒಂದು ಒಂದೂವರೆವರ್ಷಕಾಲ ಕೆಲಸಮಾಡಿದಮೇಲೆ, ಸ್ಟೀವೆನ್ಸನ್ನನಮೇಲೆ ಮತ್ತೊಂದು ಬಗೆಯ ಆಕ್ಷೇಪವೂ ಉಳಿದಿರಲಿಲ್ಲ. ಆದರೆ ಆತನು ತನ್ನ ಫ್ಯಾಕ್ಟರಿಯಲ್ಲೇ ತಯಾರಾದ ಇಂಜನುಗಳನ್ನೇ ಉಪಯೋಗಿಸುತ್ತ ಬೇರೆಯವರ ಇಂಜನುಗಳಿಗೆ ಉತ್ತೇಜನ ಕೊಡುತ್ತಿಲ್ಲವೆಂದೂ, ಕೆಲಸಕಾರ್ಯಗಳಿಗೆ ತನ್ನ ಅನುಬಂಧಿಗಳನ್ನೂ ಶಿಷ್ಯರನ್ನೂ ಅಲ್ಲದೆ ಹೊರಗಿನವರನ್ನು ಸೇರಿಸಿಕೊಳ್ಳುತ್ತಿಲ್ಲವೆಂದೂ ಸ್ವಾರ್ಥಿಗಳಾದ ಕೆಲವರು ಆಕ್ಷೇಪಿಸಲಾರಂಭಿಸಿದರು. ಆದರೆ ಸ್ಟೀವೆನ್ಸನ್ನನ ಗುಣನಡತೆಗಳನ್ನು ತಿಳಿದಿದ್ದ ಕೆಲಮಂದಿ ನಿಷ್ಪಕ್ಷಪಾತಿಗಳು, ಡೈರೆಕ್ಟರುಗಳು ಏರ್ಪಡಿಸಿದ್ದ ಪೋಟಾಪೋಟಿಯಲ್ಲಿ ಕೊನೆಯುವರೆಗೂ ಬೇರೆ ಯಾವ ಇಂಜನ್ನೂ ಆತನ ಇಂಜನಿನೊಂದಿಗೆ ಜಯಶಾಲಿಯಾಗದೆ ಸೋತುಹೋದುದರಿಂದ ಆತನ ಯಂತ್ರಗಳನ್ನೇ ಉಪಯೋಗಿಸಬೇಕಾಯಿತೆಂದೂ, ಈ ಹೊಸ ಉದ್ಯೋಗವನ್ನು ಕಲಿತು ಅನುಭವಹೊಂದಿದವರು ಸಿಕ್ಕುವುದು ದುರ್ಲಭವಾದುದರಿಂದ ಸಧ್ಯಕ್ಕೆ ಆತನ ಬಳಿಯಲ್ಲಿದ್ದು ಅನುಭವಗೊಂಡವರನ್ನೇ ಸೇರಿಸಿಕೊಂಡು ಕೆಲಸ ಸಾಗಿಸುತ್ತಿದ್ದಾನೆಂದೂ, ಪತ್ರಿಕೆಗಳಲ್ಲಿ ಸಮಾಧಾನಕರವಾದ ಲೇಖನಗಳನ್ನು ಬರೆದು ಆತನಮೇಲಿದ್ದ ಆ ಅಪವಾದವನ್ನೂ ನಿವಾರಿಸಿದರು. ಈ ಲಿವರ್‌ಪೂಲ್ ಮ್ಯಾಂಚೆಸ್ಟರ್ ರೈಲುಮಾರ್ಗವು ಪ್ರಾರಂಭವಾದುದರಿಂದ ಜಾರ್ಜ್ ಸ್ಟೀವೆನ್‌ಸನ್‌ನ ಕೀರ್ತಿಯು ಯೂರೋಪು ಖಂಡದಲ್ಲೇ ಹಬ್ಬಲು ಅವಕಾಶವಾಯಿತು.

## ಅಧ್ಯಾಯ ೬　　　"ಕೊನೆಯ ವರ್ಷಗಳು— ಮೃತಿ"

'ಅದೃಷ್ಟಪರೀಕ್ಷೆ' ಯೆಂಬ ಒಂದು ಹೇಳಿಕೆಯುಂಟಲ್ಲವೆ? ಹಾಗೆಂದರೆ ಪ್ರತಿಯೊಬ್ಬನ ಪ್ರಾಪ್ತಿಯಲ್ಲೂ ಏನಿದೆಯೆಂಬುದು ಅವನಿಗೆ ಗೋಚರಕ್ಕೆ ಬಂದು ಅವನಿಗೆ ಲಭ್ಯವಾಗುವಿಕೆಯಲ್ಲಿ ನಡೆವ ಅದೃಶ್ಯವಾದ ಪರೀಕ್ಷೆ! ಇಂತಹ ಅದೃಷ್ಟ ಪರೀಕ್ಷೆಯು ಹೆಚ್ಚುಕಡಮೆ ಪ್ರತಿಯೊಬ್ಬನ ಜೀವಮಾನದಲ್ಲೂ ಒದಗುತ್ತದೆ. ಕೆಲವರಿಗೆ ಬಡತನದ ರೂಪದಲ್ಲಿ, ಕೆಲವರಿಗೆ ಕಾಮಕ್ರೋಧಾದಿ ಅಂತಃಶತ್ರುಗಳ ರೂಪದಲ್ಲಿ, ಮತ್ತೆ ಕೆಲವರಿಗೆ ಬಂಧುಮಿತ್ರಾದಿಗಳ ಅಗಲುವಿಕೆ, ದೇಶಭ್ರಷ್ಟತೆ, ಅರ್ಥಹಾನಿ ಮಾನಹಾನಿ ಮುಂತಾದುವುಗಳ ರೂಪದಲ್ಲಿ ಈ ಅದೃಷ್ಟ ಪರೀಕ್ಷೆಯು ನಡೆಯುತ್ತಿದೆ. ಧೀರರಾದವರು ಸುಳಿಸೆಳೆವುಗಳಿಂದ ಕೂಡಿದ ಈ ಭೀಕರ ಪ್ರವಾಹದಲ್ಲಿ ಈಜಿಪಾರಾಗಿ ಜಯಿಸುವರು. ಇಂಥವರಿಗೆ ಜಯಲಕ್ಷ್ಮಿಯು ಒಲಿದು ಮಾಲೆಹಾಕುವಳು. ಮುಂದೆ ಅವರ ಜೀವಿತವು ಸುಖಮಯವಾಗುವುದು. ಮತ್ತೆ ಕೆಲವರು, ತಮ್ಮನ್ನು ಪ್ರತಿಭಟಿಸಿದ ಕಷ್ಟ ತಾಪತ್ರಯಗಳೆಂಬ ಪ್ರವಾಹದ ವೇಗವನ್ನು ನೋಡಿ ಬೆದರಿ ಬೆಂಡಾಗಿ ಪ್ರಯತ್ನಶೂನ್ಯರಾಗಿ ತಟಸ್ಥರಾಗಿಬಿಡುವರು. ಅವರು ಜೀವಾವಧಿ ಹತಭಾಗ್ಯರಾಗಿ ನರಳುವುದು ತಪ್ಪದು.

ಜಾರ್ಜ್ ಸ್ಟೀವೆನ್‌ಸನ ಅದೃಷ್ಟ ಪರೀಕ್ಷೆಯು, ಮೇಲಿನ ಅಧ್ಯಾಯಗಳಲ್ಲಿ ಹೇಳಿದಂತೆ ಹಲವು ಬಗೆಗಳಲ್ಲಿ ನಡೆದು, ಆತನು ಜಯಶೀಲನಾಗಿದ್ದನು ರಾಕೆಟ್ ಎಂಬ ಯಂತ್ರವಿಶೇಷವನ್ನು ಕಂಡುಹಿಡಿದುದರೊಂದಿಗೆ ಆತನ ಅದೃಷ್ಟತರುವು ಫಲಿಸಿತೆಂದು ಹೇಳಬಹುದು. ಲಿವರ್‌ಪೂಲ್ ಮ್ಯಾಂಚೆಸ್ಟರ್ ರೈಲ್‌ರಸ್ತೆಯ ಕಾರ್ಯವು ಮುಗಿದು ಜಯಪ್ರದವಾದುದರಿಂದ, ಆತನ ಶಕ್ತಿಸಾಮರ್ಥ್ಯದಲ್ಲೂ, ಆತನ ಯಂತ್ರಗಳ ಯೋಗ್ಯತೆಯ ವಿಷಯದಲ್ಲೂ ಯಾರಿಗೂ ಸಂದೇಹ ಉಳಿಯಲಿಲ್ಲ. ಇಂಗ್ಲೆಂಡಿನ ಇತರ ಭಾಗಗಳವರೂ, ತಮ್ಮ ಪ್ರಾಂತದಲ್ಲಿ ರೈಲುಮಾರ್ಗಗಳನ್ನು ಹಾಕಿಸಿಕೊಂಡು ಪ್ರಯಾಣಸೌಕರ್ಯವನ್ನೂ ವ್ಯಾಪಾರ ಉದ್ಯೋಗಗಳ ಆನುಕೂಲ್ಯವನ್ನೂ ಹೆಚ್ಚಿಸಿಕೊಳ್ಳಬಹುದೆಂದು ಯೋಚಿಸಿ ಅಲ್ಲಲ್ಲೆ ಕಂಪೆನಿಗಳನ್ನು ಏರ್ಪಡಿಸಿಕೊಂಡರು. ಜಾರ್ಜ್ ಸ್ಟೀವೆನ್‌ಸನಿಗೂ, ಆತನ ಮಗ ರಾಬರ್ಟ್ ಸ್ಟೀವೆನ್‌ಸನಿಗೂ, ಆತನ ಶಿಷ್ಯಪ್ರಶಿಷ್ಯರಾದ ಕೆಲಸಗಾರರಿಗೂ ಮೇಲೆಮೇಲೆ ಹಲವು

ಕಡೆಯಿಂದ ಆಹ್ವಾನಗಳು ಬರತೊಡಗಿದುವು. ಆತನು ಕೈಗೊಂಡ ಕಾರ್ಯಕ್ಕೆ ಜಯವು ಸಿದ್ಧ ಎಂಬ ಮಾತು ಎಲ್ಲರಿಗೂ ಮನದಟ್ಟಾಯಿತು.

ಲಿವರ್‌ಪೂಲ್‌ನಿಂದ ಮ್ಯಾಂಚೆಸ್ಟರಿಗೆ ಆದ ರೈಲುಮಾರ್ಗವು, ಕ್ರಮ ಕ್ರಮವಾಗಿ ಮುಂದರಿಸಿತು. ಅವುಗಳಂತೆಯೇ ವ್ಯಾಪಾರ ಉದ್ಯೋಗ ಮುಂತಾದುವುಗಳಿಗೆ ಹೆಸರಾದ ಬರ್ಮಿಂಗ್‌ಹ್ಯಾಂ, ಲೀಡ್ಸ್, ಲಂಡರ್, ನಾರ್ಥಾಂಟನ್ ಮುಂತಾದ ಹಲವು ಪಟ್ಟಣಗಳಿಗೆ ರೈಲುಮಾರ್ಗಗಳಾಗಲು ಪ್ರಯತ್ನಗಳು ನಡೆದುವು. ಲಂಡರ್ ಮತ್ತು ಬರ್ಮಿಂಗ್‌ಹ್ಯಾಂಗಳ ಮಧ್ಯದ ರಸ್ತೆಯ ತಯಾರಿಯು ಸ್ಟೀವೆನ್ಸನ ಮೇಲ್ವಿಚಾರಣೆಗೇ ಒಳಪಟ್ಟಿತು. ಈ ಮಾರ್ಗದಲ್ಲಿ ಕೆಲಸಮಾಡುವಾಗಲೇ, ರಸ್ತೆಯಾಗುವ ಸ್ಥಳದ ಪಕ್ಕದಲ್ಲಿ ಕಲ್ಲಿದ್ದಲು ಸಿಕ್ಕಬಹುದಾದ ಸೂಚನೆಗಳು ಕಂಡುಬರಲು, ತನ್ನ ಮಗನ ಸಲಹೆಯನ್ನನುಸರಿಸಿ, ಜಾರ್ಜ್ ಸ್ಟೀವೆನ್ಸನು, ಆ ಕಲ್ಲಿದ್ದಲ ಗಣಿಯಿದ್ದ ಪ್ರದೇಶವನ್ನು ಕ್ರಯಕ್ಕೆ ಪಡೆದು, ಕೆಲಸಗಾರರನ್ನಿಟ್ಟು ಕೆಲಸಕ್ಕೆ ಪ್ರಾರಂಭಿಸಿದನು. ಕೆಲವು ದಿನಗಳಲ್ಲೇ ಅಲ್ಲೊಂದು ಗ್ರಾಮವು ಬೆಳೆಯಿತು. ಅಲ್ಲಿಯ ಕೆಲಸಗಾರರ ಅನುಕೂಲಕ್ಕಾಗಿ, ಅಂಗಡಿ ಮುಂಗಟ್ಟುಗಳೂ, ಒಂದು ಪ್ರಾರ್ಥನಾಲಯವೂ, ಪಾಠಶಾಲೆ ಆಸ್ಪತ್ರೆ ಮುಂತಾದುವೂ ರಚನೆಯಾದುವು. ಜಾರ್ಜ್ ಸ್ಟೀವೆನ್ಸನು ಐವತ್ತು ವರ್ಷಗಳ ವಯಸ್ಕನಾಗಿದ್ದರೂ ಲೇಶವೂ ಬೇಸರವಿಲ್ಲದೆ,ಆಯಾಸವೆಂಬುದಿಲ್ಲದೆ, ದಿನವೊಂದಕ್ಕೆ ಹದಿನಾರು ಹದಿನೆಂಟು ಗಂಟೆಗಳಕಾಲ ಒಂದೇ ಸಮನಾಗಿ ಕೆಲಸಮಾಡುತ್ತಲಿದ್ದನು. ೧೮೩೬ ನೆಯ ಸಂ|| ದಲ್ಲಿ ಆತನು ಐದು ರೈಲ್ವೆ ಕಂಪೆನಿಗಳಿಗೆ ಮುಖ್ಯನಾದ ಇಂಜನಿಯರ್ ಆಗಿ ಅವೆಲ್ಲವುಗಳ ಆಡಳಿತವನ್ನೂ ನಡೆಸುತ್ತಿದ್ದನು. ಇದಕ್ಕಾಗಿ ಆತನು ತನ್ನ ಗುಮಾಸ್ತೆಗೆ ದಿನವೊಂದಕ್ಕೆ ಹನ್ನೆರಡು ಗಂಟೆಗಳವರೆಗೆ ಹೇಳಿ ಬರೆಸುತ್ತಿದ್ದ ಲೆಕ್ಕ - ಕಾಗದಪತ್ರಗಳೇ ವಿಶೇಷವಾಗಿದ್ದುದರೊಂದಿಗೆ ಒಂದೆಡೆಯಿಂದ ಮತ್ತೊಂದು ಸ್ಥಳಕ್ಕೆ ಮಾಡಬೇಕಾಗಿದ್ದ ಪ್ರಯಾಣವೂ ವಿಶೇಷವಾಗಿತ್ತು - ಇಂಗ್ಲೆಂಡಿನಲ್ಲಿ ರೈಲ್ವೇಯಿಂದ ಆಗುತ್ತಿದ್ದ ಪ್ರಯೋಜನವನ್ನು ಕಂಡ ಸ್ಕಾಟ್ಲೆಂಡ್ ಮತ್ತು ಐರ್ಲೆಂಡು ದೇಶಗಳವರೂ ತಮ್ಮತಮ್ಮ ದೇಶಗಳಲ್ಲಿ ರೈಲುಮಾರ್ಗಗಳನ್ನು ಹಾಕಿಸಿಕೊಳ್ಳಬೇಕೆಂದು ಅಪೇಕ್ಷಿಸಿದರು. ೧೮೩೬ರಲ್ಲಿ ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್‌ಗಳಲ್ಲಿ ರೈಲ್ವೇಕಾಮಗಾರಿಗಳು ಪ್ರಾರಂಭ

ವಾದುವು. ಜನಗಳಿಗೆ ಅದೊಂದು ಲಾಭದಾಯಕವಾದ ಉದ್ಯೋಗ ವೆಂದು ಮನಸ್ಸಿಗಂಟಿತು. ದುಡ್ಡಿದ್ದವರೆಲ್ಲರೂ ಅದಕ್ಕೆ ನುಗ್ಗಲಾರಂಭಿಸಿ ದರು. ದಿನದಿನಕ್ಕೆ ರೈಲುಮಾರ್ಗದಲ್ಲಿ ಪ್ರಯಾಣವು ಸುಕರವೆಂದೂ, ಮಿತ ವ್ಯಯದಿಂದ, ಶೀಘ್ರಕಾಲದಲ್ಲಿ ಸಾಗತಕ್ಕುದೆಂದೂ ಪ್ರಜಾಸಾಮಾನ್ಯದಲ್ಲಿ ತಿಳಿವಳಿಕೆಗೆ ಬಂದಿತು. ಶ್ರೀಮಂತರು ಬಡವರೆನ್ನದೆ ಸಕಲರೂ ಹಿಂದಿದ್ದ ಕೋಚ್ ಗಾಡಿ (*Stage coach*)ಗಳ ಪ್ರಯಾಣಕ್ಕಿಂತಲೂ ಕ್ಷೇಮಕರ ವೆಂದು ತಿಳಿದು, ರೈಲುಗಾಡಿಗಳಲ್ಲೇ ಪ್ರಯಾಣಮಾಡತೊಡಗಿದರು. ವಿಕ್ಟೋರಿಯಾ ಚಕ್ರವರ್ತಿನಿಯು ೧೮೪೨ನೆಯ ಸಂವತ್ಸರದಲ್ಲಿ ತನ್ನ ವಿಂ ಡ್ಸರ್ ಅರಮನೆಯಿಂದ ಲಂಡನ್ ನಗರಕ್ಕೆ ರೈಲುಗಾಡಿಯ ಮೂಲಕ ಪ್ರಯಾ ಣಮಾಡಲಾರಂಭಿಸಿದಾಗಿನಿಂದಲಂತೂ,- ದುರಭಿಮಾನಿಗಳಾದ ಕೆಲಮಂದಿ ಶ್ರೀಮಂತರೂ-ಸಹ, ತಾವು ಬಡವರೊಂದಿಗೆ ಒಂದೇ ಸಮನಾಗಿ ರೈಲಿನಲ್ಲಿ ಕುಳಿತು ಪ್ರಯಾಣಮಾಡಬಹುದೇ, ಎಂಬ ತಮ್ಮ ಶ್ರೀಮದ್ಗಾಂಭೀರ್ಯ ವನ್ನು ಬದಿಗಿಟ್ಟು, ರೈಲುಮಾರ್ಗವನ್ನು ಉಪಯೋಗಿಸತೊಡಗಿದರು.

ಕ್ರಮಕ್ರಮವಾಗಿ ರೈಲುಮಾರ್ಗವು ದೇಶದಲ್ಲೆಲ್ಲ ಹರಡಿತು. ರೈಲ್ವೆ ಕಂಪೆನಿಯಲ್ಲಿ ಭಾಗ (*Share*) ತೆಗೆದುಕೊಳ್ಳುವುದು ಬಹು ಲಾಭಕರವಾದ ವ್ಯವಹಾರವೆಂದು ತೋರಿಬಂದು ದೊಡ್ಡವರೆನ್ನದೆ ಬಡವರೆನ್ನದೆ, ಶ್ರೀಮಂ ತನಿಂದ ಕೂಲಿಗಾರನವರೆಗೂ ಸಕಲರೂ ಅದರ 'ಷೇರು'ಗಳನ್ನು ಪಡೆಯ ತೊಡಗಿದರು. ಪ್ರತ್ಯಕ್ಷ ದುಡ್ಡನ್ನೇ ಬೆಳೆಯುತ್ತಿದ್ದ ಆ ಕಲ್ಪವೃಕ್ಷದಿಂದ ಸಂಪೂರ್ಣ ಪ್ರತಿಫಲವನ್ನು ಪಡೆಯಬೇಕೆಂದು ತಮ್ಮ ಸರ್ವಸ್ವವನ್ನೂ ಅದರ 'ಷೇರು'ಗಳಿಗಾಗಿ ಹಾಕಿ, ತಮ್ಮ ದುರಾಸೆಗೆ ಪ್ರತಿಫಲವಾಗಿ ಎಲ್ಲ ವನ್ನೂ ನೀಗಿಕೊಂಡು ನಿರ್ಗತಿಕರಾದವರೂ ಉಂಟು. ಈ ಸಂಪಾದನೆಯಲ್ಲಿ ಸತ್ಯ ಧರ್ಮ - ನ್ಯಾಯನೀತಿಗಳನ್ನೆಲ್ಲ ಬದಿಗೊತ್ತಿ, ಹಲವರು ವ್ಯವಹಾರ ನಡೆಸಿ, ಆ ಉದ್ಯೋಗದ ಹೆಸರನ್ನೂ ಕೆಡಿಸಿ, ತಮ್ಮ ಕೀರ್ತಿಯನ್ನೂ ಕಳಂಕಗೊಳಿಸಿಕೊಂಡರು. ಆದರೆ ನಮ್ಮ ಕಥಾನಾಯಕನು ಮಾತ್ರ ಅನ್ಯಾಯಮಾರ್ಗದಿಂದ, ತನ್ನ ಹೆಸರಿಗೆ ಕಳಂಕ ತರುವ ಅಂತಹ ಯಾವ ವ್ಯವಹಾರಕ್ಕೂ ಪ್ರವೇಶಿಸದೆ ಕೊನೆಯವರೆಗೂ ತನ್ನ ಸತ್ಯಸಂಧತೆಯನ್ನೂ ನಿರ್ಮಲ ಚರಿತ್ರೆಯನ್ನೂ ಕಾಪಾಡಿಕೊಂಡನು.

ಜಾರ್ಜ್ ಸ್ಟೀವೆನ್ಸನಿಂದ ತಯಾರಿಸಲ್ಪಟ್ಟ ಇಂಜನುಗಳ ಕೀರ್ತಿಯು ಹತ್ತಿರದ ದೂರದ ಎಲ್ಲಾ ಸ್ಥಳಗಳಿಗೂ ಹಬ್ಬಿತು. ಲಿವರ್ಪೂಲ್ ಮ್ಯಾಂಚೆಸ್ಟರು ರೈಲ್ವೇಯು ಪ್ರಾರಂಭವಾಗುವುದಕ್ಕೆ ಮುಂಚೆಯೇ ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಆತನಿಂದ ಇಂಜನುಗಳನ್ನು ಮಾತ್ರ ತರಿಸಿಕೊಂಡು ರೈಲುಮಾರ್ಗವನ್ನು ಸ್ಥಾಪಿಸಿಕೊಂಡಿದ್ದರು. ಒಂದೇ ಸಮನಾಗಿ ಇಪ್ಪತ್ತು ವರ್ಷಗಳಕಾಲ ಕೆಲಸಮಾಡಿದರೂ ಅವು ಕೆಡದೆ ಅತ್ಯುತ್ತಮ ರೀತಿಯಿಂದ ಇನ್ನೂ ಕೆಲಸಮಾಡುತ್ತಿವೆಯೆಂದು ಅಮೆರಿಕದವರು ಆತನ ಇಂಜನುಗಳ ಉತ್ಕೃಷ್ಟತೆಯನ್ನು ಹೊಗಳಿದರು. ಕಾರ್ಯಾಂತರವಾಗಿ ಇಂಗ್ಲಂಡಿಗೆ ಬಂದಿದ್ದ ಬೆಲ್ಜಿಯಂ ದೇಶದ ರಾಜನು, ರೈಲುಗಾಡಿಗಳ ಉಪಯುಕ್ತತೆಯನ್ನು ಕಂಡುಕೊಂಡು, ಅವುಗಳನ್ನು ತನ್ನ ದೇಶದಲ್ಲೂ ಸ್ಥಾಪಿಸಲಿಚ್ಛಿಸಿ, ೧೮೩೫ನೆಯ ಸಂ|ದಲ್ಲಿ ಜಾರ್ಜ್ ಸ್ಟೀವೆನ್ಸನನ್ನು ಸಲಹೆ ಕೇಳಲಿಕ್ಕಾಗಿ ತನ್ನ ದೇಶಕ್ಕೆ ಆಹ್ವಾನಿಸಿದನು ಆ ರಾಜಾಹ್ವಾನದಿಂದ ಬೆಲ್ಜಿಯಂ ದೇಶಕ್ಕೆ ಪ್ರಯಾಣಮಾಡಿದ ಆತನು, ಸಕಲ ವಿಷಯುಗಳಲ್ಲೂ ರಾಜನಿಗೆ ತೃಪ್ತಿಕರವಾದ ಸಲಹೆಗಳನ್ನಿತ್ತು ಆ ರಾಜನಿಂದ ಶ್ರೀಮಂತ ಪದವಿ (*Knight of the Order of Leopold*)ಯನ್ನು ಪಡೆದು ಗೌರವಿಸಲ್ಪಟ್ಟನು. ಇದಾದ ತರುವಾಯು ಆತನು ಮತ್ತೆರಡುಬಾರಿ ಆ ದೇಶವನ್ನು ಸಂದರ್ಶಿಸಿದನು. ಆ ಎರಡು ಸಂದರ್ಭಗಳಲ್ಲೂ ರಾಜನೂ, ಆ ದೇಶದ ಘನವಂತರೂ ಆತನನ್ನು ವಿಶೇಷ ರೀತಿಯಿಂದ ಗೌರವಿಸಿದರು. ಆತನ ಪ್ರತಿರೂಪವನ್ನು ತಯಾರಿಸಿಟ್ಟೂ, ಆತನ 'ರಾಕೆಟ್' ಎಂಬ ಯಂತ್ರವಿಶೇಷದ ಪ್ರತಿರೂಪವನ್ನು ತಯಾರಿಸಿಟ್ಟೂ, ಸಂತೋಷಕೂಟಗಳನ್ನೇರ್ಪಡಿಸಿ ಅಲ್ಲಿ ಅವುಗಳನ್ನು ಪ್ರದರ್ಶಿಸಿ ಆತನನ್ನು ಬಹುಮಾನಿಸಿದರು. ರಾಜನು ಆತನನ್ನು ತನ್ನೊಂದಿಗೆ ಭೋಜನಕ್ಕೆ ಆಹ್ವಾನಿಸಿ ಗೌರವಿಸಿದನು. ಸ್ಟೀವೆನ್ಸನನು ಆ ದೇಶದಲ್ಲಿ ಕಲ್ಲಿದ್ದಲುಗಣಿಗಳನ್ನು ಸ್ಥಾಪಿಸಲು ಇರುವ ವಿಸ್ತಾರವಾದ ಅನುಕೂಲತೆಗಳನ್ನೆಲ್ಲ ಅವರಿಗೆ ತೋರಿಸಿಕೊಟ್ಟು ಅವರಿಂದ ವಿಶೇಷವಾಗಿ ಸನ್ಮಾನಿತನಾದನು. ತರುವಾಯ ಆತನು ಸ್ಪೇನ ದೇಶವನ್ನೂ ಸಂದರ್ಶಿಸಿ, ಅಲ್ಲಿ ಪ್ರಾರಂಭಿಸಲಿದ್ದ ರೈಲ್ವೆ ಕಾಮಗಾರಿಗೆ ಆವಶ್ಯಕವಾದ ಹಲವು ಸಲಹೆಗಳನ್ನು ಕೊಟ್ಟನು. ಈ ಎರಡು ದೇಶಗಳಲ್ಲಿ ಪ್ರಾರಂಭಿಸಲ್ಪಟ್ಟ

ಈ ನೂತನ ಯಾನಸಾಧನದ ಉಪಯೋಗವು ಕ್ರಮಕ್ರಮವಾಗಿ ಯೂರೋಪು ಖಂಡದಲ್ಲೆಲ್ಲ ಹಬ್ಬಿತು.

ಹೀಗೆ ತನ್ನ ದೇಶದ ಸೌಭಾಗ್ಯವನ್ನೂ, ಒಟ್ಟಿನಲ್ಲಿ ಲೋಕದ ಸೌಭಾಗ್ಯವನ್ನೂ ಒಂದು ಬಗೆಯಿಂದ ಹೆಚ್ಚಿಸಲು ತನ್ನ ಬುದ್ಧಿಶಕ್ತಿ ಕ್ರಿಯಾಶಕ್ತಿಗಳನ್ನು ವ್ಯಯಮಾಡಿ ಪ್ರಯತ್ನಿಸಿ, ಪ್ರಶಸ್ತಿಯನ್ನು ಪಡೆದ ಜಾರ್ಜ್ ಸ್ಟೆಫೆನ್ಸನ್ನನು, ತನ್ನ ನಿರಂತರ ಪರಿಶ್ರಮ, ಅನುಪಮ ಸಾಹಸ, ಸತ್ಯಸಂಧತೆ ಮುಂತಾದುವುಗಳ ಫಲವಾಗಿ ಅಪಾರ ಸಂಪತ್ತನ್ನೂ ಗಳಿಸಿದನು. ೧೮೩೮—೪೦ರ ವೇಳೆಗೆ ಆತನು ಆ ಪ್ರಾಂತದಲ್ಲೇ ವಿಸ್ತಾರವಾದ ಕಲ್ಲಿದ್ದಲು ಗಣಿಗಳಿದ್ದ ಪ್ರದೇಶವನ್ನು ಸ್ವಂತಕ್ಕಾಗಿ ಬೆಲೆಮಾಡಿ, ಅಲ್ಲಿ ಸಾವಿರಾರು ಮಂದಿ ಕೆಲಸಗಾರರನ್ನಿಟ್ಟು ಅವರಿಂದ ಕೆಲಸಮಾಡಿಸುತ್ತ, ವಿಶೇಷವಾದ ತನ್ನ ಅನುಭವದಿಂದ ಹಲವುಮಂದಿ ತರುಣರನ್ನು ತಯಾರಿಸುತ್ತ ತನ್ನ ಕೊನೆಗಾಲವನ್ನು ಕಳೆಯಲು ನಿಶ್ಚಯಿಸಿದನು. ಚಿಕ್ಕಂದಿನಲ್ಲಿ ವಿದ್ಯೆಯಿಲ್ಲದ ಪ್ರಯುಕ್ತ ತಾನು ಪಟ್ಟ ನಷ್ಟವನ್ನು ಚೆನ್ನಾಗಿ ತಿಳಿದವನಾದುದರಿಂದ ತನ್ನ ಪೋಷಣೆಗೆ ಸಂಬಂಧಿಸಿದ ಕೂಲಿಗಳ - ಅಧಿಕಾರಿಗಳ - ಉದ್ಯೋಗಸ್ಥರ ಮಕ್ಕಳಿಗೆ ಉಚಿತವಾದ ವಿದ್ಯಾಭ್ಯಾಸವು ದೊರೆಯಬೇಕೆಂದು ಆತನು ಹಲವು ಅನುಕೂಲತೆಗಳನ್ನು ಕಲ್ಪಿಸಿದನು. ಚಿಕ್ಕಂದಿನಿಂದ ತಾನು ಪಟ್ಟ ಕಷ್ಟಗಳನ್ನೆಲ್ಲ ಕಥೆಗಳನ್ನಾಗಿ ಹೇಳುತ್ತ ತರುಣರಿಗೆ-ಎಂತಹ ಕಷ್ಟದಲ್ಲೂ ಎದೆಗುಂದದೆ, ಧೈರ್ಯದಿಂದ ಮುಂದರಿಸಬೇಕೆಂದೂ, ನಿರಂತರ ಪರಿಶ್ರಮ ಮಾಡುವ ಅಭ್ಯಾಸವೇ ಜಯಪ್ರಾಪ್ತಿಯ ಮೂಲಮಂತ್ರವೆಂದೂ ಸಾರಿದನು. ಕೇವಲ ಬಡತನದ - ಕೂಲಿಯ ಸ್ಥಿತಿಯಲ್ಲಿದ್ದು ಸ್ವಪರಿಶ್ರಮದಿಂದಲೇ ಅತುಳೈಶ್ವರ್ಯವನ್ನೂ ರಾಜಪೂಜ್ಯತೆಯನ್ನೂ ಪಡೆದವನಾದುದರಿಂದ ಆತನಿಗೆ ಸುಖದ ನಶ್ವರತೆಯೂ, ಲೋಕದ ಕಷ್ಟದುಃಖಗಳ ಸಂಪೂರ್ಣಾನುಭವವೂ ಚೆನ್ನಾಗಿ ತಿಳಿವಳಿಕೆಗೆ ಬಂದು, ಆತನು ಕಲಿತ ಪಂಡಿತನೂ - ಓದಿದ ವಿದ್ಯಾವಂತನೂ ಆಗಿರದಿದ್ದರೂ, ಮಿಕ್ಕ ಎಲ್ಲಾ ವಿಷಯಗಳಲ್ಲೂ 'ಕೆಲವಂ ಬಲ್ಲವರಿಂದ ಕಲ್ತು - ಎಂಬ ನಾಣ್ನುಡಿಯಂತೆ ಸರ್ವಜ್ಞನಾಗಿದ್ದನು.

೧೮೪೮ನೆಯ ಸಂವತ್ಸರದವೇಳೆಗೆ ಜಾರ್ಜ್ ಸ್ಟೆಫೆನ್ಸನ್ನಿಗೆ ಅರುವ

ತ್ತೇಳು ವರ್ಷಗಳಾದುವು. ಹಿಂದೆ ಸ್ಪೇನ್ ದೇಶಕ್ಕೆ ಹೋಗಿ ಬಂದಾಗಿನಿಂದಲೂ ಆತನ ದೇಹಸ್ಥಿತಿಯು ಕೆಟ್ಟು ಆತನು ರೋಗಗ್ರಸ್ತನಾಗಿದ್ದನು. ಆದೇ ರೋಗವೇ ಪ್ರಬಲವಾಗಿ ಆತನು ೧೮೪೮ನೆಯ ಆಗಸ್ಟು ೧೨ನೆಯ ದಿನ ಪರಲೋಕಗತನಾದನು.

ಛೆಸ್ಟರ್‌ಫೀಲ್ಡ್ ಪಟ್ಟಣದ ಪ್ರಜೆಗಳು, ಆತನು ಮೃತನಾದ ದಿನ ಆತನ ಗೌರವಕ್ಕಾಗಿ ಉದ್ಯೋಗ ವ್ಯವಹಾರಗಳನ್ನೆಲ್ಲ ಬದಿಗಿಟ್ಟು ಆತನ ಪ್ರೇತಯಾತ್ರೆಯಲ್ಲಿ ಸೇರಿದರು. ಆ ಊರಿನ ಟ್ರನಿಟಿ ಚರ್ಚ್ ಎಂಬ ಸ್ಥಳದಲ್ಲಿ ಆತನ ದೇಹವನ್ನು ಭೂಸ್ಥಾಪನೆಮಾಡಿದರು. ಆತನ ಆಜನ್ಮ ಪರಿಶ್ರಮವನ್ನು ತಲೆತಲಾಂತರದವರಿಗೂ ಜ್ಞಾಪಕಕ್ಕೆ ತಂದುಕೊಡುವಂತೆ, ಲಿವರ್ಪೂಲ್ ಮತ್ತು ಲಂಡನ್‌ನಗರಗಳಲ್ಲಿ ಆತನ ಶಿಲಾಪ್ರತಿಮೆಗಳನ್ನು ಸ್ಥಾಪಿಸಿ, ಆತನ ಶಿಷ್ಯವರ್ಗದವರೂ, ದೇಶೀಯರೂ, ಆತನಲ್ಲಿದ್ದ ತಮ್ಮ ಪ್ರೀತಿ ವಿಶ್ವಾಸಗಳನ್ನು ವ್ಯಕ್ತಗೊಳಿಸಿದರು.

# ಉ ಪ ಸ ಂ ಹಾ ರ

**ಹಬೆಯಂತ್ರದ ಕೈಗಾರಿಕೆಗೆ *ಜಾರ್ಜ್ ಸ್ಟೀವೆನ್‌ಸನ್‌ನು ಜನಕನೆಂದರೆ ಅದರಲ್ಲಿ ಅತಿಶಯೋಕ್ತಿಯಿಲ್ಲ.** ಆತನ ಜೀವಿತಕಾಲದಲ್ಲೇ ಸುಪ್ರಸಿದ್ಧರೆನ್ನಿಸಿದ ಅನೇಕರು, ಈ ಮಾತನ್ನು ಆತನ ಮುಖತಃ ನುಡಿದು ಆತನನ್ನು ಗೌರವಿಸಿದ್ದಾರೆ. ಆದರೆ ಆತನು ಬಿರುದು ಬಹುಮತಿಗಳನ್ನಾಗಲೀ ಅಧಿಕಾರ ಆಡಂಬರಗಳನ್ನಾಗಲೀ ಕೋರದ ನಿಗರ್ವಿ ಮನುಷ್ಯನಾಗಿಯೇ ಕೊನೆಯವರೆಗೂ ಜೀವಿಸಿದನು.

ದೃಢಪ್ರಯತ್ನವೇ ಆತನ ಜೀವನ ಸರ್ವಸ್ವ. ಎಂತಹ ಕಷ್ಟದಲ್ಲೂ ಎದೆಗುಂದದ ಧೈರ್ಯವೇರುವಾತನು. ತಾಳ್ಮೆಯಿಂದ ಪರಿಶ್ರಮ ಮಾಡುತ್ತಾ ಹೋಗುವುದೇ ಜಯಪ್ರಾಪ್ತಿಗೆ ಮೂಲಮಂತ್ರವೆಂದು ಆತನು ತಿಳಿದಿ.

---

**George Stephenson* ಎಂಬೀ ಅಕ್ಷರಸಂಯೋಜನವನ್ನು ಜಾರ್ಜ್ ಸ್ಟೀವೆನ್‌ಸನ್ ಎಂದು ಉಚ್ಚರಿಸುವ ಪದ್ಧತಿಯೂ ಉಂಟು.

ದ್ದುದಲ್ಲದೆ,-ಆತನ ವಿಜಯ ರಹಸ್ಯವೇನೆಂದು ಕೇಳಿದವರಿಗೆಲ್ಲ ಅದನ್ನೇ ಹೇಳುತ್ತಿದ್ದನು. ಲೆಕ್ಕಾಚಾರದ ವಿಷಯದಲ್ಲೂ ಕಾಲವ್ಯಯದ ವಿಷಯ ದಲ್ಲೂ ಆತನೂ ಅತ್ಯಂತ ಜಾಗರೂಕನಾಗಿದ್ದನು. ಚಿಕ್ಕಂದಿನಲ್ಲಿ ವಿದ್ಯಾಭ್ಯಾಸಕ್ಕೆ ಅನುಕೂಲವು ದೊರೆಯಲಿಲ್ಲವಾದರೂ ಆತನು ಸ್ವಪರಿಶ್ರಮದ ಫಲವಾಗಿ ರಾಜಾಧಿರಾಜರಿಂದ ಗೌರವಿಸಲ್ಪಟ್ಟನು ಸತ್ಯಸಂಧತೆಯು ಆತನ ಜೀವನವೇ ಎಂದು ಹೇಳಬಹುದು. ತಾನು ಕೈಕೊಂಡು ನಿರ್ವಹಿಸಿದ ಕೆಲಸದಲ್ಲಿ ಯಾವ ವಿಧವಾದ ದೋಷವಾದರೂ ಕಂಡುಬಂದರೆ, - ಏನಾದರೂ ಲೋಪ ವುಂಟಾಯಿತೆಂದು ಹೊರಪಟ್ಟರೆ, ಅದಕ್ಕಾಗಿ ನನ್ನ ತಲೆಯನ್ನೇ ಪಣವಾಗಿಡುವೆನು ಎಂಬುದು ಆತನ ಪ್ರತಿಜ್ಞೆಯಾಗಿದ್ದಿತು. ತನ್ನ ಕರ್ತವ್ಯದ ವಿಷಯದಲ್ಲಿ ಅಷ್ಟುಮಟ್ಟಿಗೆ ಮನಸ್ಸಾಕ್ಷಿಗನುಸಾರವಾಗಿ ನಡೆಯುತ್ತಿದ್ದ ಆತನು ತನ್ನ ಜೀವಿತವನ್ನು ಲೋಕಕ್ಕೆ ಆದರ್ಶವನ್ನಾಗಿಸಿಬಿಟ್ಟುದು ಅತಿಶಯವಲ್ಲ.

'ಗುಣಾಃ ಪೂಜಾಸ್ಥಾನಂಗುಣಿಷು ನ ಚ ಲಿಂಗಂ ನ ಚ ವಯಃ'ಎಂಬೀ ಕವಿವಾಕ್ಯದೊಂದಿಗೆ,-'ಗುಣಿಷು ನ ಚ ಕುಲಃ ನ ಚ ದೇಶಃ' ಎಂಬೀ ಮಾತುಗಳನ್ನೂ ಸೇರಿಸಿದರೆ ಅದು ದೋಷವಾಗಲಾರದು. ಮಹನೀಯವ್ಯಕ್ತಿಗಳು ಮಾಡುವ- ಲೋಕವನ್ನೇ ವ್ಯಾಪಿಸುವ ಇಂತಹ ಕಾರ್ಯಗಳಿಗೆಲ್ಲ ಕಾಲ ರೂಪಿಯೂ ಸರ್ವವ್ಯಾಪಿಯೂ ಆದ ಭಗವಂತನ ಬೆಂಬಲವಿಲ್ಲದಿರಲು ಸಾಧ್ಯವಿಲ್ಲ - ಹಾಗಿದ್ದರೆ- **ತೇನವಿನಾತೃಣಮಪಿ ನಚಲತಿ** ಎಂಬ ಶ್ರುತಿವಾಕ್ಯಕ್ಕೆ ಅರ್ಥವಿರಲಾರದು. ಹೀಗೆ ಕಾಲಾನುಸಾರವಾಗಿ ಉದ್ಭವಿಸಿ, ತಮ್ಮ ಮನಸ್ಸಾಕ್ಷಿಗೆ ವಿರೋಧವಿಲ್ಲದೆ ನಡೆದು, ತಮ್ಮ ಅಗಾಧ ಪರಿಶ್ರಮದಿಂದ ಜಗತ್ತಿನ ರೂಪವನ್ನೇ ಬದಲುಗೊಳಿಸುವಂತಹ ಇಂತಹ ಮಹನೀಯರ ಜೀವನ ರಹಸ್ಯವು ನಮ್ಮ ತರುಣ ಜನಾಂಗಕ್ಕೆ ಆದರ್ಶವಾಗಿದ್ದು ಅವರೂ, ಸತ್ಯಸಂಧತೆ, ಕಾರ್ಯದಕ್ಷತೆ, ನಿರಂತರ ಪರಿಶ್ರಮ, ದೀರ್ಘಪ್ರಯತ್ನ ಮುಂತಾದುವುಗಳಲ್ಲಿ ನಟ್ಟ ಮನಸ್ಸುಳ್ಳವರಾಗಿ ಏಳಿಗೆಗೆ ಬರಲು ಭಗವದನುಗ್ರಹವಾಗಲಿ.—

**ತಥಾಸ್ತು.**

ಸುಬೋಧ ಮುದ್ರಣಾಲಯ, ಬೆಂಗಳೂರು ನಗರ.